ಸೋಮವಾರ, ಮಾರ್ಚ್ 18, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಸಪ್ತಾಹ
ಮುಂಬೈನಲ್ಲಿ ನಡೆದ ಫ್ಯಾಷನ್ ಸಪ್ತಾಹದಲ್ಲಿ ಬಾಲಿವುಡ್ ನಟಿ ಜಾಹ್ನವಿ ಕಪೂರ್ ಪಾಲ್ಗೊಂಡಿದ್ದರು



ಚಿತ್ರದುರ್ಗಕ್ಕೆ ಬಿ.ಎನ್.ಚಂದ್ರಪ್ಪ, ಬಿ.ತಿಪ್ಪೇಸ್ವಾಮಿ ಪಟ್ಟು • ನಾಯಕರಿಗೆ ತಲೆನೋವಾದ ಬಾಗಲಕೋಟೆ, ಕೋಲಾರ

'ಕೈ' ಟಿಕೆಟ್‌ಗೆ ಕೆಲವೆಡೆ ತೀವ್ರ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ, ಬಾಗಲಕೋಟೆ, ಕೋಲಾರ ಸೇರಿದಂತೆ ಟಿಕೆಟ್ ಘೋಷಣೆಯಾಗದ ಕೆಲವು ಕ್ಷೇತ್ರಗಳಲ್ಲಿ 'ಕೈ' ಟಿಕೆಟ್‌ಗೆ ತೀವ್ರ ಪೈಪೋಟಿ ಏರ್ಪಟ್ಟಿದ್ದು, ಅಭ್ಯರ್ಥಿ ಆಯ್ಕೆ ಕಾಂಗ್ರೆಸ್ ನಾಯಕರಿಗೆ ಕಗ್ಗಂಟಾಗಿದೆ.

ಏಳು ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರನ್ನು ಮಾರ್ಚ್ 8ರಂದು ಕಾಂಗ್ರೆಸ್ ಘೋಷಿಸಿದೆ. ಉಳಿದ 21 ಕ್ಷೇತ್ರಗಳಿಗೆ ಟಿಕೆಟ್ ಘೋಷಣೆ ಬಾಕಿಯಿದೆ. ಈ ಪೈಕಿ, ಬಹುತೇಕ ಕ್ಷೇತ್ರಗಳಿಗೆ ಪಕ್ಷದ ಸ್ಕ್ರೀನಿಂಗ್ ಸಮಿತಿ ಒಬ್ಬರ ಹೆಸರು ಅಂತಿಮಗೊಳಿಸಿ ಕೇಂದ್ರ ಚುನಾವಣಾ ಸಮಿತಿಗೆ (ಸಿಇಸಿ) ಶಿಫಾರಸು ಮಾಡಿದೆ. ಆ ಬೆನ್ನಲ್ಲೆ, ಟಿಕೆಟ್ ಗಿಟ್ಟಿಸಿಕೊಳ್ಳಲು ಇತರ ಆಕಾಂಕ್ಷಿಗಳು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

ಚಿತ್ರದುರ್ಗ (ಪರಿಶಿಷ್ಟ ಜಾತಿ ಮೀಸಲು) ಕ್ಷೇತ್ರದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ ಮತ್ತು ಬಿ. ತಿಪ್ಪೇಸ್ವಾಮಿ ಪೈಕಿ ಯಾರಿಗೆ ಮಣೆ ಹಾಕಿದರೆ ಗೆಲುವು ಸಾಧ್ಯ ಎಂಬ ಗೊಂದಲ ಕಾಂಗ್ರೆಸ್ ನಾಯಕರನ್ನು ಕಾಡತೊಡಗಿದೆ. ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಚಿವ ಎಚ್. ಆಂಜನೇಯ ಸೇರಿದಂತೆ ಕೆಲವು ಕಾಂಗ್ರೆಸ್ ನಾಯಕರು ಚಂದ್ರಪ್ಪ ಅವರಿಗೆ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಿದ್ದಾರೆ. ಆದರೆ, ಕ್ಷೇತ್ರ ವ್ಯಾಪ್ತಿಯ ಶಾಸಕರು, ಬಹುತೇಕ ಕಾಂಗ್ರೆಸ್ ನಾಯಕರು ತಿಪ್ಪೇಸ್ವಾಮಿ ಬೆನ್ನಿಗೆ ನಿಂತಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾದ ಮುನಿಯಪ್ಪ ಅವರು ಚಂದ್ರಪ್ಪ ಪರ ಲಾಬಿ ಮಾಡಿದ್ದಾರೆ. ಮೊದಲ ಪಟ್ಟಿಯಲ್ಲಿಯೇ ಚಿತ್ರದುರ್ಗ ಕ್ಷೇತ್ರಕ್ಕೆ ಅಭ್ಯರ್ಥಿ ಹೆಸರು ಪ್ರಕಟಿಸುವ ನಿರೀಕ್ಷೆ ಸ್ಥಳೀಯ ನಾಯಕರಲ್ಲಿ ಇತ್ತು. ಆದರೆ, ಟಿಕೆಟ್ ಘೋಷಣೆ ಆಗದೇ ಇರುವುದರಿಂದ ಮತ್ತು ನಂತರ ದಿನಗಳಲ್ಲಿ ನಡೆದ ಕೆಲವು ಬೆಳವಣಿಗೆಗಳು ಟಿಕೆಟ್ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿದೆ.

ಮೊದಲ ಪಟ್ಟಿಯಲ್ಲಿ ತನಗೆ ಟಿಕೆಟ್ ಘೋಷಿಸದ ಹಿನ್ನೆಲೆಯಲ್ಲಿ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಚಂದ್ರಪ್ಪ ಮಾತುಕತೆ ನಡೆಸಿದ್ದಾರೆ. 'ನನ್ನ ಜಾತಿ ಪ್ರಮಾಣ ಪತ್ರವನ್ನು ಕೆಲವು ಟಿಕೆಟ್ ಆಕಾಂಕ್ಷಿಗಳು ನಕಲಿ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಿಪ್ಪೇಸ್ವಾಮಿ ಅವರಿಗೆ ಟಿಕೆಟ್ ನೀಡುವಂತೆ ಶಾಸಕರಾದ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮುರು), ಬಿ.ಜಿ. ಗೋವಿಂದಪ್ಪ (ಹೊಸದುರ್ಗ), ಸಚಿವ ಡಿ. ಸುಧಾಕರ್ (ಹಿರಿಯೂರು), ಕೆ.ಸಿ. ವೀರೇಂದ್ರ ಪಪ್ಪಿ (ಚಿತ್ರದುರ್ಗ), ಎಚ್.ವಿ. ವೆಂಕಟೇಶ್ (ಪಾವಗಡ), ಸಚಿವ ಆರ್. ಬಿ. ತಿಮ್ಮಾಪುರ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಘಟಕದ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಕೂಡಾ ತಿಪ್ಪೇಸ್ವಾಮಿಗೇ ಟಿಕೆಟ್ ನೀಡುವಂತೆ ಆಗ್ರಹಿಸಿದ್ದಾರೆ.

'ಪರಿಶಿಷ್ಟ ಜಾತಿ ಮಾದಿಗ (ಎಡಗೈ) ಸಮುದಾಯಕ್ಕೆ ಸೇರಿರುವ ತಿಪ್ಪೇಸ್ವಾಮಿ ಅವರು 2009ರ ಚುನಾವಣೆಯಲ್ಲಿ ಪಕ್ಷದಿಂದ ಸ್ಪರ್ಧಿಸಿ ಎರಡನೇ ಸ್ಥಾನ ಪಡೆದಿದ್ದಾರೆ. ಸ್ಥಳೀಯರಾಗಿರುವ ಅವರು ಕ್ಷೇತ್ರ ವ್ಯಾಪ್ತಿಯಲ್ಲಿ ಹೆಚ್ಚಿನ ಜನಬೆಂಬಲ ಹೊಂದಿದ್ದಾರೆ. ಹೀಗಾಗಿ ಅವರಿಗೆ ಟಿಕೆಟ್ ನೀಡಬೇಕು' ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ. ತಿಪ್ಪೇಸ್ವಾಮಿ ಅವರನ್ನು ಹೊರತುಪಡಿಸಿ ಇನ್ನೊಬ್ಬರಿಗೆ ಟಿಕೆಟ್ ನೀಡುವುದಾದರೆ ಭೋವಿ (ಪರಿಶಿಷ್ಟ ಜಾತಿ) ಸಮುದಾಯದ ಎಚ್.ಪಿ.ಕುಮಾರಸ್ವಾಮಿ ಅವರನ್ನು ಪರಿಗಣಿಸಲು ಶಾಸಕ ಎಚ್. ವಿ.ವೆಂಕಟೇಶ್ ಮನವಿ ಮಾಡಿದ್ದಾರೆ.

2009 ರಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ ತಿಪ್ಪೇಸ್ವಾಮಿ ಅವರು ಪರಾಭವಗೊಂಡಿದ್ದರು. 2014ರ ಚುನಾವಣೆಯಲ್ಲಿ ಟಿಕೆಟ್ ಗಿಟ್ಟಿಸಿದ್ದ ಬಿ.ಎನ್.ಚಂದ್ರಪ್ಪ ಚುನಾಯಿತರಾಗಿದ್ದರು. ಹೀಗಾಗಿ, 2019ರಲ್ಲಿ ಮತ್ತೆ ಚಂದ್ರಪ್ಪ ಅವರಿಗೇ ಪಕ್ಷ ಟಿಕೆಟ್ ನೀಡಿತ್ತು. ಆಗ ಟಿಕೆಟ್ ಸಿಗದಿರುವುದಕ್ಕೆ ಬೇಸರಗೊಂಡಿದ್ದ ತಿಪ್ಪೇಸ್ವಾಮಿ ಅವರು ಪಕ್ಷದಿಂದ ದೂರವಾಗಿದ್ದರು. 2023ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಮತ್ತೆ ಸಕ್ರಿಯರಾಗಿದ್ದರು. ಈ ಬಾರಿ ಪಕ್ಷ ನಡೆಸಿದ ಆಂತರಿಕ ಸಮೀಕ್ಷೆಯಲ್ಲಿ ಚಂದ್ರಪ್ಪ, ತಿಪ್ಪೇಸ್ವಾಮಿ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ ನೇರ್ಲಗುಂಟೆ ರಾಮಪ್ಪ ಅವರ ಹೆಸರು ಮುನ್ನೆಲೆಯಲ್ಲಿ ಬಂದಿತ್ತು. ಹೀಗಾಗಿ ಈ ಮೂವರ ಹೆಸರು ಶಿಫಾರಸು ಮಾಡಲಾಗಿತ್ತು ಎಂದು ಪಕ್ಷದ ಮೂಲಗಳು ಹೇಳಿವೆ.

ಕೋಲಾರ ಮತ್ತು ಬಾಗಲಕೋಟೆ ಟಿಕೆಟ್ ಹಂಚಿಕೆ ಕೂಡಾ ಕಾಂಗ್ರೆಸ್ ನಾಯಕರಿಗೆ ತಲೆನೋವಾಗಿದೆ. ಕೋಲಾರದಲ್ಲಿ ಸಚಿವ ಕೆ.ಎಚ್. ಮುನಿಯಪ್ಪ ಮತ್ತು ಮಾಜಿ ವಿಧಾನ ಸಭಾಧ್ಯಕ್ಷ ರಮೇಶ್‌ಕುಮಾರ್ ನಡುವಿನ ಬಣ ರಾಜಕೀಯದಿಂದ ಟಿಕೆಟ್ ಅಂತಿಮಗೊಳಿಸಲು ನಾಯಕರಿಗೆ ಕಷ್ಟವಾಗಿದೆ. ಈ ಬಾರಿ ದಲಿತ ಎಡಗೈ ಸಮುದಾಯದವರಿಗೆ ಟಿಕೆಟ್ ನೀಡಬೇಕೆಂದು ಮುನಿಯಪ್ಪ ಪಟ್ಟು ಹಿಡಿದಿದ್ದಾರೆ. ಆದರೆ ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ದಲಿತ ಬಲಗೈ ಸಮುದಾಯಕ್ಕೆ ಈಬಾರಿ ಟಿಕೆಟ್ ನೀಡಬೇಕು. ಹೀಗಾಗಿ, ಬಲಗೈ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ರಮೇಶ್‌ಕುಮಾರ್ ಬಣ ಆಗ್ರಹಿಸಿದೆ. ಎಲ್. ಹನುಮಂತಯ್ಯ ಅವರಿಗೆ ನೀಡುವಂತೆ ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್. ಬಿ. ತಿಮ್ಮಾಪುರ ಆಗ್ರಹಿಸಿದ್ದಾರೆ. ಬಲಗೈ ಸಮುದಾಯದಿಂದ ಸಿ.ಎಂ ಮುನಿಯಪ್ಪ, ಡಾ.ಮುದ್ದುಗಂಗಾಧರ್, ವೆಂಕಟಪತೆಪ್ಪ, ಸಂಸಗಿರಿ ಮುನಿರಾಜು ಹೆಸರಿದೆ.

ಬಾಗಲಕೋಟೆ ಟಿಕೆಟ್‌ಗೆ ಮಾಜಿ ಶಾಸಕ ಆನಂದ ನ್ಯಾಮಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಮಾಜಿ ಸಂಸದ ಅಜಯಕುಮಾರ ಸರನಾಯಕ ಮತ್ತು ಸಚಿವ ಶಿವಾನಂದ ಪಾಟೀಲರ ಪುತ್ರಿ ಸಂಯುಕ್ತಾ ಪಾಟೀಲ ನಡುವೆ ಪೈಪೋಟಿ ಉಂಟಾಗಿದೆ.

ಹೈಕಮಾಂಡ್‌ನ ಕೆಲವು ನಾಯಕರು ಆನಂದ ನ್ಯಾಮಗೌಡ ಅವರಿಗೆ ಟಿಕೆಟ್ ನೀಡಲು ಒಲವು ಹೊಂದಿದ್ದಾರೆ. ಪತ್ನಿಗೆ ಟಿಕೆಟ್ ನೀಡಲು ಶಾಸಕ ವಿಜಯಾನಂದ ಕಾಶಪ್ಪನವರ ಒತ್ತಡ ಹೇರುತ್ತಿದ್ದಾರೆ. ಪುತ್ರಿಗೆ ಟಿಕೆಟ್ ನೀಡಿದರೆ ಸ್ಪರ್ಧೆಗೆ ಸಿದ್ಧವೆಂದು ಶಿವಾನಂದ ಪಾಟೀಲ ಹೇಳಿದ್ದಾರೆ. ಹೀಗಾಗಿ, ಬಾಗಲಕೋಟೆ ಕ್ಷೇತ್ರದಲ್ಲಿ ಟಿಕೆಟ್ ಯಾರಿಗೆ ಎಂಬ ಕುತೂಹಲ ಮೂಡಿದೆ.

ಎರಡನೇ ಪಟ್ಟಿ 20ರಂದು ಸಾಧ್ಯತೆ: ಡಿ.ಕೆ. ಶಿವಕುಮಾರ್

ಬೆಂಗಳೂರು: 'ಇದೇ 19ರಂದು ದೆಹಲಿಯಲ್ಲಿ ಪಕ್ಷದ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಸಭೆ ನಡೆಯಲಿದೆ. ಅಭ್ಯರ್ಥಿಗಳ ಎರಡನೇ ಪಟ್ಟಿ 20ರಂದು ಅಂತಿಮ ಆಗಬಹುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೋದಿಗೆ ಭಯ: ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಂಡರೆ ಭಯ. ಹೀಗಾಗಿ ಖರ್ಗೆಯವರ ಕ್ಷೇತ್ರವಾದ ಕಲಬುರಗಿಯಿಂದ ಮೋದಿ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ' ಎಂದರು.

'ಕಲಬುರಗಿ ಸೇರಿ ರಾಜ್ಯದ 20 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ' ಎಂದೂ ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಗ್ಯಾರಂಟಿ' ಸಮಿತಿ ಸದಸ್ಯರ ಸಭೆ: 'ತಾಲ್ಲೂಕು, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರ ಸಭೆ ಇದೇ 21ರಂದು ನಡೆಸಲಿದ್ದು, ಆ ಎಲ್ಲರಿಗೂ ಚುನಾವಣೆ ಜವಾಬ್ದಾರಿ ನೀಡಲಾಗುವುದು' ಎಂದೂ ತಿಳಿಸಿದರು.

ಮುಖ್ಯಾಂಶಗಳು

- 21 ಕ್ಷೇತ್ರಗಳಿಗೆ ಟಿಕೆಟ್ ಘೋಷಣೆ ಬಾಕಿ
- ಅಭ್ಯರ್ಥಿ ಆಯ್ಕೆಯಲ್ಲಿ ಒಮ್ಮತ ಮೂಡಿಸುವುದೇ ಸವಾಲು
- ಬಹುತೇಕ ಕ್ಷೇತ್ರಗಳಿಗೆ ಒಬ್ಬರ ಹೆಸರು ಅಂತಿಮ

'ಉತ್ತರ'ದಿಂದ ಪ್ರಿಯಕೃಷ್ಣಗೆ ಮಣೆ?

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಗೋವಿಂದರಾಜನಗರ ಕ್ಷೇತ್ರ ಶಾಸಕ ಪ್ರಿಯಕೃಷ್ಣ ಅವರನ್ನೇ ಕಣಕ್ಕಿಳಿಸಲು ರಾಜ್ಯ ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

ಈ ಕ್ಷೇತ್ರದಿಂದ ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಹಾಲಿ ಸಂಸದೆ ಶೋಭಾ ಕರಂದ್ಲಾಜೆ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ. ಪ್ರಿಯಕೃಷ್ಣ ಅವರನ್ನು ಕಣಕ್ಕಿಳಿಸಿದರೆ ಶೋಭಾ ಅವರಿಗೆ ಪ್ರಬಲ ಪೈಪೋಟಿ ನೀಡಲು ಸಾಧ್ಯ. ಹೀಗಾಗಿ ಅವರ ಮನವೊಲಿಸಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

ಕಾಂಗ್ರೆಸ್ ಕಡೆ ಮುಖ ಮಾಡಿರುವ ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರು ಡಿ.ಕೆ. ಶಿವಕುಮಾರ್ ಪರವಾಗಿ ಪ್ರಿಯಕೃಷ್ಣ ಅವರನ್ನು ಭೇಟಿ ಮಾಡಿ ಮನವೊಲಿಸಲು ಯತ್ನಿಸಿದ್ದಾರೆ. ಅಲ್ಲದೆ, ಪ್ರಿಯಕೃಷ್ಣ ಅವರ ತಂದೆ, ವಿಜಯನಗರ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಜೊತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಚರ್ಚೆ ನಡೆಸಿದ್ದಾರೆ. ಪ್ರಿಯಕೃಷ್ಣ ಸ್ಪರ್ಧಿಸಿದರೆ ಗೆಲ್ಲಿಸಿಕೊಂಡು ಬರುವುದಾಗಿ ಸಚಿವ ಕೃಷ್ಣ ಬೈರೇಗೌಡ ಕೂಡಾ ಹೇಳಿದ್ದಾರೆ. ಪಕ್ಷದ ನಾಯಕರ ಒತ್ತಡದ ಕಾರಣಕ್ಕೆ ಸ್ಪರ್ಧಿಸಲು ಪ್ರಿಯಕೃಷ್ಣ ಮುಂದಾಗಿದ್ದಾರೆ ಎಂದು ಮೂಲಗಳು ಹೇಳಿವೆ.

'ಕೇಂದ್ರ'ದಿಂದ ಮನ್ಸೂರ್ ಅಥವಾ ನಜೀರ್?: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಕ್ಕೆ ಕೇಂದ್ರದ ಮಾಜಿ ಸಚಿವ ರೆಹಮಾನ್ ಖಾನ್ ಪುತ್ರ ಮನ್ಸೂರ್ ಅಲಿಖಾನ್ ಅಥವಾ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮ್ಮದ್ ಪೈಕಿ ಒಬ್ಬರಿಗೆ ಟಿಕೆಟ್ ನೀಡಲು ಚರ್ಚೆ ನಡೆದಿದೆ. ಇದುವರೆಗೆ ಮನ್ಸೂರ್ ಅಲಿಖಾನ್ ಹೆಸರು ಮಾತ್ರ ಮುಂಚೂಣಿಯಲ್ಲಿತ್ತು. ಇದೀಗ ಚುನಾವಣೆಗೆ ಸ್ಪರ್ಧಿಸಲು ಸಿದ್ಧವಾಗಿರುವಂತೆ ನಜೀರ್ ಅವರಿಗೂ ಸೂಚನೆ ನೀಡಲಾಗಿದೆ. ಹೀಗಾಗಿ, ಈ ಇಬ್ಬರ ಪೈಕಿ ಒಬ್ಬರಿಗೆ ಟಿಕೆಟ್ ಸಿಗುವ ಸಾಧ್ಯತೆಯಿದೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದರು.

ಚಿತ್ರದುರ್ಗಕ್ಕೆ ಬಿಜೆಪಿಯಿಂದ ಕಾರಜೋಳ?

ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಮಾಜಿ ಸಚಿವ ಗೋವಿಂದ ಕಾರಜೋಳ ಅವರನ್ನು ಕಣಕ್ಕಿಸುವ ಬಗ್ಗೆ ಬಿಜೆಪಿ ಪರಿಶೀಲನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಹಾಲಿ ಸಂಸದ ಹಾಗೂ ಸಚಿವ ಎ.ನಾರಾಯಣಸ್ವಾಮಿ ಅವರು ಕಣದಿಂದ ಹಿಂದಕ್ಕೆ ಸರಿಯುವ ಸಾಧ್ಯತೆ ಇದ್ದು, ಅವರು ಮುಂದೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರಜೋಳ ಅವರ ಹೆಸರು ಮುನ್ನಲೆಗೆ ಬಂದಿದೆ. ಅದಕ್ಕೆ ನಾರಾಯಣ ಸಹಮತಿ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಕಾಂತೇಶ್‌ಗೆ ಟಿಕೆಟ್ ಕೈ ತಪ್ಪಲು ನಾನು ಕಾರಣನಲ್ಲ: ಬಿಎಸ್‌ವೈ

ಶಿವಮೊಗ್ಗ: 'ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಪುತ್ರ ಕೆ.ಈ. ಕಾಂತೇಶ್‌ಗೆ ಹಾವೇರಿ–ಗದಗ ಲೋಕಸಭಾ ಕ್ಷೇತ್ರದ ಚುನಾವಣೆ ಟಿಕೆಟ್ ಕೈ ತಪ್ಪಲು ನಾನು ಕಾರಣನಲ್ಲ. ಕೇಂದ್ರ ಚುನಾವಣಾ ಸಮಿತಿ ತೀರ್ಮಾನದಂತೆ ಟಿಕೆಟ್ ಹಂಚಿಕೆಯಾಗಿದೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸ್ಪಷ್ಟಪಡಿಸಿದರು.

ಶನಿವಾರ ತಡರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ನನ್ನ ಬಗ್ಗೆ ತಪ್ಪು ತಿಳಿದುಕೊಂಡಿದ್ದಾರೆ. ಸಿಟ್ಟಿನಲ್ಲಿ ಹಾಗೆ ಮಾತನಾಡಿದ್ದಾರೆ. ಮೋದಿ ಕಾರ್ಯಕ್ರಮಕ್ಕೆ ಈಶ್ವರಪ್ಪ ಅವರು ಬರಲಿದ್ದಾರೆ ಎಂಬ ವಿಶ್ವಾಸವಿದೆ. ಅವರೂ ಪಕ್ಷ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದರು.

'ಎಲ್ಲವೂ ಸರಿ ಹೋಗುತ್ತದೆ ಎಂದುಕೊಂಡಿದ್ದೇನೆ. ಅವರ ಮನಸ್ಸಿಗೆ ನೋವಾಗಿರಬಹುದು. ರಾಜ್ಯ ನಾಯಕರು ಅವರೊಂದಿಗೆ ಮಾತನಾಡುವ ಪ್ರಯತ್ನ ನಡೆಸಿದ್ದಾರೆ. ಅವರ ಮನ ಒಲಿಸುವ ಪ್ರಯತ್ನ ಪಕ್ಷದ ಹಿರಿಯರಿಂದ ನಡೆಯುತ್ತಿದೆ. ನನ್ನ ಬಗ್ಗೆ ತಪ್ಪು ತಿಳಿಯುವುದು ಬೇಡ' ಎಂದರು.

'ಕಲಬುರಗಿಯಲ್ಲಿ ಮೋದಿ ಕಾರ್ಯಕ್ರಮ ಯಶಸ್ವಿಯಾಗಿದೆ. ರಾಜ್ಯದ 28 ಕ್ಷೇತ್ರದಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ. ಶಿವಮೊಗ್ಗದಲ್ಲಿ ಈಗಾಗಲೇ ಗೆದ್ದಾಗಿದೆ. ಅಂತರ ಎಷ್ಟು ಎಂದು ನೋಡಬೇಕು. ಮೋದಿ ಕಾರ್ಯಕ್ರಮ ಮುಗಿದ ನಂತರ ಅವಶ್ಯಕತೆ ಇರುವ ಕಡೆ ಮತ್ತು ಪಕ್ಷದ ಮುಖಂಡರು ಹೇಳುವ ಸ್ಥಳಗಳಿಗೆ ನಾನು ಪ್ರಚಾರಕ್ಕೆ ಹೋಗುತ್ತೇನೆ' ಎಂದರು.



'ಬಂಡಾಯ ಶೀಘ್ರ ಶಮನ'

ಹುಬ್ಬಳ್ಳಿ: 'ಕೆ.ಎಸ್. ಈಶ್ವರಪ್ಪ ಅವರು ಪುತ್ರನಿಗೆ ಹಾವೇರಿ ಟಿಕೆಟ್ ಸಿಕ್ಕಿಲ್ಲ ಎಂದು ಕೋಪಗೊಂಡಿದ್ದಾರೆ. ಚುನಾವಣೆಗೆ ಸಾಕಷ್ಟು ದಿನಗಳಿದ್ದು, ಅಷ್ಟರೊಳಗೆ ಸಕಾರಾತ್ಮಕ ಬದಲಾವಣೆ ಆಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಪಕ್ಷದ ಹಿರಿಯ ನಾಯಕರು. ಪಕ್ಷದ ವರಿಷ್ಠರು ಅವರ ಮನವೊಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬಂಡಾಯ ಶಮನವಾಗಲಿದೆ. ಶಿವಮೊಗ್ಗ ಕ್ಷೇತ್ರದಲ್ಲಿ ಏ. 26ಕ್ಕೆ ಚುನಾವಣೆ, ಇನ್ನೂ 40 ದಿನಗಳಿವೆ. ಅಷ್ಟರೊಳಗೆ ಎಲ್ಲವೂ ಸರಿ ಹೋಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮನವೊಲಿಕೆ ಯತ್ನ: 'ರಾಷ್ಟ್ರೀಯ ನಾಯಕರು ಕೆ.ಎಸ್. ಈಶ್ವರಪ್ಪ ಅವರ ಜೊತೆ ಸಂಪರ್ಕದಲ್ಲಿದ್ದು, ಮನವೊಲಿಕೆ ಯತ್ನ ನಡೆಯುತ್ತಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಚಿಕ್ಕಬಳ್ಳಾಪುರ: ಸುಮಲತಾ ಕಣಕ್ಕೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಡ್ಯ ಕ್ಷೇತ್ರದ ಸಂಸದೆ ಸುಮಲತಾ ಅಂಬರೀಷ್ ಭಾನುವಾರ ಇಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಆಗಲಿದ್ದಾರೆ. ಸುಮಲತಾ ಅವರನ್ನು ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಕಣಕ್ಕಿಳಿಸಲು ಪಕ್ಷ ಚಿಂತನೆ ನಡೆಸಿದೆ ಎಂಬ ವದಂತಿ ದಟ್ಟವಾಗಿದೆ.

'ನಡ್ಡಾ ಅವರ ಆಹ್ವಾನದಂತೆ ರಾಜಕೀಯ ಪರಿಸ್ಥಿತಿ ಚರ್ಚಿಸಲು ಆಗಮಿಸಿದ್ದೇನೆ' ಎಂದು ಸುಮಲತಾ ಸುದ್ದಿಗಾರರಿಗೆ ತಿಳಿಸಿದರು. ಚಿಕ್ಕಬಳ್ಳಾಪುರದಿಂದ ಸ್ಪರ್ಧೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಕ್ಷೇತ್ರದ ಸಂಸದ, ಬಿಜೆಪಿಯ ಬಿ.ಎನ್. ಬಚ್ಚೇಗೌಡ ಸಕ್ರಿಯ ರಾಜಕಾರಣದಿಂದ ಹಿಂದೆ ಸರಿದಿದ್ದಾರೆ. ಮಾಜಿ ಸಚಿವ ಡಾ.ಕೆ.ಸುಧಾಕರ್, ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಪುತ್ರ ಅಲೋಕ್ ಸದ್ಯ ಬಿಜೆಪಿ ಟಿಕೆಟ್‌ಗಾಗಿ ತೀವ್ರ ಲಾಬಿ ನಡೆಸಿದ್ದಾರೆ.

ಸುಮಲತಾ ಅವರು 2019ರಲ್ಲಿ ಮಂಡ್ಯ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರಾಭವಗೊಂಡಿದ್ದರು. ಪ್ರಸ್ತುತ, ಸೀಟು ಹಂಚಿಕೆ ಸೂತ್ರದಂತೆ ಮಂಡ್ಯ ಕ್ಷೇತ್ರವು ಜೆಡಿಎಸ್‌ಗೆ ಹೋಗಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಒಕ್ಕಲಿಗ, ಬಲಿಜ ಸಮುದಾಯದ ಮತಗಳು ಹೆಚ್ಚಿವೆ. ಬಿಜೆಪಿ ಸುಮಲತಾ ಅವರನ್ನು ಕಣಕ್ಕಿಳಿಸಿದರೆ, ಅವರ ಪರ ಪ್ರಚಾರ ನಡೆಸಲು ಜೆಡಿಎಸ್‌ನ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೂ ಕೋರುವ, ಅಂತೆಯೇ ಸುಮಲತಾ ಅವರಿಗೆ ಮಂಡ್ಯದಲ್ಲಿ ಜೆಡಿಎಸ್ ಅಭ್ಯರ್ಥಿ ಪರ ಪ್ರಚಾರ ನಡೆಸಲು ಕೋರುವ ಸಾಧ್ಯತೆಗಳಿವೆ.

ಬಚ್ಚೇಗೌಡ ರಾಜೀನಾಮೆ ಇಂದು (ಚಿಕ್ಕಬಳ್ಳಾಪುರವರದಿ): ಸಂಸದ ಬಿ.ಎನ್.ಬಚ್ಚೇಗೌಡ ಅವರು ಸೋಮವಾರ ಬಿಜೆಪಿಗೆ ರಾಜೀನಾಮೆ ನೀಡಲಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಬೇರೆ ರಾಜಕೀಯ ಪಕ್ಷ ಸೇರುವುದಿಲ್ಲ. ಚುನಾವಣಾ ರಾಜಕೀಯದಿಂದ ದೂರ ಇರುವೆ' ಎಂದು ತಿಳಿಸಿದರು.

1.16 ಲಕ್ಷ ಬ್ಯಾನರ್, ಪೋಸ್ಟರ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿಸಂಹಿತೆ ಜಾರಿಯಾದ 24 ಗಂಟೆಗಳಲ್ಲಿ ರಾಜ್ಯದಾದ್ಯಂತ 1.16 ಲಕ್ಷ ಗೋಡೆ ಬರಹ, ಪೋಸ್ಟರ್, ಬ್ಯಾನರ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಭಾನುವಾರ ತಿಳಿಸಿದ್ದಾರೆ.

ಮತದಾರರ ಮೇಲೆ ಪ್ರಭಾವ ಬೀರಬಹುದಾದ ಪ್ರಚಾರ ಸಾಮಗ್ರಿಗಳ ತೆರವು ಕಾರ್ಯಾಚರಣೆ ಶನಿವಾರ ಆರಂಭವಾಗಿದೆ. 5,130 ತಂಡಗಳು ರಾಜ್ಯದಾದ್ಯಂತ ಕಾರ್ಯಾಚರಣೆ ನಡೆಸಿವೆ ಎಂದು ಮಾಹಿತಿ ನೀಡಿದ್ದಾರೆ.

24,177 ಗೋಡೆಬರಹ ಅಳಿಸಲಾಗಿದೆ. 35,740 ಪೋಸ್ಟರ್, 33,683 ಬ್ಯಾನರ್, 24,899 ಪ್ರಚಾರ ಸಾಮಗ್ರಿಗಳನ್ನು ತೆರವು ಮಾಡಲಾಗಿದೆ ಎಂದು ಮೀನಾ ತಿಳಿಸಿದ್ದಾರೆ.



ಜಾಗೃತಿ ಮತದಾನದ ಕುರಿತು ಜಾಗೃತಿ ಮೂಡಿಸಲು ಬೆಂಗಳೂರಿನ ಕೆ.ಆರ್. ಪುರದಲ್ಲಿ ಭಾನುವಾರ ಆಯೋಜಿಸಿದ್ದ ಚುನಾವಣೆ ಜಾಗೃತಿಯ 'ವೋಟ್ ಎ ಥಾನ್'ನಲ್ಲಿ ಸಾರ್ವಜನಿಕರು ಪಾಲ್ಗೊಂಡರು

ಪ್ರಸಾದ್ ರಾಜಕೀಯ ನಿವೃತ್ತಿ ಘೋಷಣೆ

'ಚುನಾವಣಾ ರಾಜಕೀಯದ ಸುವರ್ಣ ಸಂಭ್ರಮ'ದಲ್ಲಿ ಅಭಿಮಾನಿಗಳ ಅಭಿನಂದನೆ

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮರಾಜನಗರ ಮೀಸಲು ಕ್ಷೇತ್ರದ ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಭಾನುವಾರ ನೂರಾರು ಅಭಿಮಾನಿಗಳು, ಕಾರ್ಯಕರ್ತರು ಹಾಗೂ ಹಿತೈಷಿಗಳ ಸಮ್ಮುಖದಲ್ಲಿ ಇಲ್ಲಿ ಭಾನುವಾರ ರಾಜಕೀಯ ನಿವೃತ್ತಿಯನ್ನು ಘೋಷಿಸಿದರು.

ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ನಡೆದ ತಮ್ಮ 'ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ'ದಲ್ಲಿ ಮಾತನಾಡಿದ ಅವರು, '1974ರ ಮಾರ್ಚ್ 17ರಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದೆ. 50 ವರ್ಷಗಳ ಸುದೀರ್ಘ ರಾಜಕಾರಣದ ನಂತರ ನಿವೃತ್ತನಾಗುತ್ತಿರುವೆ' ಎಂದು ಭಾವುಕರಾದರು. ಅಭಿಮಾನಿಗಳು ಹಾಗೂ ನೆರೆದಿದ್ದವರೆಲ್ಲರೂ ಎದ್ದು ನಿಂತು ಚಪ್ಪಾಳೆ ಮೂಲಕ ಗೌರವ ಸಲ್ಲಿಸಿದರು. ಎಲ್ಲ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಕೂಡ ಪಾಲ್ಗೊಂಡಿದ್ದರು.



'ಚುನಾವಣಾ ರಾಜಕೀಯ ಸುವರ್ಣ ಮಹೋತ್ಸವ'ದಲ್ಲಿ ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಭಾಗ್ಯಲಕ್ಷ್ಮಿ ಪ್ರಸಾದ್, ಸಾಹಿತಿ ಪ್ರಧಾನ ಗುರುದತ್ತ, ಮಾಜಿ ಮುಖ್ಯಮಂತ್ರಿ ಎಸ್‌.ಎಂ.ಕೃಷ್ಣ, ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಶಾಸಕ ಜಿ.ಟಿ.ದೇವೇಗೌಡ, ಲೇಖಕ ಸಿ.ನಾಗಣ್ಣ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿಜಿಆರ್ ಸಿಂಧ್ಯಾ ಹಾಜರಿದ್ದರು —ಪ್ರಜಾವಾಣಿ ಚಿತ್ರ

'ರಾಜಕಾರಣ ಹೊಂದಾಣಿಕೆಗಳ ಸರಮಾಲೆ. ಆದರೆ, ಅದಕ್ಕೆ ನಾನು ಸ್ವಾಭಿಮಾನದ ಬಲಿಕೊಟ್ಟಿಲ್ಲ. ಸಾಮಾಜಿಕ ಬದ್ಧತೆ ಹಾಗೂ ಜನರ ಕಾಳಜಿಗಾಗಿ ಕೆಲಸ ಮಾಡಿರುವೆ. ಒಳ್ಳೆಯವರಿಗೆ ಬಿಲ್ಲಾಗಿ ಬಾಗಿರುವೆ. ಕೆಟ್ಟವರಿಗೆ ಅತಿ ಕೆಟ್ಟವನಾಗಿದ್ದೆ' ಎಂದು ಪ್ರಸಾದ್ ಹೇಳಿದರು.

'ಲಕ್ಷ–ಲಕ್ಷ ದಲಿತರು, ಅಸ್ಪೃಶ್ಯರು ಮುಖ್ಯವಾಹಿನಿಗೆ ಬರಲು, ಅಧಿಕಾರ ಸಿಗಲು ನಮ್ಮ ಆಧ್ಯಾತ್ಮಿಕ ನಾಯಕ ಬಿ.ಆರ್.ಅಂಬೇಡ್ಕರ್ ಕಾರಣ. ಹಟಮತ್ತು ಛಲದಿಂದ ಶ್ರಮಿಸಿದ್ದರಿಂದ ಅವರು ದೊಡ್ಡ ಸ್ಥಾನಕ್ಕೇರಿದರು. ಸಮುದಾಯಕ್ಕೆ ಅಂಥ ಛಲ, ಸ್ವಾಭಿಮಾನ ಬರಬೇಕು' ಎಂದರು.

'ದಲಿತರೇ ಇರುವ ಅಶೋಕಪುರಂನಲ್ಲಿ ಹುಟ್ಟಿದ ನನಗೆ ಅಸ್ಪೃಶ್ಯತೆ ಗೊತ್ತಿರಲಿಲ್ಲ. ನಮ್ಮವೇ ಎಲೆತೋಟಗಳಿದ್ದವು. ಅಲ್ಲಿಂದಲೇ ರಾಜಕಾರಣಕ್ಕೆ ಆಕಸ್ಮಿಕವಾಗಿ ಪ್ರವೇಶಿಸಿದೆ. ಸಂಸದ, ಕೇಂದ್ರ ಸಚಿವನಾಗಿ 27 ವರ್ಷ ಸಂಸತ್ತಿನಲ್ಲಿ ಕೆಲಸ ಮಾಡಿ, ಏಳು ಮಂದಿ ಪ್ರಧಾನಿ ಗಳನ್ನು ನೋಡಿರುವೆ. 14 ಚುನಾವಣೆಗಳನ್ನು ಎದುರಿಸಿದೆ. ಆದರೆ, ಅಧರ್ಮಿಗಳಿಗೆ ಜೀವ ಹೋದರೂ ತಲೆಬಾಗೊಲ್ಲ. ತೊಂದರೆ ಕೊಟ್ಟವರನ್ನು ಸುಮ್ಮನೆ ಬಿಟ್ಟಿಲ್ಲ. ನನ್ನ ಸ್ವಾಭಿಮಾನವನ್ನು ತುಳಿಯಲು ಆಗುವುದಿಲ್ಲ. ರಾಜಕಾರಣ ಸಾಕಾಗಿದೆ. ಜನರ ಪ್ರೀತಿ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸುವೆ' ಎಂದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ಭಾಗ್ಯಲಕ್ಷ್ಮಿ ಪ್ರಸಾದ್, ಸಾಹಿತಿಗಳಾದ ಪ್ರಧಾನ ಗುರುದತ್ತ, ಸಿ.ಪಿ. ಕೃಷ್ಣಕುಮಾರ್, ಸಿ.ನಾಗಣ್ಣ ಹಾಜರಿದ್ದರು.

> ವಿಧಾನಸಭೆ, ಲೋಕ ಸಭೆ ಸದಸ್ಯರು ಬಳಸುತ್ತಿರುವ ಭಾಷೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹೆಚ್ಚಿಸುವ ರೀತಿಯಲ್ಲಿಲ್ಲ. ಇದು ದುರದೃಷ್ಟಕರ
> **ಎಸ್.ಎಂ.ಕೃಷ್ಣ,** ಮಾಜಿ ಮುಖ್ಯಮಂತ್ರಿ

ಪ್ರಜಾಪ್ರಭುತ್ವದ ಕಡೇ ಚುನಾವಣೆಯಂತೆ ಕಾಣುತ್ತಿದೆ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದು ಪ್ರಜಾ ಪ್ರಭುತ್ವದ ಕೊನೆಯ ಚುನಾವಣೆಯಂತೆ ನನಗೆ ಕಾಣುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಪ್ರಜಾಪ್ರಭುತ್ವ ಕೊನೆಗಾಣಿಸಬೇಕು ಎಂದು ಮೋದಿ ಬಯಸುತ್ತಾರೆ. ಇದೇ ಪ್ರಜಾ ಪ್ರಭುತ್ವದ ಕೊನೆಯ ಚುನಾವಣೆ. ಮಾತು, ವರ್ತನೆಯಿಂದ ಜನರ ನಡುವೆ ಬೇಧ ಮೂಡಿಸಲು ಅವರು ಯತ್ನಿಸುತ್ತಿದ್ದಾರೆ' ಎಂದರು.

'ಬಿಜೆಪಿಯವರಿಗೆ ಅನುಕೂಲ ಮಾಡಿಕೊಡಲೆಂದೇ ಚುನಾವಣಾ ಆಯೋಗ ಏಳು ಹಂತದಲ್ಲಿ ಚುನಾವಣೆ ದಿನಾಂಕ ಘೋಷಣೆ ಮಾಡಿದೆ. ಸಾಮಾನ್ಯವಾಗಿ 4– 5 ಹಂತಗಳಲ್ಲಿ ಚುನಾವಣೆ ನಡೆಯುತ್ತಿತ್ತು. ಏಳು ಹಂತದ ಚುನಾವಣೆ ಸರಿ ಎನಿಸುವುದಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

ಕೋಲಾರ ಕ್ಷೇತ್ರಕ್ಕಾಗಿ ಜೆಡಿಎಸ್ ಮುಖಂಡರ ಪಟ್ಟು

ಬೆಂಗಳೂರು: ಕೋಲಾರ ಲೋಕಸಭಾ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟು ಕೊಡಬಾರದು ಎಂದು ಅಲ್ಲಿನ ಜೆಡಿಎಸ್ ಮುಖಂಡರು ಪಕ್ಷದ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭಾನುವಾರ ಭೇಟಿಮಾಡಿ ಒತ್ತಡ ಹೇರಿದ್ದಾರೆ.

ಕೋಲಾರದ ಬದಲಿಗೆ ಚಿಕ್ಕಬಳ್ಳಾಪುರ ಕ್ಷೇತ್ರ ಆಯ್ದುಕೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಲಹೆ ನೀಡಿದ್ದಾರೆ ಎಂಬ ಮಾಹಿತಿಯಿಂದ ಸ್ಥಳೀಯ ಮುಖಂಡರು ಆತಂಕಕ್ಕೆ ಒಳಗಾಗಿದ್ದಾರೆ. ಕೋಲಾರ ಕ್ಷೇತ್ರದಲ್ಲಿ ಪಕ್ಷದ ನೆಲೆ ಇದೆ. ಬಿಜೆಪಿಗೆ ಕ್ಷೇತ್ರ ಬಿಟ್ಟುಕೊಟ್ಟರೆ ಪಕ್ಷದ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ ಎಂದು ಹಲವು ಮುಖಂಡರು ಕುಮಾರಸ್ವಾಮಿ ಅವರ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೋಲಾರದಲ್ಲಿ ಸ್ಪರ್ಧೆ ಭರವಸೆ': 'ಅಮಿತ್ ಶಾ ಅವರು ಕೋಲಾರದ ಬದಲಿಗೆ ಚಿಕ್ಕಬಳ್ಳಾಪುರ ಆಯ್ದುಕೊಳ್ಳುವಂತೆ ಸಲಹೆ ನೀಡಿದ್ದು ನಿಜ. ಆದರೆ, ನಾವು ಅದನ್ನು ಒಪ್ಪಿಕೊಂಡಿಲ್ಲ. ನಮ್ಮ ಮೂವರು ಶಾಸಕರಿರುವ ಕೋಲಾರ ಕ್ಷೇತ್ರವನ್ನೇ ನೀಡಲು ಕೇಳಿದ್ದೇವೆ. ಕ್ಷೇತ್ರ ಕೈತಪ್ಪುವುದಿಲ್ಲ. ಚುನಾವಣಾ ತಯಾರಿ ಆರಂಭಿಸಿ ಎಂದು ಕುಮಾರಸ್ವಾಮಿ ಹೇಳಿದ್ದಾರೆ' ಎಂದು ಮೂಲಗಳು ಹೇಳಿವೆ.

ಅರುಣಾಚಲ: ಜೂನ್ 2ಕ್ಕೆ ಮತಎಣಿಕೆ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ವಿಧಾನಸಭೆ ಚುನಾವಣೆಗಳ ಫಲಿತಾಂಶದ ದಿನಾಂಕವನ್ನು ಬದಲಿಸಿರುವ ಚುನಾವಣಾ ಆಯೋಗವು, ಜೂನ್ 2ರಂದು ಫಲಿತಾಂಶ ಪ್ರಕಟಿಸುವುದಾಗಿ ತಿಳಿಸಿದೆ

ಈ ಎರಡು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಮತ ಎಣಿಕೆಯನ್ನು ಲೋಕಸಭೆ ಚುನಾವಣೆಯ ಮತ ಎಣಿಕೆಯ ದಿನವಾದ ಜೂನ್ 4ರಂದೇ ನಡೆಸಲಾಗುವುದು ಎಂದು ಈ ಹಿಂದೆ ಆಯೋಗ ತಿಳಿಸಿತ್ತು.

ಆದರೆ, ಎರಡೂ ರಾಜ್ಯಗಳ ವಿಧಾನಸಭೆ ಅವಧಿಯು ಜೂನ್ 2ರಂದು ಮುಕ್ತಾಯವಾಗುವ ಕಾರಣ, ಮತ ಎಣಿಕೆ ದಿನಾಂಕವನ್ನು ಎರಡು ದಿನಗಳ ಮುಂಚಿತವಾಗಿಯೇ ನಡೆಸಲು ನಿರ್ಧರಿಸಲಾಗಿದೆ ಎಂದು ಆಯೋಗ ತಿಳಿಸಿದೆ.

'ಪರಿಸರಸ್ನೇಹಿ ಚುನಾವಣೆಗೆ ಕ್ರಮ'

ನವದೆಹಲಿ (ಪಿಟಿಐ): ಕನಿಷ್ಠ ಪ್ರಮಾಣದಲ್ಲಿ ಕಾಗದದ ಬಳಕೆ, ಪರಿಸರ ಸ್ನೇಹಿ ವಾಹನಗಳ ಬಳಕೆಗೆ ಆದ್ಯತೆ, ಒಂದೇ ಬಾರಿಗೆ ಬಳಸಬಹುದಾದ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಗೆ ಕಡಿವಾಣ, ಕಾರ್‌ಪೂಲಿಂಗ್‌ಗೆ ಉತ್ತೇಜನ ಸೇರಿ ಹಲವು ಕ್ರಮಗಳಿಗೆ ಚುನಾವಣಾ ಆಯೋಗ ಮುಂದಾಗಿದೆ.

ಚುನಾವಣಾಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳಿಗೆ ಈ ಕುರಿತು ಸ್ಪಷ್ಟ ಸೂಚನೆಗಳನ್ನು ನೀಡಿರುವ ಆಯೋಗವು ಈ ಮೂಲಕ ಲೋಕಸಭೆಯ ಸಾರ್ವತ್ರಿಕ ಚುನಾವಣೆಯನ್ನು 'ಸುಸ್ಥಿರಾಭಿವೃದ್ಧಿ ಚುನಾವಣೆ'ಯಾಗಿಸುವ ಗುರಿಯನ್ನು ಹೊಂದಿದೆ.

ಚುನಾವಣೆಗೆ ಸಂಬಂಧಿಸಿದ ಪ್ರತಿ ಕಾರ್ಯಕ್ರಮಗಳೂ ಆದಷ್ಟು ಪರಿಸರ ಸ್ನೇಹಿಯಾಗಿರಬೇಕು ಎಂಬುದು ಆಯೋಗದ ಉದ್ದೇಶವಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ತಿಳಿಸಿದ್ದಾರೆ.

ಸುಸ್ಥಿರಾಭಿವೃದ್ಧಿ ಮತ್ತು ಪರಿಸರ ಸ್ನೇಹಿ ಚುನಾವಣೆ ನಡೆಸುವ ಕ್ರಮವಾಗಿ ಹಲವು ಕ್ರಮಕ್ಕೆ ಮುಂದಾಗಿದ್ದೇವೆ. ಒಂದು ಬಾರಿಯಷ್ಟೇ ಬಳಸಬಹುದಾದ ಪ್ಲಾಸ್ಟಿಕ್‌ಗಳ ಬಳಕೆಗೆ ಕಡಿವಾಣ ಹಾಕಲು ಸೂಚಿಸಲಾಗಿದೆ. ಇದು ಸೇರಿದಂತೆ ಹಲವು ನಿರ್ದೇಶನಗಳನ್ನು ನೀಡಲಾಗಿದೆ. ತ್ಯಾಜ್ಯ ನಿರ್ವಹಣೆಗೆ ಒತ್ತು ನೀಡಬೇಕು. ಕಾಗದದ ಬಳಕೆಯನ್ನು ಆದಷ್ಟೂ ಕಡಿಮೆ ಮಾಡಬೇಕು ಎಂದು ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ಶನಿವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತ ಮಾಹಿತಿಗಳನ್ನು ಅವರು ಹಂಚಿಕೊಂಡರು.

ಸಮರ್ಪಕವಾಗಿ ತ್ಯಾಜ್ಯಗಳ ವಿಲೇವಾರಿ ಮಾಡಬೇಕು, ತ್ಯಾಜ್ಯವಿಲೇವಾರಿ ಮತ್ತು ಮರುಬಳಕೆ ಕ್ರಮಗಳಿಗೆ ಸ್ಥಳೀಯ ಸಂಸ್ಥೆಗಳ ಜೊತೆಎ ಸಹಯೋಗ ಹೊಂದಬೇಕು. ಆದಷ್ಟು ಕಡಿಮೆ ಕಾಗದ ಬಳಸಬೇಕು, ಹಾಳೆಯ ಎರಡೂ ಕಡೆ ಮುದ್ರಿಸಲು ಕ್ರಮವಹಿಸಬೇಕು, ಕಾಗದ ಬಳಕೆಗೆ ತಪ್ಪಿಸಲು ಸಂವಹನ ಕ್ರಿಯಗಾಗಿ ಆದಷ್ಟೂ ಎಲೆಕ್ಟ್ರಾನಿಕ್ ಸ್ವರೂಪವನ್ನು ಬಳಸಬೇಕು ಎಂದು ಸೂಚಿಸಲಾಗಿದೆ ಎಂದರು.

ರಾಜಕೀಯ ಪಕ್ಷಗಳುಈ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು. ಸಾರ್ವಜನಿಕ ಸಾರಿಗೆಗಳ ಬಳಕೆ, ಕಾರ್ ಪೂಲಿಂಗ್ ಕ್ರಮಕ್ಕೆ ಉತ್ತೇಜನ, ಮರುಬಳಕೆ ಇಂಧನಗಳ ಬಳಕೆಗೆ ಒತ್ತು ನೀಡಬೇಕು ಎಂದೂ ಅವರು ಕೋರಿದ್ದಾರೆ.

ಆಯೋಗವು ಲೋಕಸಭೆಗೆ ಸಾರ್ವತ್ರಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ್ದು, ಆ ಪ್ರಕಾರ, 543 ಕ್ಷೇತ್ರಗಳಿಗೆ ಏಳು ಹಂತದಲ್ಲಿ ಮತದಾನ ನಡೆಯಲಿದೆ. ಇದೇ ವೇಳೆ ನಾಲ್ಕು ರಾಜ್ಯಗಳ ವಿಧಾನಸಭೆಗೂ ಚುನಾವಣೆ ನಡೆಯಲಿದೆ. ಮತಎಣಿಕೆಯು ಜೂನ್ 4ರಂದು ನಡೆಯಲಿದೆ.

ಉತ್ತರ ಪ್ರದೇಶ: ಕೇಸರಿ ಪಕ್ಷದ ಓಟಕ್ಕೆ ತಡೆಯೊಡ್ಡಲು ಮೈತ್ರಿಕೂಟದ ಕಸರತ್ತು

ಬಿಜೆಪಿ– 'ಇಂಡಿಯಾ' ನಡುವೆ ನೇರ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಲಖನೌ: 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು 'ಇಂಡಿಯಾ' ಮೈತ್ರಿ ಕೂಟದ ಸಮಾಜವಾದಿ ಪಕ್ಷ (ಎಸ್‌ಪಿ)– ಕಾಂಗ್ರೆಸ್ ನಡುವೆ ನೇರ ಪೈಪೋಟಿ ಏರ್ಪಟಿದ್ದು, ಕೆಲವೆಡೆ ಬಿಎಸ್‌ಪಿ ತ್ರಿಕೋನ ಸ್ಪರ್ಧೆವೊಡ್ಡಬಹುದು ಎಂದು ವಿಶ್ಲೇಷಿಸಲಾಗಿದೆ.

ದೇಶದಲ್ಲಿ 400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಕನಸು ಹೊಂದಿರುವ ಬಿಜೆಪಿ, ಇದನ್ನು ನನಸು ಮಾಡಿಕೊಳ್ಳಲು ಪ್ರಮುಖವಾಗಿ ಉತ್ತರ ಪ್ರದೇಶವನ್ನು ನೆಚ್ಚಿಕೊಂಡಿದೆ. ಕೇಸರಿ ಪಕ್ಷದ ಓಟಕ್ಕೆ ತಡೆ ನೀಡಲು 'ಇಂಡಿಯಾ' ಮೈತ್ರಿಕೂಟವೂ ಸಾಕಷ್ಟು ಕಸರತ್ತಿನಲ್ಲಿ ತೊಡಗಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ 62 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಯು, ಈಗಾಗಲೇ 51 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸುವ ಮೂಲಕ, ಪ್ರತಿಸ್ಪರ್ಧಿ ಪಕ್ಷಗಳಿಗಿಂತ ಒಂದು ಹೆಜ್ಜೆ ಮುಂದಿದೆ. ಪಕ್ಷವು ತನ್ನ ಮೈತ್ರಿ ಪಕ್ಷಗಳಾದ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ), ನಿಶಾದ್ ಪಾರ್ಟಿ, ಅಪ್ನಾದಳ ಮತ್ತು ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷಗಳಿಗೆ (ಎಸ್‌ಬಿಎಸ್‌ಪಿ) ಆರು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ.

ಯೋಗಿ ಹೆಗಲಿಗೆ ಗೆಲ್ಲಿಸುವ ಹೊಣೆ: ವಾರಾಣಸಿ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಕಣಕ್ಕಿಳಿಯಲಿದ್ದಾರೆ. ಅಲ್ಲದೆ ಉತ್ತರ ಪ್ರದೇಶದ ಎಲ್ಲ ಸ್ಥಾನಗಳನ್ನು ಗೆಲ್ಲಿಸುವ ಹೊಣೆಯನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ವಹಿಸಲಾಗಿದೆ. ಶನಿವಾರ ಚುನಾವಣಾ ದಿನಾಂಕಗಳು ಪ್ರಕಟಕ್ಕೂ ಮುನ್ನ, ಪ್ರಧಾನಿ ಮೋದಿ ಅವರು ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿದ್ದು, ಸಾರ್ವಜನಿಕ ರ್‍ಯಾಲಿಗಳಲ್ಲಿಯೂ ಚುನಾವಣಾ ಪ್ರಚಾರದ ಕಹಳೆ ಊದಿದ್ದಾರೆ.

ರಾಮಮಂದಿರ ಉದ್ಘಾಟನೆಯಿಂದಾಗಿ ರಾಜ್ಯ ಮತ್ತು ದೇಶದಲ್ಲಿ ತನ್ನ ಪರವಾದ ಅಲೆ ಎದ್ದಿದೆ ಎಂದು ಕೇಸರಿ ಪಕ್ಷ ಭಾವಿಸಿದೆ. 'ರಾಮನ ಆಶೀರ್ವಾದದಿಂದ ಉತ್ತರ ಪ್ರದೇಶದ ಎಲ್ಲ ಸ್ಥಾನಗಳನ್ನು ಗೆಲ್ಲುತ್ತೇವೆ' ಎಂದು ಪಕ್ಷದ ಹಿರಿಯ ನಾಯಕ ವಿಜಯ್ ಬಹದ್ದೂರ್ ಪಾಠಕ್ ವಿಶ್ವಾಸ ವ್ಯಕ್ತಪಡಿಸುತ್ತಾರೆ.

ರಾಜ್ಯದಲ್ಲಿ 2022ರ ವಿಧಾನಸಭಾ ಚುನಾವಣೆಯಲ್ಲಿ ಕೇಸರಿ ಪಕ್ಷವು ಶೇ 42ರಷ್ಟು ಮತಗಳನ್ನು ಪಡೆದುಕೊಂಡಿತ್ತು. ಆದರೆ ರಾಜ್ಯದ ಪೂರ್ವ ಮತ್ತು ಪಶ್ಚಿಮ ಪ್ರದೇಶಗಳಲ್ಲಿನ ಎಸ್.ಪಿ ಭದ್ರಕೋಟೆಗಳನ್ನು ಭೇದಿಸಲು ಅದಕ್ಕೆ ಆಗಿರಲಿಲ್ಲ. ಈ ಬಾರಿ ಬಿಜೆಪಿಯು ಪಶ್ಚಿಮ ಜಿಲ್ಲೆಗಳಲ್ಲಿ ಜಾಟ್ ಸಮುದಾಯದ ಪ್ರಬಲ ನಾಯಕರನ್ನು ಹೊಂದಿರುವ ಆರ್‌ಎಲ್‌ಡಿ ಜತೆ ಮೈತ್ರಿ ಮಾಡಿಕೊಂಡಿದೆ.

ಎಸ್.ಪಿ–ಬಿಎಸ್‌ಪಿ ಸ್ಪರ್ಧೆ, ಬಿಜೆಪಿಗೆ ಅನುಕೂಲ

ಕಳೆದ ಲೋಕಸಭಾ ಚುನಾವಣೆಯಲ್ಲಿ ಎಸ್‌ಪಿ ಮತ್ತು ಬಿಎಸ್‌ಪಿ ಮೈತ್ರಿ ಮಾಡಿಕೊಂಡಿದ್ದವು. ಈ ಪಕ್ಷಗಳು ಒಟ್ಟು 15 ಕ್ಷೇತ್ರಗಳನ್ನು ಗೆದ್ದಿದ್ದವು ಮತ್ತು 10ಕ್ಕೂ ಹೆಚ್ಚು ಕಡೆ ಬಿಜೆಪಿಗೆ ಕಠಿಣ ಸ್ಪರ್ಧೆ ನೀಡಿದ್ದವು. ಆದರೆ ಈ ಬಾರಿ ಈ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಕಣಕ್ಕಿಳಿಯಲಿರುವುದು, ಬಿಜೆಪಿಗೆ ಅನುಕೂಲವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

2022ರ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿ ಶೇ 32ರಷ್ಟು ಮತಗಳನ್ನು ಪಡೆದಿತ್ತು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿರುವುದರಿಂದ ಮತಗಳ ಪಾಲು ಹೆಚ್ಚಾಗಬಹುದು ಎಂಬ ಲೆಕ್ಕಾಚಾರ ನಡೆಸಿದೆ. 'ಪ್ರಶ್ನೆ ಪತ್ರಿಕೆ ಸೋರಿಕೆ, ಹಳೆ ಪಿಂಚಣಿ ಯೋಜನೆ, ರೈತರ ಸಮಸ್ಯೆಗಳು ಮತ್ತು ಹಣದುಬ್ಬರದಂತಹ ವಿಷಯಗಳನ್ನು ಮುಂದಿಟ್ಟುಕೊಂಡು ಸಮಾಜವಾದಿ ಪಕ್ಷವು ಬಿಜೆಪಿಯನ್ನು ಎದುರಿಸಲಿದೆ' ಎಂದು ಎಸ್‌ಪಿ ನಾಯಕ ರಾಜೇಂದ್ರ ಚೌಧರಿ ಪ್ರತಿಕ್ರಿಯಿಸಿದ್ದಾರೆ.

2017ರ ವಿಧಾನಸಭಾ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದಿದ್ದ ಬಿಎಸ್‌ಪಿ, 2022ರಲ್ಲಿ ಕೇವಲ ಒಂದು ಸ್ಥಾನ ಗೆದ್ದು, ಕಳಪೆ ಸಾಧನೆ ತೋರಿತ್ತು. ಬಿಎಸ್‌ಪಿ ಅಭ್ಯರ್ಥಿಗಳು ಪ್ರಮುಖವಾಗಿರುವೆಡೆ ಲೋಕಸಭಾ ಚುನಾವಣೆಯಲ್ಲಿ ತ್ರಿಕೋನ ಸ್ಪರ್ಧೆ ಎದುರಾಗಬಹುದು ಎಂದು ಮೂಲಗಳು ತಿಳಿಸಿವೆ.

ಸೋಮವಾರ, ಮಾರ್ಚ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 78 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಓದುವುದು ಮತ್ತು ಬರೆಯುವುದು ಪ್ರೀತಿಯ ಕಾಯಕವಾದರೆ ಪರೀಕ್ಷೆಯ ಕುರಿತ ಭಯ ತನ್ನಿಂತಾನೆ ಮಾಯವಾಗುತ್ತದೆ.



ಚುನಾವಣಾ ಬಾಂಡ್: ಡಿಎಂಕೆಗೆ 'ಲಾಟರಿ ಕಿಂಗ್'ನಿಂದ ₹509 ಕೋಟಿ ಪಾವತಿ


ಬಿಜೆಪಿಗೆ ₹6,987 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಲಾಟರಿ ಕಿಂಗ್' ಸ್ಯಾಂಟಿಯಾಗೊ ಮಾರ್ಟಿನ್ ಮಾಲೀಕತ್ವದ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವೀಸಸ್ ಸಂಸ್ಥೆಯು, ತಾನು ಖರೀದಿಸಿದ ₹1,368 ಕೋಟಿ ಮೊತ್ತದ ಚುನಾವಣಾ ಬಾಂಡ್‌ನಲ್ಲಿ ₹509 ಕೋಟಿಯನ್ನು ತಮಿಳುನಾಡಿನ ಆಡಳಿತಾರೂಢ ಡಿಎಂಕೆಗೆ ದೇಣಿಗೆ ನೀಡಿದೆ.

ಚುನಾವಣಾ ಬಾಂಡ್ ಮೂಲಕ ಬಿಜೆಪಿ ಅತಿಹೆಚ್ಚು ದೇಣಿಗೆ (₹6,987.38 ಕೋಟಿ) ಪಡೆದಿರುವ ಮಾಹಿತಿಯು, ಚುನಾವಣಾ ಆಯೋಗ ಭಾನುವಾರ ಬಿಡುಗಡೆಗೊಳಿಸಿದ ಹೊಸ ಅಂಕಿ–ಅಂಶದಲ್ಲಿ ಬಹಿರಂಗಗೊಂಡಿದೆ.

ಡಿಎಂಕೆಯು ಚುನಾವಣಾ ಬಾಂಡ್ ಮೂಲಕ ಪಡೆದ ಒಟ್ಟು ₹656 ಕೋಟಿ ಮೊತ್ತದಲ್ಲಿ, ಫ್ಯೂಚರ್ ಗೇಮಿಂಗ್ ನೀಡಿದ ದೇಣಿಗೆ ಪಾಲು ಶೇ 77ರಷ್ಟಾಗುತ್ತದೆ. ಡಿಎಂಕೆ, ಎಐಎಡಿಎಂಕೆ ಮತ್ತು ಜೆಡಿಎಸ್ ಸೇರಿದಂತೆ ಕೆಲವು ಪಕ್ಷಗಳನ್ನು ಹೊರತುಪಡಿಸಿ, ಉಳಿದ ಪಕ್ಷಗಳು ತಾವು ಯಾರಿಂದ ದೇಣಿಗೆ ಪಡೆದಿದ್ದೇವೆ ಎಂಬ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.



ಹೆಚ್ಚು ದೇಣಿಗೆ ಪಡೆದ ಪಕ್ಷಗಳು
(ಮೊತ್ತ ₹ ಕೋಟಿಗಳಲ್ಲಿ)

ಬಿಜೆಪಿ	6,987.38
ಟಿಎಂಸಿ	1,396.94
ಕಾಂಗ್ರೆಸ್	1,334.36
ಬಿಆರ್‌ಎಸ್	1,322.00
ಬಿಜೆಡಿ	944.50
ಡಿಎಂಕೆ	656.50
ವೈಎಸ್‌ಆರ್ ಕಾಂಗ್ರೆಸ್	442.80

ಜೆಡಿಎಸ್‌ಗೆ ₹89.75 ಕೋಟಿ

ಜೆಡಿಎಸ್ ಪಕ್ಷವು ಚುನಾವಣಾ ಬಾಂಡ್ ಮೂಲಕ ₹89.75 ಕೋಟಿ ದೇಣಿಗೆ ಪಡೆದಿದೆ. ಅದರಲ್ಲಿ ₹50 ಕೋಟಿಯನ್ನು ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ನಿಂದ (ಎಂಇಐಎಲ್) ಪಡೆದಿದೆ. ಎಂಇಐಎಲ್ ವಿವಿಧ ಪಕ್ಷಗಳಿಗೆ ಒಟ್ಟು ₹966 ಕೋಟಿ ದೇಣಿಗೆ ನೀಡಿದೆ.

2018ರ ಮಾರ್ಚ್ 20ರಿಂದ 2023ರ ಸೆಪ್ಟೆಂಬರ್ 30ರ ವರೆಗೆ ಪಡೆದ ದೇಣಿಗೆಯ ಮಾಹಿತಿಯನ್ನು ಜೆಡಿಎಸ್ ಘೋಷಿಸಿಕೊಂಡಿದೆ. ಎಚ್‌.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಅಂದರೆ 2019ರ ಮಾರ್ಚ್ 19ರಂದು ಮೇಘಾ ಕಂಪನಿ, ಜೆಡಿಎಸ್‌ಗೆ ₹10 ಕೋಟಿ ನೀಡಿತ್ತು. ಇದೇ ಕಂಪನಿಯು ಕರ್ನಾಟಕ ವಿಧಾನಸಭೆ ಚುನಾವಣೆ ಘೋಷಣೆಗೂ ಮುನ್ನ 2023ರ ಏಪ್ರಿಲ್ 18ರಂದು ಪಕ್ಷಕ್ಕೆ ₹40 ಕೋಟಿ ದೇಣಿಗೆ ನೀಡಿದೆ.

ಎಂಬೆಸಿ ಡೆವಲಪರ್ಸ್ ಸಂಸ್ಥೆಯು 2018ರ ಚುನಾವಣೆ ಘೋಷಣೆಗೂ ಮುನ್ನ ₹22 ಕೋಟಿ ಹಾಗೂ 2018ರ ಮೇ 17 ರಂದು ₹10 ಕೋಟಿ ನೀಡಿದೆ. ಶಂಕರನಾರಾಯಣ ಕನ್‌ಸ್ಟ್ರಕ್ಷನ್ಸ್ (₹5 ಕೋಟಿ), ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್ (₹4 ಕೋಟಿ), ಅಮರರಾಜಾ ಗ್ರೂಪ್ಸ್ (₹2 ಕೋಟಿ) ಮತ್ತು ಇನ್ಫೊಸಿಸ್ (₹1 ಕೋಟಿ)– ಜೆಡಿಎಸ್‌ಗೆ ದೇಣಿಗೆ ನೀಡಿದ ಇತರ ಸಂಸ್ಥೆಗಳಾಗಿವೆ.

₹6 ಕೋಟಿ ಪಡೆದಿರುವ ಎಐಎಡಿಎಂಕೆಗೆ ಐಪಿಎಲ್‌ನ ಚೆನ್ನೈ ಸೂಪರ್ ಕಿಂಗ್ಸ್ ತಂಡದಿಂದಲೂ ದೇಣಿಗೆ ಲಭಿಸಿದೆ. ಸಿಪಿಎಂ, ಸಿಪಿಐ, ಬಿಎಸ್‌ಪಿ, ಫಾರ್ವರ್ಡ್ ಬ್ಲಾಕ್, ಎಐಎಂಐಎಂ, ಎಐಯುಡಿಎಫ್, ಎಂಎನ್‌ಎಸ್, ಮುಸ್ಲಿಂ ಲೀಗ್ ಮತ್ತು ಐಎನ್‌ಎಲ್‌ಡಿ ಪಕ್ಷಗಳು ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದಿಲ್ಲ ಎಂದು ಘೋಷಿಸಿಕೊಂಡಿವೆ.


ಬಿಜೆಪಿ ಮತ್ತು ಕಾಂಗ್ರೆಸ್ ಸೇರಿದಂತೆ ಪ್ರಮುಖ ಪಕ್ಷಗಳು ದೇಣಿಗೆ ನೀಡಿದವರ ಮಾಹಿತಿ ಬಹಿರಂಗಪಡಿಸದ ಕಾರಣ, ಫ್ಯೂಚರ್ ಗೇಮಿಂಗ್ ಖರೀದಿಸಿದ ಬಾಕಿ ₹859 ಕೋಟಿ ಮೌಲ್ಯದ ಬಾಂಡ್‌ಗಳ ಫಲಾನುಭವಿಗಳು ಯಾರೆಂಬುದು ತಿಳಿದುಬಂದಿಲ್ಲ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನೀಡಿದ್ದ ವಿವರಗಳ ಆಧಾರದಲ್ಲಿ ಚುನಾವಣಾ ಆಯೋಗವು ಮಾರ್ಚ್ 14ರಂದು ಬಿಡುಗಡೆಗೊಳಿಸಿದ್ದ ಮಾಹಿತಿಯು, 2019ರ ಏಪ್ರಿಲ್ 12ರಿಂದ 2024ರ ಫೆಬ್ರುವರಿ 15ರ ವರೆಗಿನ (ಸುಪ್ರೀಂ ಕೋರ್ಟ್ ಚುನಾವಣಾ ಬಾಂಡ್ ಯೋಜನೆ ರದ್ದುಗೊಳಿಸುವವರೆಗಿನ) ಅವಧಿಗೆ ಸಂಬಂಧಿಸಿದ್ದಾಗಿತ್ತು.

ಈಗ ಬಹಿರಂಗಗೊಂಡಿರುವ ಮಾಹಿತಿಯು ಈ ಯೋಜನೆಯ (2018) ಆರಂಭದಿಂದ 2023ರ ನವೆಂಬರ್‌ವರೆಗಿನ ಅವಧಿಯಲ್ಲಿ ಪಕ್ಷಗಳು ಪಡೆದ ದೇಣಿಗೆಗೆ ಸಂಬಂಧಿಸಿದ್ದಾಗಿದೆ. ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ 2023ರ ಅಕ್ಟೋಬರ್‌ನಿಂದ 2024ರ ಫೆಬ್ರುವರಿ ವರೆಗಿನ ಅವಧಿಯ ವಿವರಗಳು ಇನ್ನೂ ಬಹಿರಂಗವಾಗಿಲ್ಲ.

4ನೇ ಪುಟ ನೋಡಿ

ಈ ಸಲ ಕಪ್ ಆರ್‌ಸಿಬಿ ಮಹಿಳೆಯರಿಗೆ



ನವದೆಹಲಿ (ಪಿಟಿಐ): ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಪ್ ಗೆದ್ದಿತು. ಭಾನುವಾರ ನಡೆದ ಫೈನಲ್‌ನಲ್ಲಿ ಆರ್‌ಸಿಬಿ ತಂಡವು ರೋಚಕ ಜಯ ಸಾಧಿಸಿತು.

ಡೆಲ್ಲಿ ಕ್ಯಾಪಿಟಲ್ಸ್
113 (18.3 ಓವರ್‌ಗಳಲ್ಲಿ)

ರಾಯಲ್ ಚಾಲೆಂಜರ್ಸ್ ಬೆಂಗಳೂರು
2 ವಿಕೆಟ್‌ಗಳಿಗೆ **115**
(19.3 ಓವರ್‌ಗಳಲ್ಲಿ)

ಫಲಿತಾಂಶ
ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 8 ವಿಕೆಟ್‌ಗಳ ಜಯ

ಶ್ರೇಯಾಂಕ ಪಾಟೀಲ	
ಓವರ್	3.3
ರನ್	12
ವಿಕೆಟ್	4

ಸೋಫಿ ಮಾಲಿನೊ	
ಓವರ್	4
ರನ್	20
ವಿಕೆಟ್	3

ವಿವರ 9

ನಾಲ್ವರು ವಿದೇಶಿ ವಿದ್ಯಾರ್ಥಿಗಳಿಗೆ ಗಾಯ: ಇಬ್ಬರ ಬಂಧನ

ಗುಜರಾತ್: ಹಾಸ್ಟೆಲ್‌ನಲ್ಲಿ ನಮಾಜ್ ಮಾಡಿದ್ದಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್: ಗುಜರಾತ್ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ನಮಾಜ್ ಮಾಡಿದ್ದಕ್ಕೆ ವಿದೇಶಿ ವಿದ್ಯಾರ್ಥಿಗಳ ಮೇಲೆ ಗುಂಪೊಂದು ಶನಿವಾರ ರಾತ್ರಿ ಹಲ್ಲೆ ನಡೆಸಿದ್ದಾಗಿ ಆರೋಪಿಸಲಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಹಿತೇಶ್ ಮೆವಾಡಾ ಮತ್ತು ಭರತ್ ಪಟೇಲ್ ಎಂಬ ಇಬ್ಬರು ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಹಾಸ್ಟೆಲ್‌ನ ಭದ್ರತಾ ಸಿಬ್ಬಂದಿ ನೀಡಿದ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಗುಂಪೊಂದು ಹಾಸ್ಟೆಲ್‌ಗೆ ನುಗ್ಗಿ ದಾಂದಲೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಘೋಷಣೆ ಕೂಗುತ್ತಾ ಹಾಸ್ಟೆಲ್‌ಗೆ ನುಗ್ಗಿದ ಕೆಲವರು ಕಲ್ಲೆಸೆಯುವ ಮತ್ತು ಬೈಕ್‌ಗಳಿಗೆ ಹಾನಿ ಮಾಡುವ ದೃಶ್ಯ ವಿಡಿಯೊದಲ್ಲಿದೆ.

'20–25 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಹಲ್ಲೆ ಕುರಿತು ತನಿಖೆಗೆ ಒಂಬತ್ತು ತಂಡಗಳನ್ನು ರಚಿಸಲಾಗಿದ್ದು, ಎಲ್ಲ ಆರೋಪಿಗಳನ್ನೂ ಬಂಧಿಸಲಾಗುವುದು. ಗೃಹ ಸಚಿವ ಹರ್ಷ್ ಸಾಂಘ್ವಿ ಅವರು ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದು, ಘಟನೆಗೆ ಕಾರಣದರಾದವರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದಾರೆ' ಎಂದು ಪೊಲೀಸ್ ಆಯುಕ್ತ ಜಿ.ಎಸ್. ಮಲಿಕ್ ಹೇಳಿದರು.

'ಶನಿವಾರ ರಾತ್ರಿ 10.50ರ ಸುಮಾರಿಗೆ ಘಟನೆ ನಡೆದಿದೆ. ಈ ವೇಳೆ ವಿದೇಶಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ನಮಾಜ್ ಮಾಡುತ್ತಿದ್ದರು. ಹಾಸ್ಟೆಲ್ ಆವರಣಕ್ಕೆ ನುಗ್ಗಿದ ಗುಂಪು, ನಮಾಜ್ ಮಾಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ. ಮಸೀದಿಯಲ್ಲಿ ನಮಾಜ್ ಮಾಡುವಂತೆ ಹೇಳಿ ಹಲ್ಲೆ ನಡೆಸಿದೆ' ಎಂದು ತಿಳಿಸಿದರು.

'ಘಟನೆ ಬಗ್ಗೆ 10.51ರ ವೇಳೆಗೆ ಕಂಟ್ರೋಲ್ ರೂಂಗೆ ಕರೆ ಬಂದಿದ್ದು, ಪೊಲೀಸರು ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದಾರೆ. ಪರಿಸ್ಥಿತಿಯು ನಿಯಂತ್ರಣದಲ್ಲಿದೆ. ತನಿಖೆಗೆ ಕ್ರೈಂ ಬ್ರಾಂಚ್‌ನ ನಾಲ್ಕು ಹಾಗೂ ಡಿಸಿಪಿ ನೇತೃತ್ವದಲ್ಲಿ ಸ್ಥಳೀಯ ಪೊಲೀಸರ ಐದು ತಂಡಗಳನ್ನು ರಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಅಫ್ಗಾನಿಸ್ತಾನ, ಉಜ್ಬೆಕಿಸ್ತಾನ, ತಜಿಕಿಸ್ತಾನ, ಶ್ರೀಲಂಕಾ ಮತ್ತು ಆಫ್ರಿಕಾ ಸೇರಿದಂತೆ ವಿದೇಶದ ಸುಮಾರು 300 ವಿದ್ಯಾರ್ಥಿಗಳು ಗುಜರಾತ್ ವಿ.ವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಘಟನೆಯು ಹಾಸ್ಟೆಲ್‌ನ 'ಎ' ಬ್ಲಾಕ್‌ನಲ್ಲಿ ನಡೆದಿದ್ದು, ಅಲ್ಲಿ ವಿದೇಶದ ಸುಮಾರು 75 ವಿದ್ಯಾರ್ಥಿಗಳು ತಂಗಿದ್ದಾರೆ.

'ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ'


ನವದೆಹಲಿ: ಗುಜರಾತ್ ವಿ.ವಿ ಹಾಸ್ಟೆಲ್‌ನಲ್ಲಿ ಹಿಂಸಾಕೃತ್ಯ ಎಸಗಿದವರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. 'ಶನಿವಾರ ರಾತ್ರಿ ನಡೆದ ಘಟನೆಯನ್ನು ಗುಜರಾತ್ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಿದೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಸಂಧಾನಕ್ಕೆ ಬಗ್ಗದ ಈಶ್ವರಪ್ಪ

ಮೋದಿ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ನಕಾರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಮ್ಮ ಮಗ ಕೆ.ಇ. ಕಾಂತೇಶ್‌ಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿಲ್ಲ ಎಂಬುದರಿಂದ ಆಕ್ರೋಶಗೊಂಡಿರುವ ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ ಅವರ ಸಿಟ್ಟು ಇನ್ನೂ ಶಮನವಾಗಿಲ್ಲ.



'ಸೋಮವಾರ ಶಿವಮೊಗ್ಗದಲ್ಲಿ ನಡೆಯಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಿ ವೇದಿಕೆ ಹಂಚಿಕೊಳ್ಳಲು ಸಾಧ್ಯವಿಲ್ಲ' ಎಂದು ಈಶ್ವರಪ್ಪ ಹೇಳಿದ್ದಾರೆ.

ಭಾನುವಾರ ಮನವೊಲಿಕೆಗೆ ಬಂದಿದ್ದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮೋಹನ್ ಅಗರ್‌ವಾಲ್ ಹಾಗೂ ಶಾಸಕರಾದ ಆರಗ ಜ್ಞಾನೇಂದ್ರ, ಡಿ.ಎಸ್. ಅರುಣ್ ಅವರನ್ನೊಳಗೊಂಡ ನಿಯೋಗದೊಂದಿಗೆ ಚರ್ಚಿಸಿದರು. 'ಯಾವುದೇ ಕಾರಣಕ್ಕೂ ಸ್ಪರ್ಧೆಯ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

4ನೇ ಪುಟ ನೋಡಿ

ಪಟ್ಟು ಬದಲಿಸದ ರೇಣುಕಾಚಾರ್ಯ

ದಾವಣಗೆರೆ: 'ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬದಲಾಗಬೇಕು' ಎಂದು ಪಟ್ಟು ಹಿಡಿದಿರುವ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಬಣ, 'ಶಿವಮೊಗ್ಗದಲ್ಲಿ ಸೋಮವಾರ (ಮಾ.18) ನಡೆಯಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಪಾಲ್ಗೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ಭಾನುವಾರ ಮತ್ತೊಂದು ಸುತ್ತಿನ ಸಭೆ ನಡೆಸಿದ ಬಳಿಕ ಮಾತನಾಡಿದ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, 'ಮೋದಿ ಮತ್ತೆ ಪ್ರಧಾನಿಯಾಗಬೇಕು ಎಂಬುದು ನಮ್ಮೆಲ್ಲರ ಬಯಕೆ. ಸಂಸದ ಜಿ.ಎಂ. ಸಿದ್ದೇಶ್ವರ ಅವರ ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ಪಕ್ಷಕ್ಕೆ ಸೋಲಾಗಲಿದೆ. ಬೇರೆಯವರಿಗೆ ಟಿಕೆಟ್ ನೀಡಬೇಕು' ಎಂದು ಒತ್ತಾಯಿಸಿದರು.

4ನೇ ಪುಟ ನೋಡಿ

ಹೊಸಬಾಳೆ ಪುನರಾಯ್ಕೆ

ನಾಗ್ಪುರ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹರಾಗಿ ದತ್ತಾತ್ರೇಯ ಹೊಸಬಾಳೆ ಅವರು ಪುನರಾಯ್ಕೆಯಾಗಿದ್ದಾರೆ.



ನಾಗ್ಪುರದ ರೇಶಿಂಬಾಗ್‌ನ ಸ್ಮೃತಿ ಭವನದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಹೊಸಬಾಳೆ ಅವರನ್ನು ಭಾನುವಾರ ಪುನರಾಯ್ಕೆ ಮಾಡಲಾಗಿದೆ.

69 ವರ್ಷದ ಹೊಸಬಾಳೆ ಅವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನವರು.

4ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬೀದರ್‌ನಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲೆಯ ಹಲವೆಡೆ ಗುಡುಗು, ಮಿಂಚು ಸಹಿತ ಜೋರಾಗಿ ಭಾನುವಾರ ಸಂಜೆ ಮಳೆಯಾಗಿದೆ. ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ಕೊಂಚ ನೆಮ್ಮದಿ ನೀಡಿತು.

ಜಿಲ್ಲೆಯ ಬೀದರ್, ಔರಾದ್, ಚಿಟಗುಪ್ಪ, ಹುಮನಾಬಾದ್ ಹಾಗೂ ಭಾಲ್ಕಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ವರ್ಷಧಾರೆಯಾಗಿದೆ. ಬಿರುಗಾಳಿ ಸಹಿತ ಜೋರು ಮಳೆಗೆ ಬೀದರ್ ತಾಲ್ಲೂಕಿನ ಚಿಲ್ಲರ್ಗಿ ಗ್ರಾಮದಲ್ಲಿ ಚುನಾವಣೆ ಅಕ್ರಮದ ಮೇಲೆ ನಿಗಾ ವಹಿಸಲು ತೆರೆಯಲಾಗಿದ್ದ ಚೆಕ್‌ಪೋಸ್ಟ್‌ಗೆ ಹಾನಿಯಾಗಿದೆ. ಗಾಳಿಗೆ ಟೆಂಟ್ ಕಿತ್ತುಹೋಗಿ, ಒಳಗಿದ್ದ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸಿಬ್ಬಂದಿ, ವಸ್ತುಗಳೆಲ್ಲ ನೀರಿನಲ್ಲಿ ನೆನೆದಿವೆ. ರಾಶಿಗೆ ಬಂದಿದ್ದ ಜೋಳಕ್ಕೆ ಹಲವೆಡೆ ಹಾನಿಯಾಗಿದೆ.

ಔರಾದ್ ತಾಲ್ಲೂಕಿನ ಚಿಕ್ಲಿ (ಜೆ) ಗ್ರಾಮದಲ್ಲಿ ವಿದ್ಯುತ್ ಕಂಬ ಧರೆಗುರುಳಿದೆ. ಸಂಜೆ 4 ಗಂಟೆ ಸುಮಾರಿಗೆ ಆರಂಭಗೊಂಡ ಮಳೆ 5.30ರ ವರೆಗೆ ಜೋರಾಗಿ ಸುರಿಯಿತು. ರಾತ್ರಿ 8.30ರ ನಂತರವೂ ಜಿಟಿಜಿಟಿ ಮಳೆ ಮುಂದುವರಿದಿತ್ತು.



ಬೀದರ್‌ನಲ್ಲಿ ಭಾನುವಾರ ಜೋರು ಮಳೆ ಸುರಿದಿದ್ದು, ಶಿವನಗರ ಮುಖ್ಯರಸ್ತೆಯಲ್ಲಿ ಭಾರಿ ಪ್ರಮಾಣದಲ್ಲಿ ನೀರು ನಿಂತಿತ್ತು –ಪ್ರಜಾವಾಣಿ ಚಿತ್ರ

2023–2024ರ ಜನವರಿವರೆಗೆ 4,546 ಪ್ರಕರಣ : 4 ವರ್ಷಗಳಲ್ಲೇ ಕನಿಷ್ಠ

ನವಜಾತ ಶಿಶು ಮರಣ ಪ್ರಮಾಣ ಇಳಿಕೆ

• ಶಿವರಾಯ ಪೂಜಾರಿ

ಹುಬ್ಬಳ್ಳಿ: ಆಸ್ಪತ್ರೆಗಳಲ್ಲಿ ಉತ್ತಮ ಆರೋಗ್ಯ ಸೌಲಭ್ಯಗಳ ಲಭ್ಯತೆ ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್ ಜಾರಿ ಬಳಿಕ ರಾಜ್ಯದಲ್ಲಿ ನವಜಾತ ಶಿಶುಗಳ ಸಾವಿನ ಪ್ರಮಾಣ ಒಂದು ವರ್ಷದಲ್ಲಿ ಇಳಿಕೆಯಾಗಿದೆ.

2022ರ ಏಪ್ರಿಲ್‌ನಿಂದ 2023ರ ಮಾರ್ಚ್‌ವರೆಗೆ 7,471 ನವಜಾತ ಶಿಶುಮರಣ ಪ್ರಕರಣ ವರದಿಯಾಗಿದ್ದರೆ, 2023ರ ಏಪ್ರಿಲ್‌ನಿಂದ 2024ರ ಜನವರಿವರೆಗೆ 4,546 ಪ್ರಕರಣಗಳು ವರದಿಯಾಗಿವೆ. ಇದು ಕಳೆದ ನಾಲ್ಕು ವರ್ಷಗಳಲ್ಲೇ ದಾಖಲಾದ ಕನಿಷ್ಠ ಶಿಶು ಮರಣ ಪ್ರಮಾಣ. 2021–22ರಲ್ಲಿ 6,293, 2021–22ರಲ್ಲಿ 6,722 ನವಜಾತ ಶಿಶುಗಳ ಮರಣವಾಗಿತ್ತು.

'2023–24ರಲ್ಲಿ ಮೈಸೂರಿನಲ್ಲಿ 437, ಕೊಪ್ಪಳ-371, ರಾಯಚೂರು-365, ಕಲಬುರಗಿ- 363 ಮತ್ತು ಬಳ್ಳಾರಿಯಲ್ಲಿ 323 ಅತಿ ಹೆಚ್ಚು ಶಿಶು ಮರಣ ಪ್ರಕರಣಗಳು ದಾಖಲಾಗಿವೆ. ಬೆಂಗಳೂರು ಗ್ರಾಮಾಂತರದಲ್ಲಿ 8, ರಾಮನಗರದಲ್ಲಿ 13 ಮತ್ತು ಹಾವೇರಿಯಲ್ಲಿ 18 ಶಿಶು ಮರಣ ಸಂಭವಿಸಿವೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಗಳು ತಿಳಿಸಿವೆ.

> **ರಾಷ್ಟ್ರೀಯ ಆರೋಗ್ಯ ನೀತಿಯು 2025ರೊಳಗೆ ಶಿಶುಮರಣ ಪ್ರಮಾಣ ಪ್ರತಿ ಸಾವಿರಕ್ಕೆ ಸರಾಸರಿ ಶೇ 16ಕ್ಕಿಂತ ಕಡಿಮೆ ಮಾಡಲು ನಿಗದಿಪಡಿಸಿತ್ತು. ರಾಜ್ಯವು ಮುಂಚಿತವಾಗಿಯೇ ಈ ಸಾಧನೆ ಮಾಡಿದ್ದು, ಸದ್ಯ ಶೇ 14ರಷ್ಟು ಶಿಶುಮರಣ ಪ್ರಮಾಣವಿದೆ**
> **ದಿನೇಶ್ ಗುಂಡೂರಾವ್,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ

> **ಗರ್ಭಿಣಿಯರ, ಬಾಣಂತಿಯರ ಆರೋಗ್ಯ ಉತ್ತಮಪಡಿಸಲು ಆರೋಗ್ಯ ಪರೀಕ್ಷೆ, ಜಾಗೃತಿ, ಸ್ತನ್ಯಪಾನ ಸಪ್ತಾಹ ಹಾಗೂ ಶಿಶುಗಳಿಗೆ ವಿಶೇಷ ಆರೈಕೆ ಯೋಜನೆಗಳು ಜಾರಿಯಲ್ಲಿವೆ**
> **ಶಶಿ ಪಾಟೀಲ,** ಜಿಲ್ಲಾ ಆರೋಗ್ಯಾಧಿಕಾರಿ, ಧಾರವಾಡ

'ಗರ್ಭಿಣಿಯರಲ್ಲಿ ರಕ್ತಹೀನತೆ, ಅವಧಿ ಪೂರ್ವ ಜನನ, ಕಡಿಮೆ ತೂಕ ಮತ್ತು ಹುಟ್ಟಿದ ತಕ್ಷಣ ಉಸಿರಾಟದ ತೊಂದರೆ, ನ್ಯುಮೋನಿಯಾ, ಕಾಮಾಲೆ ಸೇರಿ ವಿವಿಧ ರೋಗಗಳಿಂದ ಶಿಶು ಮರಣವಾಗುತ್ತಿದೆ' ಎನ್ನುತ್ತಾರೆ ವೈದ್ಯರು.

ಈ ಮುಂಚೆ ಗ್ರಾಮೀಣ ಪ್ರದೇಶಗಳಲ್ಲಿ ಮನೆಯಲ್ಲೇ ಹೆರಿಗೆ ಮಾಡಿಸುವ ಪ್ರಕರಣಗಳು ಹೆಚ್ಚಾಗಿದ್ದವು. ಇದರಿಂದ ನವಜಾತ ಶಿಶುವಿನ ಸಾವಿನ ಪ್ರಮಾಣ ಹೆಚ್ಚಾಗಿತ್ತು. ಇದೀಗ ಆರೋಗ್ಯ ಇಲಾಖೆಯು ತಾಯಿ ಮತ್ತು ಶಿಶುವಿನ ಆರೋಗ್ಯ ಸುಧಾರಣೆಗೆ ಮಹತ್ತರ ಯೋಜನೆಗಳನ್ನು ಕೈಗೊಂಡಿದೆ.

4ನೇ ಪುಟ ನೋಡಿ

ಚಿನ್ನಾಭರಣ ಮಳಿಗೆ ಮೇಲೆ ಗುಂಡಿನ ದಾಳಿ ಪ್ರಕರಣ • ಆರೋಪಿಯೊಬ್ಬನಿಗೂ ತಗುಲಿದ್ದ ಗುಂಡು

ಮಧ್ಯಪ್ರದೇಶದಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಬಳಿಯ ದೇವಿನಗರದಲ್ಲಿರುವ ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆಗೆ ನುಗ್ಗಿ ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳು ಮಧ್ಯಪ್ರದೇಶದಲ್ಲಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

‘ಮಾರ್ಚ್ 14ರಂದು ಬೆಳಿಗ್ಗೆ 11 ಗಂಟೆಗೆ ಮಳಿಗೆಗೆ ನುಗ್ಗಿದ್ದ ಆರೋಪಿಗಳು, ಮಾಲೀಕ ಹಾಪುರಾಮ್ (38) ಹಾಗೂ ಅನಂತರಾಮ್ (21) ಮೇಲೆ ಎರಡು ಸುತ್ತು ಗುಂಡು ಹಾರಿಸಿದ್ದರು. ನಂತರ, ಮಳಿಗೆ ಎದುರು ಗಾಳಿಯಲ್ಲಿ ಗುಂಡು ಹಾರಿಸಿ ಪರಾರಿಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳು ಯಾವುದೇ ಚಿನ್ನಾಭರಣ ದೋಚಿಕೊಂಡು ಹೋಗಿರಲಿಲ್ಲ. ಹೀಗಾಗಿ, ಪ್ರಕರಣದಲ್ಲಿ ಸಾಕಷ್ಟು ಅನುಮಾನಗಳು ಇದ್ದವು. ಕೆಲ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿದ್ದ ವಿಶೇಷ ತಂಡದ ಸದಸ್ಯರು, ಮಧ್ಯಪ್ರದೇಶಕ್ಕೆ ಹೋಗಿದ್ದಾರೆ. ಅಲ್ಲಿಯೇ ನಾಲ್ವರು ಆರೋಪಿಗಳನ್ನು ಸ್ಥಳೀಯ ಪೊಲೀಸರ ಸಹಾಯದಿಂದ ವಶಕ್ಕೆ ಪಡೆದಿದ್ದಾರೆ. ಸದ್ಯದಲ್ಲೇ ನಗರಕ್ಕೆ ಕರೆತರಲಿದ್ದಾರೆ’ ಎಂದು ತಿಳಿಸಿದರು.

ಸಣ್ಣ ಮಳಿಗೆಗಳಲ್ಲಿ ಕಳ್ಳತನ: ‘ಮಳಿಗೆಗೆ ನುಗ್ಗಿ ಗುಂಡಿನ ದಾಳಿ ನಡೆದಿದ್ದ ಪ್ರಕರಣದಲ್ಲಿ ಮಧ್ಯಪ್ರದೇಶದ ಖಾನಾ ಪಂಡಿತ್, ಮೋಸೆ ಅಲಿಯಾಸ್ ಬಂಟಿ, ಆಶು ಪಂಡಿತ್ ಹಾಗೂ ಸೂರಜ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಈ ನಾಲ್ವರು ಸಣ್ಣ ಚಿನ್ನಾಭರಣ ಮಳಿಗೆಗಳನ್ನು ಗುರುತಿಸಿ ದರೋಡೆ ಮಾಡುತ್ತಿದ್ದರೆಂಬ ಮಾಹಿತಿ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಹಾರಾಷ್ಟ್ರ, ಮಧ್ಯಪ್ರದೇಶದಲ್ಲೂ ಆರೋಪಿಗಳು ಹಲವು ಮಳಿಗೆಗಳಲ್ಲಿ ದರೋಡೆ ಮಾಡಿದ್ದರು. ಇವರ ಕೃತ್ಯಕ್ಕೆ ಸ್ಥಳೀಯ ವ್ಯಕ್ತಿಗಳು ಸಹಕಾರ ನೀಡುತ್ತಿದ್ದರು. ಬೆಂಗಳೂರಿನಲ್ಲಿ ನಡೆದ ದರೋಡೆಯಲ್ಲೂ ಸ್ಥಳೀಯ ವ್ಯಕ್ತಿಯೊಬ್ಬ ಸಹಾಯ ಮಾಡಿದ್ದು, ಆತನ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ತಿಳಿಸಿದರು.

ಗುಂಡೇಟು ಬಿದ್ದಿದ್ದಕ್ಕೆ ಪರಾರಿ: ‘ಮಳಿಗೆ ಮಾಲೀಕ ಹಾಗೂ ಕೆಲಸಗಾರನ ಮೇಲೆ ಗುಂಡು ಹಾರಿಸಿದ್ದ ಆರೋಪಿಗಳು, ಚಿನ್ನಾಭರಣ ಬಿಟ್ಟು ಪರಾರಿಯಾಗಿದ್ದರು. ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಿದಾಗ, ಆರೋಪಿಗೆ ಗುಂಡೇಟು ತಗುಲಿದ್ದ ಸಂಗತಿ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಮಳಿಗೆಯೊಳಗೆ ಎರಡು ಬಾರಿ ಗುಂಡು ಹಾರಿಸಿದ್ದರು. ಎರಡೂ ಗುಂಡುಗಳು ಮಾಲೀಕ ಹಾಗೂ ಕೆಲಸಗಾರನಿಗೆ ತಗುಲಿದ್ದವು. ಮಳಿಗೆ ಹೊರಗಿದ್ದ ಆರೋಪಿಯೊಬ್ಬ ಹಾರಿಸಿದ್ದ ಗುಂಡು, ಮಳಿಗೆಯೊಳಗಿದ್ದ ಆರೋಪಿಯೊಬ್ಬನ ಗಂಟಲಿನ ಚರ್ಮಕ್ಕೆ ತಗುಲಿ, ರಕ್ತ ಸೋರಲಾರಂಭಿಸಿತ್ತು. ಇದೇ ಕಾರಣಕ್ಕೆ ನಾಲ್ವರು ಆರೋಪಿಗಳು ಸ್ಥಳದಲ್ಲೇ ಒಂದು ಪಿಸ್ತೂಲ್ ಬಿಸಾಡಿ ಹೊರಟು ಹೋಗಿದ್ದರು’ ಎಂದು ತಿಳಿಸಿದರು.

‘ಬೈಕ್‌ಗಳನ್ನು ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿದ್ದ ಆರೋಪಿಗಳು, ರೈಲಿನಲ್ಲಿ ಮಧ್ಯಪ್ರದೇಶಕ್ಕೆ ಹೋಗಿದ್ದರು. ಗಾಯಗೊಂಡಿದ್ದ ಆರೋಪಿಯನ್ನು ಆಸ್ಪತ್ರೆಗೆ ದಾಖಲಿಸಿದ್ದರು’ ಎಂದರು.

ಮುಂಬೈನಿಂದ ಬೆಂಗಳೂರಿಗೆ ಬಂದಿದ್ದರು

‘ಬೇರೆ ಬೇರೆ ರಾಜ್ಯಗಳಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಕಡಿಮೆ ಗ್ರಾಹಕರು ಇರುವ ಚಿನ್ನಾಭರಣ ಮಳಿಗೆಗಳನ್ನು ಗುರುತಿಸುತ್ತಿದ್ದರು. ಮಾರ್ಚ್ ಮೊದಲ ವಾರದಲ್ಲಿ ಮುಂಬೈಗೆ ಹೋಗಿದ್ದ ಆರೋಪಿಗಳು, ಅಲ್ಲಿಯ ಮಳಿಗೆಯೊಂದಕ್ಕೆ ನುಗ್ಗಿ ಪಿಸ್ತೂಲ್ ತೋರಿಸಿ ದರೋಡೆ ಮಾಡಿದ್ದರು. ಇದಾದ ನಂತರ, ಬೆಂಗಳೂರಿಗೆ ಬಂದು ಲಕ್ಷ್ಮಿ ಬ್ಯಾಂಕರ್ಸ್ ಆ್ಯಂಡ್ ಜ್ಯುವೆಲರ್ಸ್ ಮಳಿಗೆಗೆ ನುಗ್ಗಿ ಗುಂಡು ಹಾರಿಸಿ ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ಚಿನ್ನಾಭರಣ ಮಳಿಗೆಯೊಂದರಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಹೊಸಕೆರೆಹಳ್ಳಿಯ ಕೃಷ್ಣ ಬ್ಯಾಂಕರ್ಸ್ ಮತ್ತು ಜ್ಯುವೆಲರ್ಸ್ ಮಳಿಗೆಯಲ್ಲಿ ಮಾರ್ಚ್ 4ರಂದು ಕಳ್ಳತನ ನಡೆದಿತ್ತು. ಈ ಬಗ್ಗೆ ಮಾಲೀಕ ದೂರು ನೀಡಿದ್ದರು. ಆರೋಪಿಗಳಾದ ಮುಬಾರಕ್ ಹಾಗೂ ಅಸ್ಗರ್‌ನನ್ನು ತಮಿಳುನಾಡಿನಲ್ಲಿ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳಿಂದ ₹2.70 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಆರೋಪಿಗಳು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ತಿಳಿಸಿವೆ.

‘ಚಿನ್ನದ ಉಂಗುರ ಖರೀದಿಸುವ ನೆಪದಲ್ಲಿ ಆರೋಪಿಗಳು ಮಳಿಗೆಗೆ ಹೋಗಿದ್ದರು. ವಿವಿಧ ವಿನ್ಯಾಸದ ಉಂಗುರ ತೋರಿಸುವಂತೆ ಸಿಬ್ಬಂದಿಗೆ ಹೇಳಿದ್ದರು. ಸಿಬ್ಬಂದಿ, ಉಂಗುರ ತೋರಿಸುವುದರಲ್ಲಿ ನಿರತರಾಗಿದ್ದರು. ಇದೇ ಸಂದರ್ಭದಲ್ಲಿ ಚಿನ್ನದ ಉಂಗುರವನ್ನು ಆರೋಪಿಗಳು ಕದ್ದಿಟ್ಟುಕೊಂಡಿದ್ದರು. ಯಾವ ಉಂಗುರವೂ ಸರಿ ಇಲ್ಲವೆಂದು ಹೇಳಿ ಮಳಿಗೆಯಿಂದ ಕಾಲ್ಕಿತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಕೆಲ ನಿಮಿಷಗಳ ನಂತರ ಪರಿಶೀಲನೆ ನಡೆಸಿದಾಗ, ಉಂಗುರ ಕಳ್ಳತನವಾಗಿರುವುದು ಗೊತ್ತಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿಗಳ ಕೃತ್ಯ ಸೆರೆಯಾಗಿತ್ತು. ಅದೇ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿವೆ.

ಪೊಲೀಸರ ಮೇಲೆ ಹಲ್ಲೆಗೆ ಯತ್ನ: ‘ಕೃತ್ಯ ಎಸಗಿದ್ದ ನಂತರ ಆರೋಪಿಗಳು ತಮಿಳುನಾಡಿಗೆ ಹೋಗಿ ತಲೆಮರೆಸಿಕೊಂಡಿದ್ದರು. ಈ ಬಗ್ಗೆ ಮಾಹಿತಿ ಪಡೆದಿದ್ದ ಪೊಲೀಸರ ತಂಡ ತಮಿಳುನಾಡಿಗೆ ಹೋಗಿದ್ದರು. ಪೊಲೀಸರ ಮೇಲೆಯೇ ಆರೋಪಿಗಳು ಹಲ್ಲೆಗೆ ಯತ್ನಿಸಿದ್ದರು’ ಎಂದು ಮೂಲಗಳು ಹೇಳಿವೆ.



ಮಹಿಳಾ ದಿನಾಚರಣೆ

ಬೆಂಗಳೂರು ಪೊಲಿಟಿಕಲ್ ಆಕ್ಷನ್ ಕಮಿಟಿ (ಬಿ.ಪ್ಯಾಕ್), ಸಿಎಸ್‌ಆರ್ ಹಾಗೂ ಸಿಜಿಐ ವತಿಯಿಂದ ‘ಶಿ ಅರೈಸಸ್ - ವುಮೆನ್ಟಮ್’ ಶೀರ್ಷಿಕೆಯಡಿ ನಗರದ ಎಂ.ಜಿ. ರಸ್ತೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಟಿ ಪ್ರಿಯಾಂಕಾ ಉಪೇಂದ್ರ ಉದ್ಘಾಟಿಸಿದರು. ಮಹಿಳಾ ಆಟೊ ಚಾಲಕರಾದ ವಿಜಯಲಕ್ಷ್ಮಿ, ಪರಮೇಶ್ವರಿ, ಬೈಕರ್‌ಗಳಾದ ಐಶ್ವರ್ಯ ಗೌಡ, ಹರ್ಷಿಣಿ ವೆಂಕಟೇಶ್, ಸಂಸ್ಥೆಯ ಮುಖ್ಯಸ್ಥರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಟ್ಯಾಂಕರ್ ನೋಂದಣಿ ಮಾಡಿಸದ ಮಾಲೀಕರ ವಿರುದ್ಧ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಖಾಸಗಿ ನೀರಿನ ಟ್ಯಾಂಕರ್‌ಗಳ ನೋಂದಣಿ ಕಾರ್ಯ ಮುಗಿದಿದ್ದು, ಶೇ 95ರಷ್ಟು ಟ್ಯಾಂಕರ್‌ಗಳು ನೋಂದಣಿಯಾಗಿವೆ. ನೋಂದಣಿ ಮಾಡಿಸದ ಟ್ಯಾಂಕರ್‌ಗಳ ಮಾಲೀಕರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು‘ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

‘ಕೆಲವೆಡೆ ಟ್ರ್ಯಾಕ್ಟರ್‌ಗಳನ್ನು ಮಾರ್ಪಡಿಸಿ ನೀರಿನ ಟ್ಯಾಂಕರ್‌ಗಳಾಗಿ ಪರಿವರ್ತಿಸಲಾಗಿದೆ. ಇವುಗಳ ಮೇಲೆಯೂ ನಿಗಾ ಇಡಲಾಗುವುದು. ನೋಂದಣಿಗಾಗಿ ಗಡುವು ನೀಡಿದ ಅವಧಿಯಲ್ಲಿ ನೋಂದಣಿ ಮಾಡದಿರುವ ಖಾಸಗಿ ನೀರಿನ ಟ್ಯಾಂಕರ್‌ಗಳ ಮಾಲೀಕರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು‘ ಎಂದು ಹೇಳಿದರು.

ನಗರದ ಬಾಷ್ಯಂ ಪಾರ್ಕ್, ದೀನ ಬಂಧು ನಗರ, ಶ್ರೀ ರಾಮನಗರಿ ಸೇರಿದಂತೆ ಕೆಲವು ಕೊಳೆಗೇರಿ ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿ ನಾಗರಿಕರಿಂದ ನೀರಿನ ಪೂರೈಕೆ ಕುರಿತು ಅವರು ಮಾಹಿತಿ ಪಡೆದುಕೊಂಡರು.

‘ಕಾವೇರಿ ನೀರಿನ ಸಂಪರ್ಕವಿರುವ ಪ್ರದೇಶಗಳಲ್ಲಿ ಸಮರ್ಪಕವಾಗಿ ನೀರು ಪೂರೈಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಗರದ ಎಲ್ಲಾ ಭಾಗಗಳಲ್ಲಿ ಟ್ಯಾಂಕ್‌ಗಳನ್ನು ಅಳವಡಿಸಿ, ಉಚಿತವಾಗಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ’ ಎಂದರು.

‘ನಗರದ ಹೊರವಲಯದಲ್ಲಿರುವ ಗ್ರಾಮಗಳಿಗೆ ಇನ್ನೂ ಕಾವೇರಿ ನೀರಿನ ಸಂಪರ್ಕ ನೀಡಿಲ್ಲ. ಇಲ್ಲಿನ ನಿವಾಸಿಗಳು ಅಂತರ್ಜಲದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಈ ಪ್ರದೇಶಗಳಲ್ಲೂ ಬಿಬಿಎಂಪಿ ಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದರು.

‘ನಗರದ ಹೊರವಲಯದ ಗ್ರಾಮಗಳಿಗೂ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಟ್ಯಾಂಕರ್‌ಗೆ ಸ್ಟಿಕ್ಕರ್ ಕಡ್ಡಾಯ: ಸೂಚನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂ ನೋಂದಣಿಯಾಗಿರುವ ನೀರು ಸರಬರಾಜು ಟ್ಯಾಂಕರ್ ವಾಹನಗಳಿಗೆ ಕಡ್ಡಾಯವಾಗಿ ಸ್ಟಿಕ್ಕರ್‌ಗಳನ್ನು ಅಂಟಿಸಲು ಜಲಮಂಡಳಿ ಸೂಚನೆ ನೀಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಸ್ವಯಂ ನೋಂದಣಿಯಾಗಿರುವ ಟ್ಯಾಂಕರ್‌ಗಳನ್ನು ಆಯಾ ವಲಯವಾರು ನಿಯೋಜಿಸಲಾಗಿದೆ. ಈ ವಾಹನಗಳಿಗೆ ಜಲಮಂಡಳಿ ವತಿಯಿಂದ ಸ್ಟಿಕ್ಕರ್‌ಗಳನ್ನು ಸಿದ್ದಪಡಿಸಿ ಪಾಲಿಕೆಗೆ ನೀಡಿದೆ. ಆ ಸ್ಟಿಕ್ಕರ್‌ಗಳನ್ನು ವಲಯವಾರು ಹಂಚಿಕೆ ಮಾಡಲಾಗಿದೆ.

ಪ್ರತಿ ಟ್ಯಾಂಕರ್ ಮಾಲೀಕರು ಪಾಲಿಕೆಯಲ್ಲಿ ಸ್ವಯಂ ನೋಂದಣಿ ಮಾಡಿಕೊಂಡಿರುವ ನೋಂದಣಿ ಪ್ರಮಾಣಪತ್ರವನ್ನು ಹಾಗೂ ಪಾಲಿಕೆ ನೀಡಿರುವ ಸ್ಟಿಕರ್‌ನಲ್ಲಿ ವಾಹನದ ಸಂಖ್ಯೆ, ಮಾಲೀಕರ ಹೆಸರು, ದೂರವಾಣಿ ಸಂಖ್ಯೆ ಹಾಗೂ ಸ್ವಯಂ ನೋಂದಣಿಯಾಗಿರುವ ಸಂಖ್ಯೆಯನ್ನು ಹಾಗೂ ವಲಯದ ಹೆಸರು ನಮೂದಿಸಿ ವಾಹನದ ಮೇಲೆ ಕಡ್ಡಾಯವಾಗಿ ಅಂಟಿಸಬೇಕು. ಇಲ್ಲವಾದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು. ನೋಂದಣಿಯಾಗದ ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ ಮಾಡಲು ಅವಕಾಶ ಇರುವುದಿಲ್ಲ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

ನಿಗದಿಪಡಿಸಿರುವ ದರಕ್ಕಿಂದ ಹೆಚ್ಚಿಗೆ ಪಡೆದರೆ ಅಥವಾ ನೀರಿನ ಗುಣಮಟ್ಟದ ಸಮಸ್ಯೆ ಇದ್ದರೆ ಜಲಮಂಡಳಿಯ ಸಹಾಯವಾಣಿ ಸಂಖ್ಯೆ 1916ಗೆ ಹಾಗೂ ಪಾಲಿಕೆಯ ಸಹಾಯವಾಣಿ ಸಂಖ್ಯೆ 1533 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ಅಕಾಡೆಮಿ ಬೇಡ, ರಾಜ್ಯಸಭೆಗೆ ಪರಿಗಣಿಸಿ: ಅಕ್ಕೈ ಪದ್ಮಶಾಲಿ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವದಿಂದ ತಮ್ಮನ್ನು ಕೈಬಿಟ್ಟು, ವಿಧಾನ ಪರಿಷತ್ ಅಥವಾ ರಾಜ್ಯಸಭೆ ಸದಸ್ಯ ಸ್ಥಾನಕ್ಕೆ ಪರಿಗಣಿಸುವಂತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ಲೈಂಗಿಕ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಪತ್ರ ಬರೆದಿದ್ದಾರೆ.



‘ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಸಾಮಾಜಿಕ ಹಾಗೂ ರಾಜಕೀಯ ವಿಚಾರದ ನನ್ನ ಹೋರಾಟ ಪ್ರಪಂಚದಾದ್ಯಂತ ಪಸರಿಸಿದೆ. ನಮ್ಮ ಸಮುದಾಯದ ಶ್ರೇಯೋಭಿವೃದ್ಧಿಗೆ ಮತ್ತು ಸಾಮಾಜಿಕ ಬಹಿಷ್ಕಾರದ ವಿರುದ್ಧ ನನ್ನ ಹೋರಾಟ ಮುಂದುವರಿಯಲಿದ್ದು, ಈ ಕಾರಣಕ್ಕೆ ನನ್ನ ಮನವಿಯನ್ನು ಪರಿಗಣಿಸಬೇಕು’ ಎಂದು ಪತ್ರದಲ್ಲಿ ಕೇಳಿಕೊಂಡಿದ್ದಾರೆ.

ಬಲಿಜ ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ಸಾಧ್ಯತೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಲ್ಲಿ ಮುಂಚೂಣಿಯಲ್ಲಿದ್ದ ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಅವರ ಹೆಸರು ಹಿನ್ನೆಲೆಗೆ ಸರಿದಿದೆ.

ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಮತ್ತು ಮಾಜಿ ಸಚಿವ ಎನ್.ಎಚ್. ಶಿವಶಂಕರ ರೆಡ್ಡಿ ಅವರ ಹೆಸರು ಮುನ್ನೆಲೆಗೆ ಬಂದಿವೆ.

ಎರಡು ಬಾರಿ ಸಂಸದರಾಗಿದ್ದ ಮೊಯಿಲಿ ಅವರ ಹೆಸರು ಹಿನ್ನೆಲೆಗೆ ಸರಿಯಲು ಜಾತಿ ವಿಚಾರ ಪ್ರಮುಖ ಕಾರಣವಾಗಿದ್ದು, ಕ್ಷೇತ್ರದಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿರುವ ಬಲಿಜ ಸಮುದಾಯಕ್ಕೆ ಸೇರಿರುವ ರಕ್ಷಾ ರಾಮಯ್ಯ ಅವರ ಹೆಸರು ಘೋಷಣೆಯಾಗುವ ಖಚಿತ ಎನ್ನುತ್ತವೆ ಮೂಲಗಳು.

ಮಾರ್ಚ್ 2ರಂದು ಎಂ.ವೀರಪ್ಪ ಮೊಯಿಲಿ ಅವರ ‘ವಿಶ್ವಸಂಸ್ಕೃತಿ ಮಹಾಯಾನ’ ಗದ್ಯಕಾವ್ಯದ ಮೊದಲ ಸಂಪುಟ ಬಿಡುಗಡೆ ಕಾರ್ಯಕ್ರಮದ ನಂತರ ಅವರು ಚಿಕ್ಕಬಳ್ಳಾಪುರದಲ್ಲಿ ಹೆಚ್ಚು ಕಾಣಿಸಿಕೊಂಡಿಲ್ಲ. ಚುನಾವಣೆ ಹತ್ತಿರ ಬಂದಂತೆ ಮೊಯಿಲಿ ಅವರು ಕ್ಷೇತ್ರಕ್ಕೆ ಅಪರೂಪವಾಗಿದ್ದಾರೆ.

ನೀರಿನ ಸಮಸ್ಯೆ: ಇಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನೀರಿನ ಕೊರತೆಗೆ ಪರಿಹಾರ ಕಂಡುಕೊಳ್ಳುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ಉನ್ನತ ಮಟ್ಟದ ಸಭೆ ನಡೆಯಲಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ದೇವಸ್ಥಾನ ನಿರ್ವಹಣೆ: 21ರಿಂದ ಅಂತರರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ‘ದೇವಸ್ಥಾನ ನಿರ್ವಹಣೆ: ಐತಿಹಾಸಿಕ, ಕ್ರಿಯಾತ್ಮಕ ಮತ್ತು ಭವಿಷ್ಯದ ದೃಷ್ಟಿಕೋನಗಳು’ ವಿಷಯದ ಕುರಿತು ಚಾಣಕ್ಯ ವಿಶ್ವವಿದ್ಯಾಲಯವು ಅಂತರರಾಷ್ಟ್ರೀಯ ಸಮ್ಮೇಳನವನ್ನು ಮಾರ್ಚ್ 21 ಮತ್ತು 22ರಂದು ಹಮ್ಮಿಕೊಂಡಿದೆ.

ಸಮುದಾಯಗಳಿಗೆ ಆಧ್ಯಾತ್ಮಿಕ ಬೆಂಬಲದ ಕೇಂದ್ರಗಳಾಗಿರುವ ದೇವಾಲಯಗಳಿಂದ ಜ್ಞಾನ ಮತ್ತು ಸ್ಥಳೀಯ ಆರ್ಥಿಕತೆಗೆ ಕೊಡುಗೆ ಏನು? ಭಕ್ತರು, ದೈನಂದಿನ ಆಚರಣೆಗಳು, ವಾಸ್ತುಶಿಲ್ಪದ ನಿರ್ವಹಣೆಗಳ ಸ್ವರೂಪವೇನು ಎಂಬ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ.

ಹಿಂದೆ ದೇವಸ್ಥಾನಗಳಿಗೆ ರಾಜಮನೆತನಗಳ ಬೆಂಬಲ ಇತ್ತು. ಕುಟುಂಬಗಳು, ಶ್ರೀಮಂತ ವೈಯಕ್ತಿಕ ಪೋಷಕರು, ಸ್ಥಳೀಯ ಸಮುದಾಯಗಳು, ರಾಜ್ಯ ಸರ್ಕಾರಗಳು ದೇವಸ್ಥಾನಗಳನ್ನು ಈಗ ಹೇಗೆ ಪ್ರೋತ್ಸಾಹಿಸುತ್ತಿದ್ದಾರೆ? ಅಥವಾ ದೇವಾಲಯದ ಬೆಳವಣಿಗೆಗೆ ಅಡ್ಡಿಯಾಗಿವೆಯೇ? ಎಂಬ ಚರ್ಚೆಗಳು ಇರಲಿವೆ.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪ್ರಶಸ್ತಿ ಪ್ರದಾನ, ಅಭಿನಂದನಾ ಸಮಾರಂಭ: ಉದ್ಘಾಟನೆ: ಸುಧಾಮೂರ್ತಿ, ಉಪಸ್ಥಿತಿ: ಡಾ. ರಮೇಶ್ ಕೃಷ್ಣ ಕೆ., ಡಾ.ಆರ್.ಕೆ. ಸರೋಜ, ಅಧ್ಯಕ್ಷತೆ: ಡಾ. ಸುಜಾತ ರಾಥೋಡ್ ಬಿ.ಎಲ್., ಅತಿಥಿಗಳು: ಡಾ. ಅಸೀಮಾ ಬಾನು, ಡಾ. ಸವಿತಾ ಸಿ., ಡಾ. ದೀಪಕ್ ಎಸ್., ಆಯೋಜನೆ: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಬಿ.ಎಂ.ಸಿ.ಆರ್.ಐ ಸಭಾಂಗಣ, ಬೆಳಿಗ್ಗೆ 10.30

‘ಓಲ್ಡ್ ವೈನ್ ಇನ್ ನ್ಯೂ ಬಾಟಲ್’ ರಿಫ್ರೆಶ್ ಸಾಂಗ್ಸ್ ಆಲ್ಬಮ್ ಬಿಡುಗಡೆ: ಸಾಧು ಕೋಕಿಲ, ಪರಿಕಲ್ಪನೆ: ಗುರುರಾಜ, ಅತಿಥಿಗಳು: ವಿ. ಮನೋಹರ್, ಡಿಂಗ್ರಿ ನಾಗರಾಜ್, ಮುಕುಂದ್ ದೊಡ್ಡೇರಿ, ಆಯೋಜನೆ: ಸೌಂಡ್ ಆಫ್ ಮ್ಯೂಸಿಕ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

‘ರಾಘವೇಂದ್ರ ತಂತ್ರ’ ಧಾರ್ಮಿಕ ಪ್ರವಚನ: ಮರುತಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256



ತಲಘಟ್ಟಪುರ ಕೆರೆ: ಸಂಸ್ಕರಿಸಿದ ನೀರು ಹರಿಸಿ

ಬನಶಂಕರಿ 6ನೇ ಹಂತದ 4ನೇ ‘ಟಿ’ ಬ್ಲಾಕ್‌ಗೆ ಹೊಂದಿಕೊಂಡಿರುವ ತಲಘಟ್ಟಪುರ ಕೆರೆ ಒಣಗುತ್ತಿದೆ. ಇದರಿಂದ ಸಹಜವಾಗಿಯೇ ನಮ್ಮ ಬಡಾವಣೆ ಸೇರಿದಂತೆ ಅಕ್ಕಪಕ್ಕದಲ್ಲಿದ್ದ ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಇದು ಇಲ್ಲಿನ ನಿವಾಸಿಗಳ ಆತಂಕಕ್ಕೆ ಕಾರಣವಾಗಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ನೀರಿನ ಹಾಹಾಕಾರ ಹೆಚ್ಚಾಗಲಿದೆ. ಬೆಂಗಳೂರು ಜಲ ಮಂಡಳಿಯು ನಾಯಂಡಹಳ್ಳಿ ಕೆರೆ, ಚಿಕ್ಕಬಾಣಾವರ ಕೆರೆ, ಬೆಳ್ಳಂದೂರು, ವರ್ತೂರು, ಅಗರ ಸೇರಿದಂತೆ ಆರು ಕೆರೆಗಳಿಗೆ ಸಂಸ್ಕರಿಸಿದ ನೀರು ಹರಿಸುವುದಾಗಿ ಮಂಡಳಿಯ ಅಧ್ಯಕ್ಷ ವಿ. ರಾಮ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಈ ಪಟ್ಟಿಯಲ್ಲಿ ತಲ್ಲಘಟ್ಟಪುರ ಕೆರೆ ಇಲ್ಲ. ಕೂಡಲೇ ಈ ಕೆರೆಗೂ ಸಂಸ್ಕರಿಸಿದ ಶುದ್ಧ ನೀರು ಹರಿಸಬೇಕು.

ರಾ. ಜಯಸಿಂಹ, ತಲಘಟ್ಟಪುರ

ಬಸ್ ತಂಗುದಾಣ: ಕುಸಿದ ಚಾವಣಿ

ಕೃಷ್ಣರಾಜಪುರ ವಿಧಾನಸಭೆ ಕ್ಷೇತ್ರದ ದೇವಸಂದ್ರ ವಾರ್ಡ್‌ಗೆ ಸೇರಿದ ಕೃಷ್ಣರಾಜಪುರ ಬಸ್ ತಂಗುದಾಣದ ಚಾವಣಿ ಶಿಥಿಲಗೊಂಡು ಕುಸಿದುಬಿದ್ದಿದೆ. ಸರಿಯಾದ ನಿರ್ವಹಣೆಯ ಕೊರತೆಯಿಂದ ಗಬ್ಬೆದ್ದು ನಾರುತ್ತಿದೆ. ಇದರ ಪಕ್ಕದಲ್ಲಿ ಬಿಬಿಎಂಪಿ ಕಚೇರಿ ಮತ್ತು ಸಾರ್ವಜನಿಕ ಆಸ್ಪತ್ರೆ ಇದೆ. ಪ್ರಯಾಣಿಕರು ಬಿಸಿಲಲ್ಲೇ ಬಸ್‌ಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ. ಕೂಡಲೇ ಸ್ಥಳೀಯ ಶಾಸಕರು ಹಾಗೂ ಅಧಿಕಾರಿಗಳು ಈ ತಂಗುದಾಣದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ (ಕೃಷ್ಣರಾಜಪುರ)





ರಸ್ತೆ ಗುಂಡಿ ಮುಚ್ಚಿ

ಹೊಸಕೋಟೆ–ಚಿಂತಾಮಣಿ ರಸ್ತೆಯ ಸಿದ್ಧಾರ್ಥನಗರ ಬಳಿಯ ರಸ್ತೆಯಲ್ಲಿ ದೊಡ್ಡ ಗಾತ್ರದ ಗುಂಡಿಯಾಗಿದ್ದು, ಇದರಿಂದ ವಾಹನ ಸಂಚಾರಕ್ಕೆ ಅನನು- ಕೂಲವಾಗಿದೆ. ಈ ರಸ್ತೆಯಲ್ಲಿ ಅರ್ಧ ಅಡಿಯಷ್ಟು ಗುಂಡಿಯಾಗಿ ವರ್ಷಗಳೇ ಕಳೆದರೂ ಇಲ್ಲಿನ ಶಾಸಕರು ಅಥವಾ ಹೆದ್ದಾರಿ ಪ್ರಾಧಿಕಾರದವರಾಗಲಿ ಈ ರಸ್ತೆಯಲ್ಲಾಗಿರುವ ಗುಂಡಿ ದುರಸ್ತಿಗೊಳಿಸಲು ಮುಂದಾಗಿಲ್ಲ. ಇದರಿಂದ, ವಾಹನ ದಟ್ಟಣೆ ಆಗುತ್ತಿದೆ. ಜೊತೆಗೆ ಹಲವಾರು ಬೈಕ್ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

ದೀಪುರಾವ್, ಕೆಂಚನಪುರ



ರಸ್ತೆ ದುರಸ್ತಿಗೊಳಿಸಿ


ಬೈದರಹಳ್ಳಿಯ ಬಿಇಎಲ್ ಲೇಔಟ್‌ನ ಎರಡನೇ ಹಂತದಲ್ಲಿರುವ 60 ಅಡಿ ರಸ್ತೆಯಲ್ಲಿ ಗುಂಡಿಗಳಾಗಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ, ಬಡಾವಣೆ ನಿವಾಸಿಗಳ ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ, ರಸ್ತೆಯಲ್ಲಿ ದೊಡ್ಡ–ದೊಡ್ಡ ಗುಂಡಿಗಳು ಬಿದ್ದಿರುವ ಪರಿಣಾಮ ಅಪಘಾತಗಳು ಸಂಭವಿಸಿವೆ. ಬೆಳಗಿನ ಹಾಗೂ ಸಂಜೆ ವೇಳೆಯಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಇದರಿಂದ, ಕಚೇರಿ, ಶಾಲೆಗೆ ಹೋಗುವ ವಿದ್ಯಾರ್ಥಿಗಳ ತಡವಾಗಿ ತಲಪುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಬ್ರಿಜೇಶ್, ಬಿಇಎಲ್ ಲೇಔಟ್

ಅನಧಿಕೃತ ಪಾರ್ಕಿಂಗ್ ನಿಷೇಧಿಸಿ

ಹೊಸಕೆರೆಹಳ್ಳಿ ಕೆರೆಕೋಡಿ ಪುಷ್ಪಗಿರಿನಗರ ಮುಖ್ಯರಸ್ತೆಯ ಆರಂಭದಿಂದ ಸುಮಾರು ನೂರು ಮೀಟರ್‌ವರೆಗಿನ ರಸ್ತೆಯ ಎರಡು ಬದಿಯಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ಇಲ್ಲಿನ ಬಡಾವಣೆಯ ನಿವಾಸಿಗಳ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಈ ರಸ್ತೆಯ ಎರಡೂ ಬದಿಗಳಲ್ಲಿ ಟೆಂಪೊ, ಟ್ಯಾಕ್ಸಿ, ಮಿನಿ ಬಸ್, ಶಾಲಾ ಬಸ್, ಸರಕು–ಸಾಗಣೆ ವಾಹನಗಳನ್ನು ಮೂರು ದಿನಗಳವರೆಗೆ ಪಾರ್ಕಿಂಗ್ ಮಾಡಲಾಗುತ್ತಿದೆ. ಬಿಬಿಎಂಪಿ ಇಲ್ಲಿ ‘ನೋ ಪಾರ್ಕಿಂಗ್’ ಫಲಕ ಅಳವಡಿಸಬೇಕು. ಅಕ್ರಮವಾಗಿ ನಿಲುಗಡೆ ಮಾಡುವ ವಾಹನಗಳಿಗೆ ದಂಡ ಹಾಕಬೇಕು. ಸ್ಥಳೀಯ ನಿವಾಸಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು.

ರಾಮೇಗೌಡ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ



ಸಮಾಜ ಸೇವಾರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಜಾಣಗೆರೆ ವೆಂಕಟರಾಮಯ್ಯ

‘ತಮ್ಮವರ ಲಾಭಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿ ಮೊತ್ತ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದಿನ ಸರ್ಕಾರ ತಮ್ಮವರಿಗೆ ಲಾಭ ಮಾಡಿಕೊಡಲು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ಮೊತ್ತವನ್ನು ₹1 ಲಕ್ಷದಿಂದ ₹5 ಲಕ್ಷಕ್ಕೆ ಏರಿಸಿತ್ತು’ ಎಂದು ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಆರೋಪಿಸಿದರು.

ದಿವ್ಯಚೇತನ ಚಾರಿಟಬಲ್ ಟ್ರಸ್ಟ್ ಇತ್ತೀಚೆಗೆ ನಗರದಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಉತ್ಸವ ಮತ್ತು ಸಮಾಜ ಸೇವಾರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪ್ರಶಸ್ತಿ ಮೊತ್ತ ಹೆಚ್ಚಿಸಲೇಬೇಕಿದ್ದರೆ ₹1 ಲಕ್ಷ ಇದ್ದಿದ್ದನ್ನು ₹2 ಲಕ್ಷ ಮಾಡಬಹುದಿತ್ತು. ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ನಾನಿದ್ದೆ. ಪ್ರಶಸ್ತಿ ಮೊತ್ತವನ್ನು ₹2 ಲಕ್ಷಕ್ಕೆ ಇಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮಿತಿಯಿಂದ ತಿಳಿಸಲಾಗಿತ್ತು. ಕಡಿಮೆ ಮಾಡಿದರೆ ಸರ್ಕಾರ ದಿವಾಳಿಯಾಗಿದೆ ಎಂದು ವಿಪಕ್ಷದವರು ಆರೋಪ ಮಾಡುತ್ತಾರೆ. ಅಷ್ಟೇ ಇರಲಿ ಎಂದು ಮುಖ್ಯಮಂತ್ರಿ ಹೇಳಿದರು’ ಎಂದರು.

ಖಾಸಗಿ ಸಂಘಟನೆಗಳು ಕೂಡ ಉತ್ತಮ ಪ್ರಶಸ್ತಿಗಳನ್ನು ನೀಡುತ್ತಿವೆ. ಆದರೆ, ಕೆಲವು ಸಂಘಟನೆಗಳು ಹಣ ಪಡೆದು ಪ್ರಶಸ್ತಿ ನೀಡುವ ದಂಧೆ ಮಾಡುತ್ತಿರುವುದು ವಿಷಾದನೀಯ ಎಂದರು.

ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಬಗ್ಗೆ ಬಹಳಷ್ಟು ರಾಜಕೀಯ ನಾಯಕರಿಗೆ ದ್ವೇಷವಿದೆ. ಅಂಬೇಡ್ಕರ್ ಹೆಸರಿನಿಂದ ರಾಜಕೀಯ ಲಾಭ ಇದೆ ಎನ್ನುವ ಕಾರಣಕ್ಕೆ ಅವರ ಹೆಸರು ಬಳಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಡ್ಲೆಕೋಣ ವಾಲ್ಮೀಕಿ ಆಶ್ರಮದ ಸಂಜಯಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ದಿವ್ಯಚೇತನ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ರಾಮು, ಭಾಷಾಂತರ ಇಲಾಖೆ ನಿರ್ದೇಶಕ ಎಂ. ವೆಂಕಟೇಶ್, ಚೋನಮನೆ ಶನೇಶ್ವರ ದೇವಸ್ಥಾನದ ಧರ್ಮದರ್ಶಿ ಅಶೋಕ್ ಶೆಟ್ಟಿ, ನಿವೃತ್ತ ಜಿಲ್ಲಾಧಿಕಾರಿ ಸಣ್ಣನಾಯಕ, ನಿವೃತ್ತ ಪ್ರಧಾನ ಎಂಜಿನಿಯರ್ ಕೆಂಪರಾಮಯ್ಯ, ಪತ್ರಕರ್ತ ಡಿ.ಮುನಿರಾಜು, ಸಮಾಜಸೇವಕ ಎಂ.ವಿ. ಶಂಕರಪ್ಪ, ಸಹಕಾರ ಸಂಘಗಳ ಜಂಟಿ ನಿಬಂಧಕ ಲಕ್ಷ್ಮೀಪತಯ್ಯ, ಕಲಾವಿದರ ಕಲ್ಯಾಣ ವೇದಿಕೆ ಅಧ್ಯಕ್ಷ ಕೆಂಚನೂರು ಶಂಕರ ಉಪಸ್ಥಿತರಿದ್ದರು.



ನಗರದಲ್ಲಿ ಈಚೆಗೆ ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಅವರು ಟ್ರಸ್ಟ್‌ನ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿದರು. ಕೆಂಚನೂರು ಶಂಕರ, ಅಶೋಕ್ ಶೆಟ್ಟಿ, ಶಿರಾ ತಾಲ್ಲೂಕಿನ ಶಿಡ್ಲೆಕೋಣದ ವಾಲ್ಮೀಕಿ ಆಶ್ರಮದ ಸಂಜಯಕುಮಾರ ಸ್ವಾಮೀಜಿ ಮತ್ತು ಲಕ್ಷ್ಮೀಪತಯ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ.

ಜಿ.ಪಂ ಸಿಇಒ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ



ಅನುರಾಧ

ದೇವನಹಳ್ಳಿ: ಲೋಕಸಭಾ ಚುನಾವಣೆ ಘೋಷಣೆಯಾದ ಬೆನ್ನಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎನ್.ಅನುರಾಧ ಅವರ ವಿರುದ್ಧ ಚುನಾವಣಾ ಆಯೋಗದಲ್ಲಿ ದೂರು ದಾಖಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಆಪ್ತ ಕಾರ್ಯದರ್ಶಿ ಪತ್ನಿಯಾಗಿರುವ ಅನುರಾಧ ಅವರು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರ ಅಧಿಕಾರಿಗಳು ಕೆಲಸ ಮಾಡುವಂತೆ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿ ಯಲಹಂಕದ ವಕೀಲ ಜಿ.ಎನ್.ವೆಂಕಟರಮಣಪ್ಪ ದೂರು ನೀಡಿದ್ದಾರೆ. ಅವರನ್ನು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಬೇರೆಡೆಗೆ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಚುನಾವಣೆ ಆಯೋಗ ವಿಚಾರಣೆ ನಡೆಸಿ ಹೇಳಿಕೆ ಪಡೆದುಕೊಂಡಿದೆ.

ಉಚಿತ ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ಸಂಸ್ಥೆಯಿಂದ ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಅವಧಿಯಲ್ಲಿ ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಶನ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್ ಅಡ್ಮಿನಿಸ್ಟ್ರೇಶನ್‌ನಲ್ಲಿ 3 ತಿಂಗಳ ಉಚಿತ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತದೆ. ತರಗತಿಗಳು ಏ. 1ರಂದು ಪ್ರಾರಂಭವಾಗಲಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ, ಬೆಂಗಳೂರು, ಮಾಹಿತಿಗೆ: 080–23440036/ 94485 38107ಗೆ ಸಂಪರ್ಕಿಸಬಹುದು.

ಐಐಐಟಿ: 22ರಿಂದ ಉದ್ಯಮಶೀಲತಾ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ (ಐಐಐಟಿ-ಬಿ) ಮಾರ್ಚ್ 22, 23ರಂದು ಸಂಶೋಧನೆ, ನಾವೀನ್ಯ, ಸಮಾಜ ಮತ್ತು ಉದ್ಯಮಶೀಲತಾ (ರೈಸ್) ಸಮಾವೇಶ ಹಮ್ಮಿಕೊಂಡಿದೆ.

ಉದ್ದಿಮೆಗಳಲ್ಲಿನ ಪರಿಣತರು, ಶಿಕ್ಷಣ ಕ್ಷೇತ್ರದ ತಜ್ಞರು, ಚಿಂತಕರು ಸಮಾವೇಶದಲ್ಲಿ ಭಾಗವಹಿಸುವರು ಎಂದು ಐಐಐಟಿ-ಬಿ ನಿರ್ದೇಶಕ ದೇಬಬ್ರತ ದಾಸ್ ಹೇಳಿದ್ದಾರೆ.

ಸಂಶೋಧನೆ, ನಾವೀನ್ಯ ಮತ್ತು ಉದ್ಯಮಶೀಲತೆಯ ಸವಾಲುಗಳು ಮತ್ತು ಅವಕಾಶಗಳ ಕುರಿತು ಚರ್ಚೆ, ಸಂವಾದ ನಡೆಯಲಿದೆ. ಭಾರತೀಯ ನವೋದ್ಯಮಗಳು ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಹಂತಕ್ಕೆ ಬೆಳೆಯಲು ಭಾರತೀಯ ನವೋದ್ಯಮ ಸುಸ್ಥಿರ ಮತ್ತು ಸದೃಢವಾದ ಬೆಳವಣಿಗೆ ಕಾಣಲು ಅಗತ್ಯವಾದ ತಂತ್ರಗಳ ಬಗ್ಗೆ ಸಮಾವೇಶದಲ್ಲಿ ತಜ್ಞರು ಮಾಹಿತಿ ನೀಡಲಿದ್ದಾರೆ ಎಂದಿದ್ದಾರೆ.

ಶಿಕ್ಷಣ ಸಂಸ್ಥೆಗಳು ನಾವೀನ್ಯ ಮತ್ತು ಉದ್ದಿಮೆಶೀಲತೆಯ ಮೂಲ ಕೇಂದ್ರಗಳಾಗಿ ಹೊರಹೊಮ್ಮಬೇಕು ಎನ್ನುವುದು ಈ ಸಮಾವೇಶದ ಉದ್ದೇಶ. ಆಸಕ್ತ ವಿದ್ಯಾರ್ಥಿಗಳು ಐಐಐಟಿಯ ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಿ ಕೊಳ್ಳಬಹುದು ಎಂದು ಕೋರಿದ್ದಾರೆ.

19ರಂದು ಕಾಂಗ್ರೆಸ್ ಪ್ರಣಾಳಿಕೆಗೆ ಅಂತಿಮ ರೂಪ

ನವದೆಹಲಿ (ಪಿಟಿಐ): ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಲೋಕಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆ ರೂಪಿಸುವ ಕುರಿತು ಚರ್ಚಿಸಲು ಮಾರ್ಚ್ 19ರಂದು ಸಭೆ ಸೇರಲಿದ್ದು, ಪ್ರಣಾಳಿಕೆಗೆ ಅಂತಿಮ ರೂಪ ನೀಡಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ ಮಾರ್ಚ್ 19 ಮತ್ತು 20ರಂದು ಸಭೆ ಸೇರುವ ಸಾಧ್ಯತೆ ಇದ್ದು, ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಿದೆ.



ಪುನೀತ್ ಸಮಾಧಿ ದರ್ಶನಕ್ಕಾಗಿ ಸರತಿಯಲ್ಲಿ ನಿಂತಿರುವ ಅಭಿಮಾನಿಗಳು



ಅಶ್ವಿನಿ – ಪುನೀತ್ ರಾಜ್‌ಕುಮಾರ್ ಅವರ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡುತ್ತಿರುವ ಚಿಣ್ಣರು

‘ಜಾಕಿ’ ಸಿನಿಮಾ ಮರುಬಿಡುಗಡೆ

ಪುನೀತ್ ರಾಜ್‌ಕುಮಾರ್ ನಟಿಸಿರುವ 'ಜಾಕಿ' ಚಿತ್ರವನ್ನು ಮಾ.15 ರಂದು ಕೆಆರ್‌ಜಿ ಸ್ಟುಡಿಯೋ ಮರು ಬಿಡುಗಡೆ ಮಾಡಿತ್ತು. ಪುನೀತ್ ಜನ್ಮದಿನದ ಬೆನ್ನಲ್ಲೇ ಅವರ ಅಭಿಮಾನಿಗಳು ಚಿತ್ರ ವೀಕ್ಷಿಸಿ ಭಾವುಕರಾದರು. ಕೆಲ ಚಿತ್ರಮಂದಿರಗಳಲ್ಲಿ ದುನಿಯಾ ಸೂರಿ ನಿರ್ದೇಶನದ ಈ ಚಿತ್ರ ತುಂಬಿದ ಪ್ರದರ್ಶನ ಕಂಡಿತು. ಮುಂದಿನ ವರ್ಷದ ಜನ್ಮದಿನಕ್ಕೆ ‘ಅಪ್ಪು’ ಸಿನಿಮಾ ಮರುಬಿಡುಗಡೆ ಮಾಡುವುದಾಗಿ ಕೆಆರ್‌ಜಿ ಸ್ಟುಡಿಯೊ ಹೇಳಿದೆ.

ಪುನೀತ್ ಸಮಾಧಿ ಬಳಿ ಜನಸಾಗರ • ಅಭಿಮಾನಿಗಳಿಗೆ ಊಟ ಬಡಿಸಿದ ಪುತ್ರಿ • ರಕ್ತದಾನ, ನೇತ್ರದಾನ ನೋಂದಣಿ ಶಿಬಿರ

ನೆಚ್ಚಿನ ನಟನ ನೆನಪಿನಲ್ಲಿ ‘ಸ್ಫೂರ್ತಿ ಹಬ್ಬ’

ಬೆಂಗಳೂರು: ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ 49ನೇ ಜನ್ಮದಿನದ ಪ್ರಯುಕ್ತ ಭಾನುವಾರ ನಗರದಾದ್ಯಂತ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು.

ಕೆಲವೆಡೆ ರಕ್ತದಾನ, ನೇತ್ರದಾನದಂತಹ ಶಿಬಿರಗಳು ನಡೆದವು. ಅಭಿಮಾನಿಗಳು ಸಂಗೀತ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಅಪ್ಪು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರು ಅಭಿನಯಿಸಿರುವ ಚಿತ್ರದ ಗೀತೆಗಳನ್ನು ಹಾಡಿ ಸಂಭ್ರಮಿಸಿದರು. ಕೆಲವೆಡೆ ಕೇಕ್ ಕತ್ತರಿಸಿ, ಉಪಾಹಾರ ಹಂಚಿ ಜನ್ಮದಿನ ಸಂಭ್ರಮಿಸಲಾಯಿತು.

ರಾಘವೇಂದ್ರ ರಾಜ್‌ಕುಮಾರ್, ಅವರ ಸಹೋದರಿ ಪೂರ್ಣಿಮಾ ಮತ್ತು ಕುಟುಂಬದ ಸದಸ್ಯರೊಂದಿಗೆ ಪುನೀತ್ ಪುತ್ರಿ ವಂದಿತಾ ಕಂಠೀರವ ಸ್ಟುಡಿಯೊದಲ್ಲಿನ ಪುನೀತ್ ರಾಜ್‌ಕುಮಾರ್ ಸಮಾಧಿಗೆ ಪೂಜೆ ಸಲ್ಲಿಸಿದರು. ಶನಿವಾರ ರಾತ್ರಿಯಿಂದಲೇ ಪುನೀತ್ ಸಮಾಧಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಭಾನುವಾರ ಬೆಳಗಿನಿಂದಲೇ ಸಾವಿರಾರು ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ದರ್ಶನ ಪಡೆದರು. ಸಮಾಧಿ ದರ್ಶನಕ್ಕೆ ಬಂದಿದ್ದ ಅಭಿಮಾನಿಗಳಿಗೆ ರಾಜ್‌ಕುಮಾರ್ ಕುಟುಂಬದಿಂದ ಊಟದ ವ್ಯವಸ್ಥೆ ಮಾಡಲಾಗಿತ್ತು. ವಂದಿತಾ, ರಾಘವೇಂದ್ರ ರಾಜ್‌ಕುಮಾರ್ ಅವರ ಪುತ್ರರಾದ ವಿನಯ್ ರಾಜ್‌ಕುಮಾರ್ ಹಾಗೂ ಯುವ ರಾಜ್‌ಕುಮಾರ್ ಅಭಿಮಾನಿಗಳಿಗೆ ಊಟ ಬಡಿಸಿದರು.

‘ಎಂದೆಂದಿಗೂ ಹೃದಯದಲ್ಲಿ’

ಕಾರಣಾಂತರಗಳಿಂದ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಪುನೀತ್ ಪತ್ನಿ ಅಶ್ವಿನಿ ಅವರಿಗೆ ಸಾಧ್ಯವಾಗಲಿಲ್ಲ. ಅವರು ಸಾಮಾಜಿಕ ಮಾಧ್ಯಮದಲ್ಲಿ ಪುನೀತ್ ಕುರಿತು ಸಂದೇಶ ಹಂಚಿಕೊಂಡಿದ್ದಾರೆ. ‘ಅಪ್ಪು ಅವರ ಹುಟ್ಟುಹಬ್ಬದ ಸವಿನೆನಪಿನಲ್ಲಿ...ಅವರು ಎಂದೆಂದಿಗೂ ನಮ್ಮ ಹೃದಯಲ್ಲಿ’ ಎಂದು ಸಾಮಾಜಿಕ ಜಾಲತಾಣದಲ್ಲಿ ಭಾವುಕರಾಗಿ ಪೋಸ್ಟ್ ಮಾಡಿದ್ದಾರೆ.

ಸಮಾಧಿ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ನಟ ರಾಘವೇಂದ್ರ ರಾಜ್‌ಕುಮಾರ್, ‘ಅಪ್ಪು ಜನ್ಮದಿನ ಇಂದು ಸ್ಫೂರ್ತಿ ದಿನವಾಗಿದೆ. ಅಪ್ಪಾಜಿಯನ್ನು ದೇವರಾಗಿಸಿದ ಅಭಿಮಾನಿಗಳು ಅಪ್ಪುವನ್ನೂ ದೇವರಾಗಿಸಿದ್ದಾರೆ. ಅಪ್ಪು ನೆನಪಿಗೆ ಏನಾದರೂ ಉತ್ತಮ ಕೆಲಸ ಮಾಡಿ. ಆದರೆ, ಒಂದು ಭಾಗವನ್ನು ದಾನ, ಧರ್ಮಕ್ಕೆ ತೆಗೆದಿಡಿ. ಅಪ್ಪು ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ’ ಎಂದು ಹೇಳಿದರು.

ಶಿವರಾಜ್‌ಕುಮಾರ್, ‘ಅಪ್ಪು ಆಗಿ ಬಂದ ನೀನು ಪುನೀತನಾಗಿ ಎಲ್ಲರ ಮನದಲ್ಲೂ ಭದ್ರವಾಗಿ ಉಳಿದುಬಿಟ್ಟೆ. ಜನ ನಿನ್ನಲ್ಲಿ ದೇವರನ್ನು ಕಾಣುತ್ತಾರೆ. ಎಷ್ಟೋ ಜನರಿಗೆ ಮಾರ್ಗದರ್ಶಿ ನೀನು, ಕೋಟಿ ಅಭಿಮಾನಿಗಳ ಪವರ್ ಸ್ಟಾರ್. ಆದರೆ, ನನಗ ಎಂದಿಗೂ ಪುಟ್ಟ ತಮ್ಮ, ಕೈ ಹಿಡಿದು ನಡೆದ ತಮ್ಮ, ನಿನ್ನ ನಗುವಿನಲ್ಲಿ ನನ್ನ ಸಂತೋಷ ಹುಡುಕಿಕೊಟ್ಟ ತಮ್ಮ, ನನ್ನ ಮನಸಲ್ಲೇ ಸದಾ ರಾಜನಂತೆ ಬಾಳುವ ತಮ್ಮ’ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಅಭಿಮಾನಿಗಳು ಪುನೀತ್ ಅವರ ಈ ಸಲದ ಹುಟ್ಟುಹಬ್ಬವನ್ನು ‘ಸ್ಫೂರ್ತಿಯ ಹಬ್ಬ’ವನ್ನಾಗಿ ಆಚರಿಸಿದರು. ಪುನೀತ್ ಸಿನಿಮಾದ ಹಾಡುಗಳು ಸ್ಮಾರಕದ ಬಳಿ ಕೇಳಿಬಂದವು. ಜೊತೆಗೆ ಅಭಿಮಾನಿಗಳು ಸ್ಮಾರಕದ ಬಳಿಯೇ ರಕ್ತದಾನ, ನೇತ್ರದಾನ ಶಿಬಿರಗಳನ್ನು ನಡೆಸಿದರು. ಜನ ದಟ್ಟಣೆಯಿಂದಾಗಿ ಪುನೀತ್ ರಾಜ್‌ಕುಮಾರ್ ಸ್ಮಾರಕದ ಬಳಿ ಬಿಗಿಭದ್ರತೆ ಒದಗಿಸಲಾಗಿತ್ತು.



ಪುನೀತ್ ರಾಜಕುಮಾರ್ ಸಮಾಧಿ ಎದುರು ಅಭಿಮಾನಿಗಳ ಸಾಗರ

ನಗರ ವ್ಯಾಪ್ತಿಯಲ್ಲಿ 100ಕ್ಕೂ ಹೆಚ್ಚು ಕಡೆ ಚೆಕ್‌ಪೋಸ್ಟ್ ನಿರ್ಮಾಣ

ನೀತಿ ಸಂಹಿತೆ; ಶಸ್ತ್ರಾಸ್ತ್ರ ಠೇವಣಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಯಾಗಿದ್ದು, ಪರವಾನಗಿ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಠಾಣೆಗಳಲ್ಲಿ ಠೇವಣಿ ಇರಿಸುವಂತೆ ಕಮಿಷನರ್ ಬಿ. ದಯಾನಂದ್ ಸೂಚಿಸಿದ್ದಾರೆ.

ಈ ಬಗ್ಗೆ ಪೊಲೀಸರಿಗೆ ನಿರ್ದೇಶನ ನೀಡಿರುವ ದಯಾನಂದ್, ‘ಶಸ್ತ್ರಾಸ್ತ್ರ ಪರವಾನಗಿ ಪಡೆದವರ ಪಟ್ಟಿ ಸಿದ್ಧಪಡಿಸಿ. ಅವರಿಂದ ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸಿಕೊಂಡು, ರಶೀದಿ ನೀಡಬೇಕು. ನೀತಿ ಸಂಹಿತೆ ಮುಗಿಯುವವರೆಗೂ ಶಸ್ತ್ರಾಸ್ತ್ರ ವಾಪಸು ನೀಡಬಾರದು’ ಎಂದಿದ್ದಾರೆ.

‘ಕಾನೂನು ಸುವ್ಯವಸ್ಥೆ ಹಾಗೂ ಶಾಂತಿಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು. ಶಸ್ತ್ರಾಸ್ತ್ರ ಠೇವಣಿ ಇರಿಸದವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದೂ ಅವರು ಹೇಳಿದ್ದಾರೆ.

100 ಚೆಕ್‌ಪೋಸ್ಟ್ ನಿರ್ಮಾಣ: ‘ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ 100ಕ್ಕೂ ಹೆಚ್ಚು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದೆ. ಈ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ಹಾಗೂ ಬೇರೆ ಇಲಾಖೆ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ’ ಎಂದು ದಯಾನಂದ್ ಅವರು ಮಾಧ್ಯಮದವರಿಗೆ ಮಾಹಿತಿ ನೀಡಿದರು.

‘ದಾಖಲೆ ಇಲ್ಲದೇ ನಗದು ಸಾಗಣೆ ಹಾಗೂ ಮತದಾರರಿಗೆ ಆಮಿಷವೊಡ್ಡಲು ವಸ್ತುಗಳ ಸಾಗಣೆ ಮಾಡುವವರ ವಿರುದ್ಧ ಕ್ರಮ ಜರುಗಿಸಲಾಗುವುದು. ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ನಗರದ ಎಲ್ಲ ಕಡೆಯೂ ಬಿಗಿ ಭದ್ರತೆ ಇರಲಿದೆ’ ಎಂದು ಹೇಳಿದರು.

₹ 13 ಲಕ್ಷ ಜಪ್ತಿ: ರೆಸಿಡೆನ್ಸಿ ರಸ್ತೆಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹13 ಲಕ್ಷವನ್ನು ಅಶೋಕನಗರ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

‘ಶನಿವಾರ ರಾತ್ರಿ ತಪಾಸಣೆ ಸಂದರ್ಭದಲ್ಲಿ, ವಾಹನವೊಂದರಲ್ಲಿ ₹ 13 ಲಕ್ಷ ಪತ್ತೆಯಾಗಿತ್ತು. ಈ ಹಣಕ್ಕೆ ಯಾವುದೇ ದಾಖಲೆ ಇರಲಿಲ್ಲ. ಹೀಗಾಗಿ, ಹಣವನ್ನು ಜಪ್ತಿ ಮಾಡಿ ವಾಹನದ ಚಾಲಕನಿಗೆ ನೋಟಿಸ್ ನೀಡಲಾಗಿದೆ. ದಾಖಲೆ ತಂದುಕೊಡುವುದಾಗಿ ಚಾಲಕ ತಿಳಿಸಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವಚನ ಯಾನಕ್ಕೆ ಇನ್ನೂರರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಲ್ಲಿ ವಚನ ಸಂಸ್ಕೃತಿಯನ್ನು ಬಿತ್ತನೆ ಮಾಡಿ ಕಿರು ಪ್ರತಿಭೆಗಳನ್ನು ತಯಾರು ಮಾಡುತ್ತಿರುವ ವಚನ ಯಾನ ಪ್ರತಿದಿನವೂ ನಡೆಯಬೇಕು. ನಾಡಿನಾದ್ಯಂತ ವಿಸ್ತರಿಸಬೇಕು ಎಂದು ಲೇಖಕಿ ಪ್ರಮೀಳಾ ಫಾಲನೇತ್ರ ಆಶಿಸಿದರು.

ಕಲ್ಯಾಣ ಪಟ್ಟಣದ ಬಸವ ಬೆಳಕು ಸಭಾಂಗಣದಲ್ಲಿ ನಡೆದ ‘ವಚನ ಯಾನ 200ರ ಸಂಭ್ರಮಾಚರಣೆ’ಯಲ್ಲಿ ಅವರು ಮಾತನಾಡಿದರು.

25 ವರ್ಷಗಳಿಂದ ಶಾಲೆಯಿಂದ ಶಾಲೆಗೆ ಅಲೆದಾಡುತ್ತ ವಚನಜ್ಯೋತಿಯನ್ನು ಹರಡುತ್ತಿರುವ ಬಳಗವು ವಚನ ಚಳವಳಿಯನ್ನು ಹನ್ನೆರಡು ಪ್ರಕಾರಗಳಲ್ಲಿ ವಿಸ್ತರಿಸಿರುವುದು ಗುಣಾತ್ಮಕ ಹೆಜ್ಜೆ ಎಂದು ಬಣ್ಣಿಸಿದರು.



‘ವಚನ ಯಾನ200 ಸಂಭ್ರಮಾಚರಣೆ’ಯಲ್ಲಿ ವಚನ ಬಿತ್ತನೆಯ ಗೌರವ ಶಿಕ್ಷಕಿಯರಾದ ಜಯಾ ಹಣ್ಣೆ, ವಿದ್ಯಾಶ್ರೀ, ಲಕ್ಷ್ಮೀಯವರನ್ನು ಸನ್ಮಾನಿಸಲಾಯಿತು

ಭದ್ರಾವತಿಯ ಅಕ್ಕನ ಬಳಗದ ಟಿ.ಜಿ. ಬಸವರಾಜಯ್ಯ ಮಾತನಾಡಿ, ‘ಕನ್ನಡಿಗರಿಗೆ ಮಾದರಿಯಾಗಿರುವ ಅಣ್ಣ ಮತ್ತು ವೀರ ವಿರಾಗಿಣಿ ಅಕ್ಕನನ್ನು ನೀಡಿದ ವಚನ ಚಳವಳಿಯನ್ನು ವಿಭಿನ್ನ ರೀತಿಯಲ್ಲಿ ವಚನಜ್ಯೋತಿ ಮನೆ ಮನಕ್ಕೆ ಮುಟ್ಟಿಸುವ ಕೆಲಸ ಮಾಡುತ್ತಿದೆ’ ಎಂದು ಶ್ಲಾಘಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ‘ಧ್ಯಾನ, ಯೋಗಗಳು ವ್ಯಾಪಾರವಾಗಿದ್ದು, ಶಿವರಾತ್ರಿಯಂದು ಮೋಜು ಮಸ್ತಿಯ ಭಕ್ತಿಯನ್ನು ಹಣ ಸಂಗ್ರಹಿಸಿ ನಡೆಸುವುದರ ಬದಲಾಗಿ, ವಚನಗಳ ಮೂಲಕ ನಿಜಭಕ್ತಿ, ಬದುಕಿನ ನಿಜಕಲೆಯನ್ನು ಪಸರಿಸುವ ಕೆಲಸವನ್ನು ವಚನಜ್ಯೋತಿ ಬಳಗ ಮಾಡುತ್ತಿದೆ’ ಎಂದು ಹೇಳಿದರು.

ಮಕ್ಕಳಿಗೆ ವಚನಗಳನ್ನು ಪಠ್ಯಕ್ರಮದಲ್ಲಿ ಹೇಳಿಕೊಟ್ಟ ಜಯಾ ಹಣ್ಣೆ, ವಿದ್ಯಾಶ್ರೀ ಹಾರಕೂಡೆ ಮತ್ತು ಲಕ್ಷ್ಮಿರಾಜ್ ಅವರನ್ನು ಸನ್ಮಾನಿಸಲಾಯಿತು. ಜ್ಞಾನಯೋಗ ಲಯನ್ಸ್ ಅಧ್ಯಕ್ಷೆ ಚಂದ್ರಿಕಾ, ವಚನಜ್ಯೋತಿ ಬಳಗದ ಪ್ರಭು, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಪದ್ಮಜ, ಪ್ರಸನ್ನ, ದಿವಾಕರ್, ಮಧು, ಕಾತ್ಯಾಯಿನಿ ಭಾಗವಹಿಸಿದ್ದರು.

ಪೊನ್ಮುಡಿಗೆ ಪ್ರಮಾಣ; ಸಿ.ಎಂ ಶಿಫಾರಸಿಗೆ ರಾಜ್ಯಪಾಲರ ನಕಾರ

ಪ್ರಜಾವಾಣಿ ವಾರ್ತೆ

ಚೆನ್ನೈ: ಹಿರಿಯ ರಾಜಕಾರಣಿ ಕೆ.ಪೊನ್ಮುಡಿ ಅವರನ್ನು ಸಚಿವರಾಗಿ ನೇಮಿಸಬೇಕು ಎಂಬ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಶಿಫಾರಸನ್ನು ರಾಜ್ಯಪಾಲ ಆರ್.ಎನ್.ರವಿ ತಳ್ಳಿಹಾಕಿದ್ದಾರೆ. ಈ ಮೂಲಕ ಡಿಎಂಕೆ ಸರ್ಕಾರದೊಂದಿಗೆ ಸಂಘರ್ಷಕ್ಕೆ ಮುಂದಾಗಿದ್ದಾರೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ಪೊನ್ಮುಡಿ ಅವರಿಗೆ ಶಿಕ್ಷೆ ಪ್ರಕಟಿಸಿದ ಹಿನ್ನೆಲೆಯಲ್ಲಿ ಡಿಸೆಂಬರ್ 2023ರಲ್ಲಿ ಪೊನ್ಮುಡಿ ಅವರ ಶಾಸಕ ಸ್ಥಾನ ರದ್ದುಗೊಂಡಿತ್ತು. ಸುಪ್ರೀಂ ಕೋರ್ಟ್ ಮಾರ್ಚ್ 11ರಂದು ನೀಡಿದ್ದ ಆದೇಶದಲ್ಲಿ ಪೊನ್ಮುಡಿ ಅವರಿಗೆ ವಿಧಿಸಿದ್ದ ಶಿಕ್ಷೆಗೆ ತಡೆಯಾಜ್ಞೆ ನೀಡಿತ್ತು. ಹಿಂದೆಯೇ, ತಮಿಳುನಾಡು ವಿಧಾನಸಭೆ ಸ್ಪೀಕರ್ ಎಂ.ಅಪ್ಪಾವು ಅವರು ಪೊನ್ಮುಡಿ ಅವರನ್ನು ಶಾಸಕರಾಗಿ ಮರುನಿಯುಕ್ತಿಗೊಳಿಸಿ ಆದೇಶ ಹೊರಡಿಸಿದ್ದರು.

ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನ ಎದುರು ಇರುವ ಕಾರಣ ಸಚಿವರಾಗಿ ನಿಯುಕ್ತಿಗೊಳಿಸಲು ಸಾಧ್ಯವಿಲ್ಲ ಎಂದು ರಾಜ್ಯಪಾಲರು ಪತ್ರ ಬರೆದಿದ್ದಾರೆ.

ಮೊಗಳ್ಳಿ ಗಣೇಶ್ ಅವರ ‘ನಾನೆಂಬುದು ಕಿಂಚಿತ್ತು’ ಆತ್ಮಕಥೆ ಕುರಿತ ಸಂವಾದ

ಸ್ತ್ರೀ ಸಂವೇದನೆಯ ಆತ್ಮಕಥನ: ಆಶಾದೇವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಗಳ್ಳಿ ಗಣೇಶ್ ಅವರ ಆತ್ಮಕಥನದಲ್ಲಿ ಹೆಣ್ಣಿನ ಸಂವೇದನೆಯನ್ನು ಕಾಣಬಹುದು’ ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಅಭಿಪ್ರಾಯ ವ್ಯಕ್ತಪಡಿಸಿದರು.

ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಭಾನುವಾರ ನಡೆದ ‘ಅನುಭವ ಕಥನ’ ಶೀರ್ಷಿಕೆಯಡಿ ಮೊಗಳ್ಳಿ ಗಣೇಶ್ ಅವರ ಆತ್ಮಕಥೆ ‘ನಾನೆಂಬುದು ಕಿಂಚಿತ್ತು’ ಕೃತಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಚರಿತ್ರಕಾರರು ಆತ್ಮಕಥನಗಳನ್ನು ಅನಾತ್ಮಕಥನಗಳೆಂದು ಕರೆಯುತ್ತಾರೆ. ಅದರಲ್ಲಿ ಆತ್ಮವಂಚನೆಯೇ ಹೆಚ್ಚಾಗಿ ಇರುತ್ತದೆ. ಆದರೆ, ಮೊಗಳ್ಳಿ ಅವರು ತಮ್ಮ ಜೀವನದಲ್ಲಿ ನಡೆದ ಪ್ರತಿಯೊಂದು ಘಟನೆಯನ್ನು ಪ್ರಾಮಾಣಿಕವಾಗಿ ವಿವರಿಸಿದ್ದಾರೆ. ಈ ಕೃತಿ ಒಂದು ಕಾದಂಬರಿ ಓದುವ ಅನುಭವ ನೀಡುತ್ತದೆ’ ಎಂದು ಅಭಿಪ್ರಾಯಪಟ್ಟರು.

ಪ್ರಾಧ್ಯಾಪಕ ಸುರೇಶ್ ನಾಗಲಮಡಿಕೆ, ‘ಮೊಗಳ್ಳಿ ಅವರ ನಾನೆಂಬುದು ಕಿಂಚಿತ್ತು ಕಥನವು ಅಂತರಂಗ ಹಾಗೂ ಅಂತಃಕರಣದ ಕಥನವಾಗಿದೆ. ಇದು ಹಲವು ಬಗೆಯ ಮನುಷ್ಯರ ಕಥನವಾಗಿದೆ. ಇದರಲ್ಲಿ ಬಳಸುವ ಭಾಷೆಗೆ ವಿಶಿಷ್ಟವಾದ ರೂಪಕ ಶಕ್ತಿ ನೀಡಿದ್ದಾರೆ. ಈ ಕೃತಿಯ ಕೊನೆಯವರೆಗೂ ತಾಯಿ ಕಾರುಣ್ಯದ ರೂಪಕವಾದರೆ, ಮತ್ತೊಂದು ತುದಿಯಲ್ಲಿ ತಂದೆ ಕ್ರೌರ್ಯದ ರೂಪಕವಾಗಿದ್ದಾರೆ. ತಾಯಿ ಜನಪದ, ಅಧ್ಯಾತ್ಮ ಜೀವಿಯಾಗಿ ಕಂಡರೆ, ತಂದೆ ಕೊನೆಯವರೆಗೂ ಕ್ರೂರಿಯಾಗಿ ಕಾಣುವ ಬಗೆ ನಮಗೆ ಬೇರೆ ಬೇರೆ ಆಲೋಚನೆ ತಂದು ಕೊಡುತ್ತದೆ’ ಎಂದರು.

ಕಥೆಗಾರ ಮೊಗಳ್ಳಿ ಗಣೇಶ್, ‘ನನ್ನ ಬರಹವೇ ನನ್ನ ಸೃಜನಶೀಲತೆ ಆಗಿದೆ. ನನ್ನ ಆತ್ಮಕಥನದಲ್ಲಿ ನಾನು ನೆಪ ಮಾತ್ರ. ಅದರಲ್ಲಿ ನನ್ನ ತಾಯಿಯ ರುಜವಾತು ಹೆಚ್ಚು ಇದ್ದು, ಅವರ ಸಂವೇದನೆ ನನ್ನ ಮೂಲಕ ರೂಪುಗೊಂಡಿದೆ. ಬಸವಣ್ಣ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಳವಳಿಗಳಲ್ಲಿ ಅವರ ತಾಯಿಯಂದಿರ ಸಂವೇದನೆಯನ್ನು ನಾವು ಕಾಣಬಹುದು’ ಎಂದು ಹೇಳಿದರು.

ಸಂವಾದದಲ್ಲಿ ವಿಮರ್ಶಕ ಎನ್. ಮನು ಚಕ್ರವರ್ತಿ, ಚಂದನಗೌಡ ಭಾಗವಹಿಸಿದ್ದರು.



ಮೊಗಳ್ಳಿ ಗಣೇಶ್ ಅವರ ಆತ್ಮಕಥನ ‘ನಾನೆಂಬುದು ಕಿಂಚಿತ್ತು’ ಪುಸ್ತಕದ ಸಂವಾದ ಕಾರ್ಯಕ್ರಮದಲ್ಲಿ (ಎಡದಿಂದ ಎರಡನೆಯವರು) ಮೊಗಳ್ಳಿ ಗಣೇಶ್ ಮಾತನಾಡಿದರು. (ಎಡದಿಂದ) ಎನ್. ಮನು ಚಕ್ರವರ್ತಿ, ಚಂದನ್ ಗೌಡ, ಎಂ.ಎಸ್. ಆಶಾದೇವಿ, ಸುರೇಶ್ ನಾಗಲಮಡಿಕೆ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ಬೆಂಗಳೂರಿನ ಹೊರಗಿನವರಿಗೆ ಆದ್ಯತೆಯಿಲ್ಲ’

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ನಾ. ದಾಮೋದರ ಶೆಟ್ಟಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬೆಂಗಳೂರಿನವರಿಗೆ ಸಿಕ್ಕಷ್ಟು ಆದ್ಯತೆ ಹೊರಗಿನವರಿಗೆ ದೊರೆಯಲಿಲ್ಲ. ಇದರಿಂದಾಗಿ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡಿದ ಘನ ವಿದ್ವಾಂಸರೂ ಅಷ್ಟಾಗಿ ನಾಡಿನ ಜನರಿಗೆ ಪರಿಚಿತರಾಗಿಲ್ಲ’ ಎಂದು ಸಾಹಿತಿ ನಾ. ದಾಮೋದರ ಶೆಟ್ಟಿ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಯಂತ ಕಾಯ್ಕಿಣಿ ಅವರ ‘ತಾರಿ ದಂಡೆ’ ಹಾಗೂ ಬಿ.ಎ. ವಿವೇಕ್ ರೈ ಅವರ ‘ಬದುಕು ಕಟ್ಟಿದ ಬಗೆಗಳು’ ಕೃತಿಗಳು ಬಿಡುಗಡೆಯಾದವು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಮಾಧ್ಯಮಗಳಿಂದಾಗಿ ಬೆಂಗಳೂರಿನ ಸಾಧಕರು ನಾಡಿನಾದ್ಯಂತ ಪರಿಚಿತರಾಗುತ್ತಾರೆ. ಆದರೆ, ಜಿಲ್ಲೆಗಳಲ್ಲಿನ ಸಾಧಕರ ಬಗ್ಗೆ ಬೆಂಗಳೂರಿಗರಿಗೆ ಅಷ್ಟಾಗಿ ತಿಳಿದಿರುವುದಿಲ್ಲ. ಈ ಸಾಲಿಗೆ ವಿದ್ವಾಂಸ ವಿವೇಕ್ ರೈ ಅವರೂ ಸೇರುತ್ತಾರೆ. ಜಾನಪದ ತಜ್ಞರೂ ಆಗಿರುವ ಅವರು, ಸಾಹಿತ್ಯದ ಜತೆಗೆ ಸಂಘಟನೆ ಹಾಗೂ ಆಡಳಿತದಲ್ಲಿಯೂ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ತುಳು ಸಾಹಿತ್ಯಕ್ಕೆ ಸಂಬಂಧಿಸಿದಂತೆಯೂ ದೊಡ್ಡ ಕೊಡುಗೆ ನೀಡಿದ್ದಾರೆ. ತುಳು ಭಾಷೆಯನ್ನು ಕರ್ನಾಟಕದ ಹೊರಗಡೆ ಕೊಂಡೊಯ್ದವರು ಅವರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ‘ತಾರಿ ದಂಡೆ’ ಹಾಗೂ ‘ಬದುಕು ಕಟ್ಟಿದ ಬಗೆಗಳು’ ಪುಸ್ತಕಗಳನ್ನು ಸುರೇಶ್ ಆನಗಳ್ಳಿ (ಬಲ ತುದಿ) ಬಿಡುಗಡೆ ಮಾಡಿದರು. (ಎಡದಿಂದ) ಜಯಂತ ಕಾಯ್ಕಿಣಿ, ವನಮಾಲಾ ವಿಶ್ವನಾಥ್ ಹಾಗೂ ನಾ. ದಾಮೋದರ ಶೆಟ್ಟಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಜಯಂತ ಕಾಯ್ಕಿಣಿ, ‘ಜ್ಞಾನ ಎನ್ನುವುದು ಪ್ರಜ್ಞಾ ಪ್ರವಾಹ ಇದ್ದ ಹಾಗೆ. ಅದನ್ನು ನಿಲ್ಲಿಸದೇ ಹರಿದುಹೋಗಲು ಬಿಡಬೇಕು. ಆಗ ಮಾತ್ರ ಬದಲಾವಣೆ ಸಾಧ್ಯ. ಅದೇ ರೀತಿ, ಸಾಮಾಜಿಕ ಋಣ ಅನ್ನುವಂತಹದ್ದು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರಬೇಕು. ಆಗ ಮಾತ್ರ ನಮ್ಮಲ್ಲಿನ ದ್ವೇಷ, ಸಿಟ್ಟು ಕಡಿಮೆಯಾಗುತ್ತದೆ. ಲೇಖಕನಾದವನಿಗೆ ಸಂತೆಯ ಸಲಿಗೆ ಇದ್ದಲ್ಲಿ ಮಾತ್ರ ನಮ್ಮ ಕಲೆಗೆ ಜೀವವಿರುತ್ತದೆ. ನಮಗೆ ಜನರೇ ಬೇಡ ಎಂದರೆ ಸಮಾಜವನ್ನೇ ತಿರಸ್ಕರಿಸಿದ ಹಾಗೆ’ ಎಂದರು.

‘ತಾರಿ ದಂಡೆ’ ಕೃತಿ ಬಗ್ಗೆ ಮಾತನಾಡಿದ ವಿಮರ್ಶಕಿ ವನಮಾಲಾ ವಿಶ್ವನಾಥ್, ‘ಕೃತಿಯು ಮೂರು ಭಾಗಗಳನ್ನು ಹೊಂದಿದೆ. ಮೊದಲ ಭಾಗವು ಬಾಲ್ಯದ ನೆನಪುಗಳನ್ನು ಕಟ್ಟಿಕೊಟ್ಟರೆ, ಎರಡನೇ ಭಾಗವು ವ್ಯಕ್ತಿ ಪರಿಚಯದ ಚಿತ್ರಣಗಳನ್ನು ನೀಡುತ್ತದೆ. ಹಾಗೆಯೇ, ಮೂರನೇ ಭಾಗದಲ್ಲಿ ಕಾಯ್ಕಿಣಿ ಅವರು ತಾವು ಓದಿದ ಪುಸ್ತಕಗಳ ಕುರಿತ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಕವಿ ಹೃದಯವನ್ನೇ ಹೆಚ್ಚಾಗಿ ಕಾಣಿಸುವ ಕಾಯ್ಕಿಣಿಯವರು, ಈ ಕೃತಿಯಲ್ಲಿ ರೂಪಕಗಳ ಮೂಲಕವೂ ಅಲ್ಲಲ್ಲಿ ಕಾಣಸಿಕ್ಕಿದ್ದಾರೆ’ ಎಂದು ಹೇಳಿದರು.

ರಂಗ ನಿರ್ದೇಶಕ ಸುರೇಶ್ ಆನಗಳ್ಳಿ ಅವರು ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಪರಿಚಯ

ಪುಸ್ತಕ: ‘ತಾರಿ ದಂಡೆ’
ಲೇಖಕರು: ಜಯಂತ ಕಾಯ್ಕಿಣಿ
ಪುಟಗಳು: 212
ಬೆಲೆ: ₹ 250
ಪುಸ್ತಕ: ‘ಬದುಕು ಕಟ್ಟಿದ ಬಗೆಗಳು’
ಲೇಖಕರು: ಬಿ.ಎ. ವಿವೇಕ ರೈ
ಪುಟಗಳು: 320
ಬೆಲೆ: ₹ 350
ಎರಡೂ ಪುಸ್ತಕಗಳ ಪ್ರಕಾಶನ: ಅಂಕಿತ ಪುಸ್ತಕ

21 ಮೀನುಗಾರರ ಬಂಧಿಸಿದ ಶ್ರೀಲಂಕಾ

ಚೆನ್ನೈ (ಪಿಟಿಐ): ತಮಿಳುನಾಡಿನ 21 ಮೀನುಗಾರರನ್ನು ಶ್ರೀಲಂಕಾ ಬಂಧಿಸಿದ್ದು, ಅವರನ್ನು ಸುರಕ್ಷಿತವಾಗಿ ಶೀಘ್ರವೇ ಬಿಡುಗಡೆ ಮಾಡಿಸಬೇಕೆಂದು ರಾಜ್ಯ ಬಿಜೆಪಿ ಹಾಗೂ ಪಿಎಂಕೆ, ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.

ಮಾರ್ಚ್ 16ರ ಶನಿವಾರ ರಾತ್ರಿಯಂದು ತಮಿಳುನಾಡಿನ 21 ಮೀನುಗಾರರನ್ನು ಬಂಧಿಸಿರುವ ಶ್ರೀಲಂಕಾ, ಮೀನುಗಾರರ ಎರಡು ದೋಣಿಗಳನ್ನೂ ವಶಕ್ಕೆ ಪಡೆದಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ಹಾಗೂ ಪಿಎಂಕೆ ನಾಯಕ ಅನ್ಬುಮಣಿ ರಾಮದಾಸ್ ಹೇಳಿದ್ದಾರೆ.

ಯುಪಿಐ ನಕಲಿ ರಶೀದಿ ವಂಚನೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಹಣ ಪಾವತಿ ಹೆಸರಿನಲ್ಲಿ ನಕಲಿ ರಶೀದಿ ತೋರಿಸಿ ವ್ಯಾಪಾರಿಗಳನ್ನು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಯುಪಿಐ ನಕಲಿ ರಶೀದಿ ಹೆಸರಿನಲ್ಲಿ ವಂಚನೆಯಾಗಿರುವ ಬಗ್ಗೆ ವ್ಯಾಪಾರಿಯೊಬ್ಬರು ನೀಡಿದ್ದ ದೂರಿನಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡು, ಆರೋಪಿಗಳಾದ ನಂದನ್ ಹಾಗೂ ಕಲ್ಪಿತಾ ಎಂಬುವವರನ್ನು ಸೆರೆ ಹಿಡಿಯಲಾಗಿದೆ. ಇವರಿಬ್ಬರೂ ಸ್ನೇಹಿತರು. ಒಂದೇ ಮನೆಯಲ್ಲಿ ವಾಸವಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಹುತೇಕ ಮಳಿಗೆಗಳಲ್ಲಿ ಆನ್‌ಲೈನ್ ಹಣ ಪಾವತಿಗೆ ಅವಕಾಶವಿದೆ. ಇದನ್ನೇ ದುರುಪಯೋಗಪಡಿಸಿಕೊಂಡಿದ್ದ ಆರೋಪಿಗಳು, ಹಲವು ದಿನಗಳಿಂದ ವ್ಯಾಪಾರಿಗಳನ್ನು ವಂಚಿಸುತ್ತಿದ್ದರು’ ಎಂದು ತಿಳಿಸಿವೆ.

ಆ್ಯಪ್ ಮೂಲಕ ಹಣ ಪಾವತಿಸಿದಂತೆ ಮಾಡಿ ವಂಚನೆ: ‘ಗೊಲ್ಲರಹಟ್ಟಿ ಬಳಿಯ ಪರಮೇಶ್ವರ್ ಬ್ಯಾಂಕರ್ಸ್ ಆ್ಯಂಡ್ ಜುವೆಲರ್ಸ್ ಮಳಿಗೆಗೆ ಆರೋಪಿಗಳು ಹೋಗಿದ್ದರು. ಶ್ರೀಮಂತರ ರೀತಿಯಲ್ಲಿ ಉಡುಪು ತೊಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳು ಹೆಚ್ಚಿನ ಚಿನ್ನಾಭರಣ ಖರೀದಿಸಲು ಬಂದಿರುವುದಾಗಿ ತಿಳಿದುಕೊಂಡಿದ್ದ ಮಳಿಗೆ ಸಿಬ್ಬಂದಿ, ಹಲವು ವಿನ್ಯಾಸದ ಆಭರಣ ತೋರಿಸಿದ್ದರು. ಅಂತಿಮವಾಗಿ ಆರೋಪಿಗಳು, ₹ 1.65 ಲಕ್ಷ ಚಿನ್ನದ ಆಭರಣ ಖರೀದಿಸಿದ್ದರು.’

‘ತಮ್ಮ ಬಳಿ ನಗದು ಇಲ್ಲವೆಂದು ಹೇಳಿದ್ದ ಆರೋಪಿಗಳು, ನಕಲಿ ಆ್ಯಪ್‌ವೊಂದರ ಮೂಲಕ ಹಣ ವರ್ಗಾಯಿಸಿದ್ದರು. ಇದಕ್ಕೆ ಪುರಾವೆಯಾಗಿ ರಶೀದಿಯನ್ನು ತೋರಿಸಿ, ಸ್ಥಳದಿಂದ ಹೊರಟು ಹೋಗಿದ್ದರು. ಕೆಲ ಸಮಯದ ನಂತರ, ಮಳಿಗೆ ಸಿಬ್ಬಂದಿ ಬ್ಯಾಂಕ್ ಖಾತೆ ವಿವರ ಪರಿಶೀಲಿಸಿದ್ದರು. ಯಾವುದೇ ಹಣ ಬಂದಿರಲಿಲ್ಲ. ಆಗಲೇ ವಂಚನೆಯಾಗಿರುವುದು ಗಮನಕ್ಕೆ ಬಂದಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನಾಭರಣ ಅಡವಿಟ್ಟಿದ್ದ ಆರೋಪಿಗಳು: ‘ಮಳಿಗೆಯಿಂದ ತೆಗೆದುಕೊಂಡು ಹೋಗಿದ್ದ ಚಿನ್ನಾಭರಣವನ್ನು ಆರೋಪಿಗಳು, ಬೇರೆಡೆ ಅಡವಿಟ್ಟಿದ್ದರು. ಅದರಿಂದ ಬಂದ ಹಣವನ್ನು ಪರಸ್ಪರ ಹಂಚಿಕೊಂಡು, ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಬ್ಯಾಡರಹಳ್ಳಿ ಮಾತ್ರವಲ್ಲದೇ ವಿವಿಧ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಅನುಮಾನವಿದೆ. ಈ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಅತಿಥಿ ಶಿಕ್ಷಕರ ಸಮಾವೇಶದಲ್ಲಿ ಹಂಸಲೇಖ

ಅತಿಥಿ ಶಿಕ್ಷಕರಿಗೆ 6ನೇ ಗ್ಯಾರಂಟಿ ನೀಡಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಶಿಕ್ಷಕರ ಬವಣೆ ನೀಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಮ ಕೈಗೊಳ್ಳುವ ಮೂಲಕ 6ನೇ ಗ್ಯಾರಂಟಿಯನ್ನು ನೀಡಬೇಕು ಎಂದು ಸಂಗೀತ ನಿರ್ದೇಶಕ ಹಂಸಲೇಖ ಆಗ್ರಹಿಸಿದರು.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ನೀಡಬೇಕು ಎಂದು ತಾಯಿ ಜ್ಯೋತಿಬಾಯಿ ಫುಲೆ ಹೋರಾಟ ಮಾಡಿದಾಗ ಸಗಣಿ ಬಿಸಾಡಿದ ಸಮಾಜ ನಮ್ಮದು. ಇಂಥ ಸಮಾಜದಲ್ಲಿ ಇವತ್ತೊಂದು ಶಿಕ್ಷಕರು ಈಗ ಹುಟ್ಟಿದ್ದಾರೆ ಎಂದರೆ ನಾವು ಗೆದ್ದಿದ್ದೇವೆ ಎಂದರ್ಥ. ಅತಿಥಿ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವ ಮೂಲಕ ಅವರ ಸಂಕಷ್ಟಗಳಿಗೆ ಸರ್ಕಾರ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ ಕರಡಿಗುಡ್ಡ ಹಕ್ಕೊತ್ತಾಯಗಳನ್ನು ಮಂಡಿಸಿದರು. ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಮೆರಿಟ್ ಪದ್ಧತಿ ಕೈಬಿಡಬೇಕು. ಮೊದಲು ಸೇವೆ ಮಾಡಿದವರಿಗೆ ಆದ್ಯತೆ ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಅನ್ವಯವಾಗಬೇಕು. ಅತಿಥಿ ಶಿಕ್ಷಕರಿಗೆ ತಿಂಗಳಿಗೆ ಕನಿಷ್ಠ ₹25 ಸಾವಿರ ವೇತನ ನೀಡಬೇಕು. ನೇಮಕಾತಿಯಲ್ಲಿ ಶೇ 5 ಕೃಪಾಂಕ ಕೊಡಬೇಕು. ಸೇವಾ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಶಿಕ್ಷಕರಿಗೆ ನೀಡುವಂತೆ ಬೇಸಿಗೆಯ ರಜೆ ಸೇರಿ 12 ತಿಂಗಳ ವೇತನ ನೀಡಬೇಕು. ದೆಹಲಿ, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಸರ್ಕಾರಗಳು ಅತಿಥಿ ಶಿಕ್ಷಕರನ್ನು ಕಾಯಂಗೊಳಿಸಿದಂತೆ ಕರ್ನಾಟಕ ಸರ್ಕಾರವೂ ಕಾಯಂಗೊಳಿಸಬೇಕು. ಸೇವಾ ಪ್ರಮಾಣಪತ್ರ ನೀಡಬೇಕು. ವೇತನವು ನೇರವಾಗಿ ಅತಿಥಿ ಶಿಕ್ಷಕರ ಖಾತೆಗೆ ಪಾವತಿಯಾಗಬೇಕು. ಸರ್ಕಾರಿ ಶಿಕ್ಷಕರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಅತಿಥಿ ಶಿಕ್ಷಕರಿಗೂ ನೀಡಬೇಕು. ಜೀವವಿಮೆ ಸೌಲಭ್ಯ ಒದಗಿಸಬೇಕು ಎಂದು ಬೇಡಿಕೆಗಳನ್ನು ಮುಂದಿಟ್ಟರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಅತಿಥಿ ಶಿಕ್ಷಕರ ವಾರ್ಷಿಕ ರಾಜ್ಯ ಸಮ್ಮೇಳನದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಸಂಗೀತ ನಿರ್ದೇಶಕ ಹಂಸಲೇಖ, ಅತಿಥಿ ಶಿಕ್ಷಕರ ಸಂಘದ ಗೌರವಾಧ್ಯಕ್ಷ ಅನಂತ ನಾಯ್ಕ್, ವಿಧಾನಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, 'ಕೂಲಿಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ ಮಾಡಲಾಗುತ್ತದೆ. ಅಷ್ಟು ವೇತನ ಕೂಡ ಅತಿಥಿ ಶಿಕ್ಷಕರಿಗೆ ಇಲ್ಲದಿರುವುದು ನಾಚಿಗೇಡಿನ ಸಂಗತಿ. ಮಾತಿನಲ್ಲಿ ಸಮಾನತೆ ಬಗ್ಗೆ ಮಾತನಾಡುವ, ಸಮಾಜವಾದಿ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ಇಚ್ಛಾಶಕ್ತಿ ಇಲ್ಲ' ಎಂದು ಟೀಕಿಸಿದರು.

ಶಿಕ್ಷಕರ ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಾರಾ ಪ್ರತಾಪ್ ರೆಡ್ಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಲಿ, ಬಿಬಿಎಂಪಿ ಸದಸ್ಯ ಪುಟ್ಟಸ್ವಾಮಿ ಗೌಡ, ವಿದ್ಯಾರ್ಥಿ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ತೋಳು ಭರಮಣ್ಣ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ರುದ್ರಪ್ಪನಿಂತ್, ಶಿಕ್ಷಣ ಉಳಿಸಿ ಸಮಿತಿ ಸಂಚಾಲಕ ಐಶ್ವರ್ಯ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಂತ ಎಚ್.ಎಸ್., ಗೌರವಾಧ್ಯಕ್ಷ ಅನಂತನಾಯ್ಕ್ ಎನ್., ಉಪಾಧ್ಯಕ್ಷೆ ಚಿತ್ರಲೇಖಾ, ಸಂಘಟನಾ ಕಾರ್ಯದರ್ಶಿ ಲೋಲಾಕ್ಷಿ, ಕೋಶಾಧಿಕಾರಿ ಸೌಮ್ಯಾ ಎಚ್.ಎಸ್. ಉಪಸ್ಥಿತರಿದ್ದರು.

ಹೃದಯ ಗೆಲ್ಲಲು ರಾಜಕೀಯಕ್ಕೆ

ಆನೇಕಲ್: ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್

ಪ್ರಜಾವಾಣಿ ವಾರ್ತೆ

ಆನೇಕಲ್: 'ಮೊದಲು ಚಿಕಿತ್ಸೆ; ನಂತರ ಹಣ ಪಾವತಿ, ಕಡತಕ್ಕಿಂತ ಜೀವ ಮುಖ್ಯ, ಮಾನವೀಯತೆಗೆ ಮೊದಲ ಆದ್ಯತೆ ಎಂಬುದು ನನ್ನ ವೈದ್ಯಕೀಯ ಜೀವನದ ತತ್ವವಾಗಿದೆ. ನಾವು ಓದಿದ ವಿದ್ಯಾಭ್ಯಾಸ ಜನರಿಗೆ ಬೇಕಾಗಬೇಕು. ಹೀಗಾಗಿ ವೈದ್ಯಕೀಯ ಸೇವೆ ವಿಸ್ತರಿಸಲು ರಾಜಕೀಯ ಕ್ಷೇತ್ರಕ್ಕೆ ಬಂದಿದ್ದೇನೆ' ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ತಾಲ್ಲೂಕಿನ ಚಂದಾಪುರದಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಕಾರ್ಯಕರ್ತರ ಸಮಯ ಮತ್ತು ಸಹಕಾರ ನನಗೆ ಅಗತ್ಯ. ಚುನಾವಣೆಯಲ್ಲಿ ಆನೇಕಲ್ ವಿಧಾನಸಭಾ ಕ್ಷೇತ್ರವು ಆನೆ ಬಲ ನೀಡಬೇಕು. ಹೃದ್ರೋಗ ವೈದ್ಯನಾಗಿ 75 ಲಕ್ಷ ರೋಗಿಗಳಿಗೆ ಚಿಕಿತ್ಸೆ ನೀಡಿದ್ದೇನೆ. ಎಂಟು ಲಕ್ಷ ಮಂದಿಗೆ ಹೃದ್ರೋಗ ಸಂಬಂಧಿತ ಶಸ್ತ್ರಚಿಕಿತ್ಸೆ ಮಾಡಿದ್ದೇನೆ. ವೈದ್ಯನಾಗಿ ಒಟ್ಟಾರೆ 2.5 ಕೋಟಿ ಜನರ ಸಂಪರ್ಕ ಹೊಂದಿದ್ದೇನೆ' ಎಂದರು.

'ಜನಸೇವೆಗೆ ಅವಕಾಶ ಕಲ್ಪಿಸಬೇಕು. ಕ್ಷೇತ್ರದಲ್ಲಿ ನಾವು ಮಾಡಿದ ಒಳ್ಳೆಯ ಕೆಲಸಗಳು ನಮ್ಮನ್ನು ಪರಿಚಯಿಸುತ್ತವೆ. ಅಧಿಕಾರದಲ್ಲಿದ್ದಾಗ ಸೌಮ್ಯತೆ, ಸಂಪತ್ತಿನಲ್ಲಿ ಸರಳತೆ, ಕೋಪ ಬಂದಾಗಲೂ ಮೌನವಿರಬೇಕು. ಹಾಗಾಗಿ ಜನರ ಹೃದಯ ಗೆಲ್ಲುವ ಸಲುವಾಗಿ ರಾಜಕೀಯ ಕ್ಷೇತ್ರ ಪ್ರವೇಶ ಮಾಡಿದ್ದೇನೆ' ಎಂದು ತಿಳಿಸಿದರು.



ಆನೇಕಲ್ ತಾಲ್ಲೂಕಿನ ಚಂದಾಪುರದಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಡಾ.ಸಿ.ಎನ್.ಮಂಜುನಾಥ್ ಮಾತನಾಡಿದರು

ಕಾಂಗ್ರೆಸ್ ಶಾಸಕರು ಬಿಜೆಪಿಗೆ: ಸಿಪಿವೈ

ಸ್ವಪಕ್ಷೀಯ ಶಾಸಕರೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬೇಡ, ಅನುದಾನ ನೀಡುತ್ತಿಲ್ಲ ಎಂದು ದೂರುತ್ತಿದ್ದಾರೆ. ಲೋಕಸಭಾ ಚುನಾವಣೆಯ ನಂತರ ಕಾಂಗ್ರೆಸ್ ಶಾಸಕರು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂದು ಬಿಜೆಪಿ ಮುಖಂಡ ಸಿ.ಪಿ.ಯೋಗೇಶ್ವರ್ ಹೇಳಿದರು.

ಆದಷ್ಟು ಬೇಗ ಈ ಸರ್ಕಾರ ಪತನಗೊಳ್ಳಲಿರುವುದು ಎಂದರು.

ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಅಣ್ಣತಮ್ಮಂದಿರಂತೆ ಈ ಬಾರಿ ಕೆಲಸ ಮಾಡಬೇಕು. ಡಾ.ಸಿ.ಎನ್.ಮಂಜುನಾಥ್ ಅವರ ಕೇಂದ್ರದ ಆರೋಗ್ಯ ಸಚಿವರಾಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ ಎಂದರು.

'ಜನರಿಗೆ ಪ್ರೀತಿ ಹಂಚಲು, ಬಡವರ ಕಣ್ಣೀರು ಮತ್ತು ರೈತರ ಬೆವರು ಒರೆಸಬೇಕು ಎಂಬ ಮಹದಾಸೆಯನ್ನು ಹೊತ್ತು ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದೇನೆ. ಪಕ್ಷಾತೀತವಾಗಿ ಜನರ ಪ್ರೀತಿ ಮತ್ತು ಆಶೀರ್ವಾದದ ಅವಶ್ಯಕತೆ ನನಗಿದೆ' ಎಂದು ಕೋರಿದರು.

ಸಭೆ ಉದ್ಘಾಟಿಸಿ ಮಾತನಾಡಿದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ, 'ಆನೇಕಲ್ ವಿಧಾನಸಭಾ ಕ್ಷೇತ್ರವು ಬಿಜೆಪಿಯ ಭದ್ರಕೋಟೆಯಾಗಿದೆ. ಕಾರ್ಯಕರ್ತರ ಬಲ, ಮುಖಂಡರ ಉತ್ಸಾಹ ನೋಡುತ್ತಿದ್ದರೆ ಈ ಬಾರಿ ಲೋಕಸಭಾ ಕ್ಷೇತ್ರದಲ್ಲಿ ಕಮಲ ಅರಳುವುದು ನಿಶ್ಚಿತವಾಗಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಮುನಿರತ್ನ ಮಾತನಾಡಿದರು.

ಶಾಸಕರಾದ ಎಂ.ಕೃಷ್ಣಪ್ಪ, ಸತೀಶ್ ರೆಡ್ಡಿ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಗೊಟ್ಟಿಗೆರೆ ಮಂಜುನಾಥ್, ಬಿಜೆಪಿ ಮಂಡಲ ಅಧ್ಯಕ್ಷ ಬಿ.ಬಿ.ಮುನಿರೆಡ್ಡಿ, ಮುನಿರಾಜುಗೌಡ ಮತ್ತಿತರರು ಇದ್ದರು.

'ರಾಕೆಟ್ ತಂತ್ರಜ್ಞಾನ ನಮ್ಮದೇ'

ವಿಶೇಷ ಉಪನ್ಯಾಸ ಕಾರ್ಯಕ್ರಮ: ಇತಿಹಾಸಕಾರ ಅಜಯ್ ಕುಮಾರ್ ಶರ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ರಾಕೆಟ್ ತಂತ್ರಜ್ಞಾನ ಅಸ್ತಿತ್ವದಲ್ಲಿದ್ದಿತ್ತು ಎನ್ನುವುದನ್ನು ಐತಿಹಾಸಿಕ ದಾಖಲೆಗಳಾದ ದಪ್ತರು ಮತ್ತು ವರ್ಣಚಿತ್ರಗಳು ಸಾಬೀತುಪಡಿಸುತ್ತವೆ' ಎಂದು ಇತಿಹಾಸಕಾರ ಅಜಯ್ ಕುಮಾರ್ ಶರ್ಮ ತಿಳಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಭಾರತೀಯ ಕಬ್ಬಿಣದ ರಾಕೆಟ್‌ಗಳ ಇತಿಹಾಸ–16ರಿಂದ 19ನೇ ಶತಮಾನದವರೆಗೆ' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ಭಾರತೀಯರು ಯೂರೋಪಿಯನ್ನರಿಂದ ರಾಕೆಟ್ ತಂತ್ರಜ್ಞಾನವನ್ನು ಬಲುವಳಿಯಾಗಿ ಪಡೆದುಕೊಂಡರು ಎನ್ನಲಾಗಿದೆ. ಇದು ಸತ್ಯಕ್ಕೆ ದೂರವಾಗಿದ್ದು, ಇಲ್ಲಿ ರಾಕೆಟ್ ತಂತ್ರಜ್ಞಾನ ಮೊದಲಿನಿಂದಲೂ ಅಸ್ತಿತ್ವದಲ್ಲಿತ್ತು. ಭಾರತ ಸುದೀರ್ಘವಾದ ಕ್ಷಿಪಣಿ ತಂತ್ರಜ್ಞಾನದ ಇತಿಹಾಸ ಹೊಂದಿದೆ.



ಕಾರ್ಯಕ್ರಮದಲ್ಲಿ ಅಜಯ್ ಕುಮಾರ್ ಶರ್ಮ ಮಾತನಾಡಿದರು

ವಸಿಷ್ಠರ ಧನುರ್ವೇದ ಸಂಹಿತೆ ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ದೊರೆಯುವ ಒಂದು ಪ್ರಮುಖ ಆಕರ ಗ್ರಂಥವಾಗಿದೆ. 2002ರಲ್ಲಿ ಶಿವಮೊಗ್ಗ ಜಿಲ್ಲೆಯ ಬಿದನೂರಿನಲ್ಲಿ ದೊರೆತ ಅಪಾರ ಪ್ರಮಾಣದ ಕಬ್ಬಿಣದ ತುಣುಕುಗಳು ಕೆಳದಿ ದೊರೆಗಳ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕಬ್ಬಿಣದ ರಾಕೆಟ್‌ಗಳ ಇತಿಹಾಸವನ್ನು ತಿಳಿಸುತ್ತವೆ. ವಿಜಯನಗರ ಕಾಲದ ಐತಿಹಾಸಿಕ ದಾಖಲೆಗಳಲ್ಲಿ ಕಂಡುಬರುವ 'ಬಾಣ ಬಿರುಸು', 'ಅಗ್ನಿ ಬಾಣ' ಮತ್ತು 'ಆಕಾಶ ಬಾಣ' ಪದಗಳು ಈ ತಂತ್ರಜ್ಞಾನದ ಅಸ್ತಿತ್ವದ ಬಗ್ಗೆ ತಿಳಿಸುತ್ತವೆ' ಎಂದರು.

ಮುಖ್ಯಾಂಶಗಳು

- ರಾಕೆಟ್ ತಂತ್ರಜ್ಞಾನ ಯುರೋಪಿಯನ್ನರದ್ದು ಎಂಬುದು ಸತ್ಯಕ್ಕೆ ದೂರ
- ಇಕ್ಕೇರಿ, ಮೈಸೂರು ರಾಜ್ಯಗಳಲ್ಲಿತ್ತು ಸುಧಾರಿತ ರಾಕೆಟ್ ತಂತ್ರಜ್ಞಾನ

'ಇಕ್ಕೇರಿ ಮತ್ತು ಮೈಸೂರು ರಾಜ್ಯಗಳು ಸುಧಾರಿತವಾದ ರಾಕೆಟ್ ತಂತ್ರಜ್ಞಾನವನ್ನು ಆ ಕಾಲದಲ್ಲಿಯೇ ಹೊಂದಿದ್ದವು. ಕೆಳದಿ ದೊರೆಯಾದ ಬಸವ ಭೂಪಾಲನ ವಿಶ್ವಕೋಶ ಗ್ರಂಥವಾದ 'ಶಿವತತ್ತ್ವ ರತ್ನಾಕರ'ದಲ್ಲಿ 'ನಾಲೀಕಾ' ಎಂಬ ಪದಗಳ ಬಳಕೆ ಲೋಹದ ರಾಕೆಟ್ ತಂತ್ರಜ್ಞಾನದ ಅಸ್ತಿತ್ವ ಕುರಿತು ತಿಳಿಸುತ್ತದೆ. ಮಧ್ಯಕಾಲೀನ ಕರ್ನಾಟಕವನ್ನು ಆಳಿದ ಅನೇಕ ಪಾಳೆಗಾರ ದೊರೆಗಳು ತಮ್ಮ ರಕ್ಷಣೆಗಾಗಿ ಈ ಯುದ್ಧ ತಂತ್ರಜ್ಞಾನವನ್ನು ಹೊಂದಿದ್ದರು' ಎಂದು ಹೇಳಿದರು.

ಕೆ. ನಾರಾಯಣ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸದಲ್ಲಿ 'ಭಾರತೀಯ ಪುರಾತನ ಕಾಲ ಗಣನೆಯಲ್ಲಿ ಸೂರ್ಯ, ನಕ್ಷತ್ರಗಳ ಪ್ರಾಮುಖ್ಯ' ಎಂಬ ವಿಷಯದ ಕುರಿತು ಮಾತನಾಡಿದ ಸಂಶೋಧಕ ಸುಂದರ್ ಚಕ್ರವರ್ತಿ, 'ಸೂರ್ಯನ ಚಲನೆಗೆ ಅನುಗುಣವಾಗಿ ದಕ್ಷಿಣಾಯಣ, ಉತ್ತರಾಯಣಗಳ ಜೊತೆಗೆ ಬೇರೆ ಬೇರೆ ಋತುಗಳ ಆಗಮನದಿಂದ ಅನೇಕ ಭೌಗೋಳಿಕ ಬದಲಾವಣೆಗಳನ್ನು ಪೃಥ್ವಿಯ ಮೇಲೆ ಕಾಣಬಹುದು. ಸೌರಮಾನದ ಕಾಲಗಣನೆಗೆ ಸಂಬಂಧಿಸಿದಂತೆ ನಮ್ಮ ಪ್ರಾಚೀನರು ತಮ್ಮ ಖಗೋಳ ವಿಜ್ಞಾನ ಮತ್ತು ಜ್ಯೋತಿಷ್ಯ ವಿಜ್ಞಾನ ಗ್ರಂಥಗಳಲ್ಲಿ ವೈಜ್ಞಾನಿಕವಾದ ವಿವರಣೆಗಳನ್ನು ನೀಡಿದ್ದಾರೆ. ಇಂದಿನ ಖಗೋಳ ವಿಜ್ಞಾನದ ಅಧ್ಯಯನದಲ್ಲಿ ಪ್ರಾಚೀನ ಕಾಲದ ಕಾಲಗಣನೆಯ ಜ್ಞಾನದ ಬಳಕೆ ಅತಿ ಅವಶ್ಯಕವಾಗಿದೆ' ಎಂದರು.

ದಿ ಮಿಥಿಕ್ ಸೊಸೈಟಿಯ ಕೋಶಾಧ್ಯಕ್ಷ ಕೆ.ಎನ್. ಹಿರಿಯಣ್ಣಯ್ಯ, ಗೌರವ ಕಾರ್ಯದರ್ಶಿ ಎಸ್. ರವಿ, ಆಡಳಿತ ಮಂಡಳಿಯ ಸದಸ್ಯ ಎಂ.ಆರ್. ಪ್ರಸನ್ನಕುಮಾರ್ ಪಾಲ್ಗೊಂಡಿದ್ದರು.

'ಮೋದಿ ಪ್ರಧಾನಿ ಆಗುವುದನ್ನು ತಡೆಯಲಾಗದು'

ಬೆಂಗಳೂರು: 'ನರೇಂದ್ರ ಮೋದಿ ಅವರು ಬಹುಮತ ಗಳಿಸಿ ಪ್ರಧಾನಿಯಾಗಿ ಪುನರಾಯ್ಕೆ ಆಗಲಿದ್ದಾರೆ. ಅದನ್ನು ಯಾರಿಗೂ ತಡೆಯಲಾಗದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬೆಂಗಳೂರು ಕೇಂದ್ರ ಕ್ಷೇತ್ರದ ಸಂಸದ ಪಿ.ಸಿ.ಮೋಹನ್ ಅವರ ಚುನಾವಣಾ ಕಚೇರಿ ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯದ 28 ಕ್ಷೇತ್ರಗಳಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಜಯಗಳಿಸಲಿದೆ. ಆ ಮೂಲಕ, 'ರಾಜ್ಯಕ್ಕೆ ಮೋದಿಯವರ ಕೊಡುಗೆ ಏನು' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಶ್ನೆಗೆ ಜನರು ಉತ್ತರ ನೀಡುತ್ತಾರೆ' ಎಂದರು.

ಶಾಸಕರಾದ ಎಸ್. ಸುರೇಶ್ ಕುಮಾರ್, ಎಸ್. ರಘು, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಮುಖಂಡ ಭಾಸ್ಕರ ರಾವ್ ಉಪಸ್ಥಿತರಿದ್ದರು.

ದಕ್ಷಿಣ, ಕೇಂದ್ರ ಕ್ಷೇತ್ರದಲ್ಲಿ ಚುನಾವಣಾ ಕಚೇರಿಗೆ ಚಾಲನೆ

'ಕಾಂಗ್ರೆಸ್ ನಾಯಕರು ಓಡಿಹೋಗಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ಪರ ಅಲೆ ಇರುವುದರಿಂದ ಕಾಂಗ್ರೆಸ್‌ನ ಸಚಿವರಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಧೈರ್ಯವಿಲ್ಲ. ಆ ಪಕ್ಷದ ನಾಯಕರು ಕಣದಿಂದ ಓಡಿಹೋಗಿದ್ದಾರೆ ಎಂದು ಪ್ರತಿಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಕಚೇರಿಯನ್ನು ಭಾನುವಾರ ಉದ್ಘಾಟಿಸಿ ಸುದ್ದಿಗಾರರ ಜತೆ ಮಾತನಾಡಿ, 'ಸಚಿವರು ಕಾಂಗ್ರೆಸ್ ಅಭ್ಯರ್ಥಿಗಳಾಗಿ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬ ಚರ್ಚೆ ಇತ್ತು. ಈಗ ಎಲ್ಲ ಸಚಿವರೂ ಬೆಂಗಳೂರಿನಿಂದ ಹಳ್ಳಿಗಳತ್ತ ಓಡಿಹೋಗಿದ್ದಾರೆ' ಎಂದು ಟೀಕಿಸಿದರು.

> **ಈಶ್ವರಪ್ಪ ಮನವೊಲಿಕೆಗೆ ಪ್ರಯತ್ನಿಸುತ್ತೇನೆ. ಇದು ಯಡಿಯೂರಪ್ಪ ಮತ್ತು ಈಶ್ವರಪ್ಪ ಮಧ್ಯದ ಮಾತುಕತೆ ಸಮಸ್ಯೆ. ಸಂಧಾನಕ್ಕೆ ಪ್ರಯತ್ನ ಮಾಡುತ್ತೇವೆ**
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

ಈ ಚುನಾವಣೆಯಲ್ಲಿ ಮೋದಿಯವರ ಪರವಾದ ಅಲೆ ಇದೆ. ಬಿಜೆಪಿ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲಿದೆ ಎಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ. ಜೆಡಿಎಸ್ ಜತೆಗಿನ ಮೈತ್ರಿಯೊಂದಿಗೆ ರಾಜ್ಯದ ಎಲ್ಲ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವ ಗುರಿ ಇದೆ ಎಂದರು.

'ಕಾಂಗ್ರೆಸ್‌ನಿಂದ ಭಯೋತ್ಪಾದನೆಗೆ ಬೆಂಬಲ': ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ಕಾಂಗ್ರೆಸ್ ಅಧಿಕಾರದಲ್ಲಿ ಇರುವ ಕಡೆಗಳಲ್ಲಿ ಭಯೋತ್ಪಾದನೆಗೆ ಬೆಂಬಲ ನೀಡುತ್ತದೆ. ಬಿಜೆಪಿ ಭಯೋತ್ಪಾದನೆಯನ್ನು ನಿಗ್ರಹಿಸುತ್ತದೆ. ಹತ್ತು ವರ್ಷಗಳಿಂದ ಈಚೆಗೆ ದೇಶದಲ್ಲಿ ಭಯೋತ್ಪಾದಕರ ದಾಳಿಯಿಂದ ಸಾವಿಗೀಡಾದವರ ಸಂಖ್ಯೆ ಕಡಿಮೆಯಾಗಿರುವುದೇ ಇದಕ್ಕೆ ಸಾಕ್ಷಿ' ಎಂದರು.

ಬಿಆರ್‌ಎಸ್ ತೊರೆದ ಸಂಸದ, ಶಾಸಕ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಚೆವೆಳ್ಳ ಸಂಸದ ರಂಜಿತ್ ರೆಡ್ಡಿ ಹಾಗೂ ಖೈರತಾಬಾದ್‌ನ ಶಾಸಕ ದಾನಂ ನಾಗೇಂದರ್ ಅವರು ಬಿಆರ್‌ಎಸ್ ಪಕ್ಷವನ್ನು ತೊರೆದು ಕಾಂಗ್ರೆಸ್ ಸೇರಿದ್ದಾರೆ.

ಇದಕ್ಕೂ ಮುನ್ನ ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಅವರು ರಂಜಿತ್ ಅವರನ್ನು ಚೆವೆಳ್ಳ ಲೋಕಸಭಾ ಕ್ಷೇತ್ರದಿಂದಲೇ ಮತ್ತೊಮ್ಮೆ ಅಭ್ಯರ್ಥಿಯಾಗಿ ಘೋಷಿಸಬೇಕೆಂದು ನಿರ್ಧರಿಸಿದ್ದರು. ಆದರೆ, ರಂಜಿತ್ ಅವರು ಈ ನಿರ್ಧಾರಕ್ಕೆ ಆಸಕ್ತಿ ತೋರಿರಲಿಲ್ಲ.

ಭಾನುವಾರ ಬೆಳಿಗ್ಗೆ ಕೆಸಿಆರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ ರಂಜಿತ್ ಅವರು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್‌ರೆಡ್ಡಿ ಅವರ ಉಪಸ್ಥಿತಿಯಲ್ಲಿ ಕಾಂಗ್ರೆಸ್ ಸೇರಿದರು. ಇದರ ಬೆನ್ನಲ್ಲೇ ರಂಜಿತ್ ಅವರು ಚೆವೆಳ್ಳ ಕ್ಷೇತ್ರದಿಂದಲೇ ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡಲಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ. ಅವರು ಸಿಕಂದರಾಬಾದ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆ.

ಹೂ ಸೊಬಗು...



ನಾಗರಬಾವಿಯಲ್ಲಿ ರಸ್ತೆ ಬದಿಯಲ್ಲಿನ ಟಬೂಬಿಯಾ ರೋಸಿಯಾ ಮರಗಳ ತುಂಬಾ ಹೂವು ಅರಳಿದ್ದು, ರಸ್ತೆಯ ಸೊಬಗನ್ನು ಹೆಚ್ಚಿಸಿವೆ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್


'ಚುನಾವಣೆ: ಪರ್ಯಾಯದತ್ತ ಯೋಚಿಸಿ'

ಪುರುಷೋತ್ತಮ ಬಿಳಿಮಲೆ ಅವರ 'ವರ್ತಮಾನ ಭಾರತ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ಘೋಷಣೆಯಾಗಿದ್ದು, ರಾಷ್ಟ್ರದ ಜನರು ಪರ್ಯಾಯ ಸರ್ಕಾರದತ್ತ ಗಂಭೀರ ಚಿಂತನೆ ನಡೆಸುವ ಅಗತ್ಯವಿದೆ. ಜೊತೆಗೆ ನಾಗರಿಕ ಹಕ್ಕುಗಳ ದಮನ ಮಾಡುತ್ತಿರುವ ಶಕ್ತಿಗಳ ವಿರುದ್ಧವೂ ಹೋರಾಟ ನಡೆಸಬೇಕು' ಎಂದು ಸಾಹಿತಿ ಜಿ.ರಾಮಕೃಷ್ಣ ಕರೆ ನೀಡಿದರು.

ನಗರದಲ್ಲಿ ಭಾನುವಾರ 'ಚಿರಂತ್ ಪ್ರಕಾಶನ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಪುರುಷೋತ್ತಮ ಬಿಳಿಮಲೆ ಅವರ 'ವರ್ತಮಾನ ಭಾರತ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.



ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪುರುಷೋತ್ತಮ ಬಿಳಿಮಲೆ ಅವರ 'ವರ್ತಮಾನ ಭಾರತ' ಕೃತಿಯನ್ನು ಸಾಹಿತಿ ಜಿ.ರಾಮಕೃಷ್ಣ ಬಿಡುಗಡೆ ಮಾಡಿದರು. ಪ್ರಕಾಶಕ ಪರಮೇಶ್ವರ, ಎ.ನಾರಾಯಣ, ವಿಜಯಮ್ಮ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

'ದೇಶದ ವರ್ತಮಾನದ ಸ್ಥಿತಿ ಅಷ್ಟು ಚೆನ್ನಾಗಿಲ್ಲ. ಇನ್ನು ಭವಿಷ್ಯ ರೂಪಿಸುವುದಾದರೂ ಹೇಗೆಂಬ ಚಿಂತೆ ಎಲ್ಲರನ್ನೂ ಕಾಡುತ್ತಿದೆ. ಸರ್ಕಾರದ ವಿರುದ್ಧ ಹೋರಾಟ ನಡೆಸಿದರೆ ಹೋರಾಟವನ್ನೇ ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ತಮಿಳುನಾಡು, ಕೇರಳ ಹಾಗೂ ಕರ್ನಾಟಕ ರಾಜ್ಯಗಳು ದೇಶಕ್ಕೆ ಕಂಟಕವಾಗುತ್ತಿವೆ ಎಂದು ಕೇಂದ್ರದ ನಾಯಕರು ಬೊಬ್ಬೆ ಹಾಕುತ್ತಿದ್ದಾರೆ. ಕೇಂದ್ರದ ನಾಯಕರಿಗೆ ಈ ದೇಶವನ್ನು ಸಮಗ್ರವಾಗಿ ಉಳಿಸಿಕೊಳ್ಳುವ ಆಲೋಚನೆಯೇ ಇಲ್ಲವಾಗಿದೆ' ಎಂದು ಕಿಡಿಕಾರಿದರು.

'ರಾಷ್ಟ್ರದಲ್ಲಿ ಹಲವು ಘಟನೆಗಳು ನಡೆಯುತ್ತಿವೆ. ಈ ಘಟನೆಗಳನ್ನು ನೋಡಿದರೆ, ನಾವು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ನಿರ್ಧರಿಸುವ ಕಾಲ ಹತ್ತಿರವಾಗಿದೆ. ಪ್ರಜ್ಞಾವಂತರಾಗಿ ಸಂಘಟಿತರಾಗಬೇಕು. ಇದಕ್ಕೆ ಬೇಕಾದ ತಯಾರಿ ಮಾಡಿಕೊಳ್ಳಬೇಕು' ಎಂದು ಕರೆ ನೀಡಿದರು.

'ಸ್ವಾತಂತ್ರ್ಯ ಹೋರಾಟದ ಮೂಲಕ ನಾವು ಸಂವಿಧಾನ ಪಡೆದಿದ್ದರೂ ಈಗ ದಯನೀಯ ಸ್ಥಿತಿಯಲ್ಲಿದ್ದೇವೆ. ಇಂದಿನ ಅವೈಜ್ಞಾನಿಕತೆಗೆ ಮದ್ದು ಕಂಡು ಹಿಡಿಯಬೇಕಿದೆ. ಕೊರೊನಾ ಸಂದರ್ಭದಲ್ಲಿ ಔಷಧ ಸಂಶೋಧಿಸಲು ಮುಂದೆ ಬಂದವರಿಂದಲೂ ಕೋಟ್ಯಂತರ ರೂಪಾಯಿ ಪಡೆಯಲಾಗಿದೆ. ಇದು ಸಂಸ್ಕೃತಿಯೇ' ಎಂದು ಪ್ರಶ್ನಿಸಿದರು.

'ಬಿಳಿಮಲೆ ಅವರ ಈ ಪುಸ್ತಕ ವರ್ತಮಾನದ ಅನೇಕ ಮುಖಗಳನ್ನು ಅನಾವರಣಗೊಳಿಸಿದೆ. ದೇಶದ ಸಮಗ್ರತೆ ದೃಷ್ಟಿಯಿಂದ ಉತ್ತಮ ಕೃತಿ ಇದಾಗಿದೆ' ಎಂದು ಹೇಳಿದರು.

ಕೃತಿ ಪರಿಚಯ

ಲೇಖಕ: ಪುರುಷೋತ್ತಮ ಬಿಳಿಮಲೆ
ಕೃತಿ ಹೆಸರು: 'ವರ್ತಮಾನ ಭಾರತ'
ಪ್ರಕಾಶನ: 'ಚಿರಂತ್'
ಬೆಲೆ: ₹325
ಪುಟಗಳು: 304

ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ವರ್ತಮಾನ ಭಾರತದಲ್ಲಿ ಪ್ರತಿಯೊಬ್ಬರೂ ಎದುರಿಸುತ್ತಿರುವ ಬಿಕ್ಕಟ್ಟಿನಲ್ಲಿ ಭಾಷೆಗಳ ಪತನವೂ ಒಂದು. ಭಾರತಕ್ಕೊಂದು ಭಾಷಾ ನೀತಿಯನ್ನು ರೂಪಿಸುವ ಅಗತ್ಯವಿದೆ' ಎಂದು ಹೇಳಿದರು.

'ದೇಶದಲ್ಲಿ ಸಾವಿರಾರು ಭಾಷೆಗಳಿವೆ. ಕರ್ನಾಟಕ ರಾಜ್ಯದಲ್ಲೇ ಸುಮಾರು 76 ಭಾಷೆಗಳಿವೆ. ಆದರೆ, ಈ ಎಲ್ಲ ಭಾಷೆಗಳ ಸಂರಕ್ಷಣೆ ಮಾಡುವುದು ಯಾರ ಹೊಣೆ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ' ಎಂದು ಹೇಳಿದರು.

ಕೃತಿ ಕುರಿತು ಮಾತನಾಡಿದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎ.ನಾರಾಯಣ, 'ಕೃತಿ ವರ್ತಮಾನದ ಬಗ್ಗೆ ಬೆಳಕು ಚೆಲ್ಲಿದೆ. ಲೇಖಕರಾದವರು ವರ್ತಮಾನದ ವಿಚಾರಗಳ ಬಗ್ಗೆ ಬರೆಯುವ ಧೈರ್ಯ ತೋರಬೇಕು' ಎಂದರು. ಲೇಖಕಿ ವಿಜಯಮ್ಮ ಹಾಗೂ ಚಿರಂತ್ ಪ್ರಕಾಶನದ ಎಚ್.ಪರಮೇಶ್ವರ ಹಾಜರಿದ್ದರು.

₹ 50 ಸಾವಿರ ಪರಿಹಾರಕ್ಕೆ ಆಗ್ರಹ

ತುಮಕೂರು: ಹಾವೇರಿ ಜಿಲ್ಲೆಯ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಈಚೆಗೆ ನಡೆದ ಘಟನೆಗೆ ಕೇಂದ್ರ ಸರ್ಕಾರದ ಕಾರ್ಪೊರೇಟ್ ಕಂಪನಿಗಳ ಪರವಾದ ನೀತಿಗಳೇ ಕಾರಣ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಎಂ) ಆರೋಪಿಸಿದೆ.

ಉದ್ರಿಕ್ತ ಗುಂಪು ಮಾರುಕಟ್ಟೆಯ ಆಸ್ತಿಗೆ ಹಾನಿ ಮಾಡಿದ್ದು ಒಪ್ಪುವಂತಹದ್ದಲ್ಲ. ಆದರೆ, ರೈತರ ಆಕ್ರೋಶಕ್ಕೆ ಕಾರಣವಾದ ಅಂಶಗಳನ್ನು ಸರ್ಕಾರ ಗಮನಿಸಬೇಕು. ಬೆಲೆ ಕುಸಿತವು ರೈತರನ್ನು ತೀವ್ರ ಆತಂಕಕ್ಕೆ ತಳ್ಳಿದೆ. ಈ ಸಮಯವನ್ನು ಕೆಲವು ಕಿಡಿಗೇಡಿಗಳು ಲೂಟಿಗೆ ಬಳಸಿಕೊಂಡಿದ್ದಾರೆ. ಈ ಕೃತ್ಯ ಖಂಡನೀಯ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ನಗರ ಕಾರ್ಯದರ್ಶಿ ಎ.ಲೋಕೇಶ್ ಒತ್ತಾಯಿಸಿದ್ದಾರೆ.

ತಮ್ಮ ಲಾಭಕ್ಕೆ ತಕ್ಕಂತೆ ಕೃಷಿ ಉತ್ಪನ್ನಗಳ ಬೆಲೆ ಏರಿಳಿತ ಮಾಡಿ ಲೂಟಿ ಮಾಡುವ ಕಾರ್ಪೊರೇಟ್ ವ್ಯಾಪಾರಿಗಳ ನೀತಿಯೇ ಈ ಘಟನೆಗೆ ಕಾರಣ. ಇದಕ್ಕೆ ಅವಕಾಶ ನೀಡಿರುವ ಕೇಂದ್ರ ಸರ್ಕಾರವೇ ಈ ದುರಂತಕ್ಕೆ ನೇರ ಹೊಣೆ. ಬೆಲೆ ಕುಸಿತದಿಂದ ನಷ್ಟ ಆಗಿರುವ ರೈತರನ್ನು ಗುರುತಿಸಿ ಎಕರೆಗೆ ₹50 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಮೇ15ರಿಂದ 31ರೊಳಗೆ ನಿಗದಿಯಂತೆ ಪರೀಕ್ಷೆ: ಯುಜಿಸಿ

ಸಿಯುಇಟಿ ಪರೀಕ್ಷೆ ದಿನ ಬದಲಾಗಲ್ಲ

ನವದೆಹಲಿ (ಪಿಟಿಐ): ಈ ಹಿಂದೆ ಘೋಷಿಸಿದಂತೆ ಬರುವ ಮೇ 15 ಮತ್ತು ಮೇ 31ರ ನಡುವೆ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಸಿಯುಇಟಿ)–ಯುಜಿ ನಡೆಯಲಿವೆ. ಲೋಕಸಭೆ ಚುನಾವಣೆ ನಿಗದಿಯಾಗಿರುವ ಕಾರಣ ಪರೀಕ್ಷೆ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ)ದ ಅಧ್ಯಕ್ಷ ಜಗದೀಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.



ಜಗದೀಶ್ ಕುಮಾರ್

ಅಲ್ಲದೇ ಪರೀಕ್ಷೆಗೆ ನೋಂದಣಿ ಪ್ರಕ್ರಿಯೆ ಮುಗಿದ ಬಳಿಕ ಪರೀಕ್ಷಾ ದಿನಾಂಕ, ವೇಳಾಪಟ್ಟಿ ಬಿಡುಗಡೆ ಮಾಡಲಾಗುವುದು ಎಂದರು. ಆದಾಗ್ಯೂ ಈ ತಿಂಗಳ ಆರಂಭದಲ್ಲಿ ಈ ಬಗ್ಗೆ ಮಾತನಾಡಿದ್ದ ಯುಜಿಸಿ ಅಧ್ಯಕ್ಷ ಜಗದೀಶ್ 'ಮುಂಬರುವ ಲೋಕಸಭೆ ಚುನಾವಣೆಯ ದಿನಾಂಕದ ಆಧಾರದಲ್ಲಿ ಪರೀಕ್ಷೆ ದಿನಾಂಕವನ್ನು ಬದಲಾಯಿಸಬಹುದು' ಎಂದಿದ್ದರು.

ದೇಶದ 543 ಲೋಕಸಭೆ ಸ್ಥಾನಗಳಿಗೆ ಒಟ್ಟು 7 ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಏ.19ರಂದು ಮೊದಲ ಹಂತದಲ್ಲಿ 102 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ ಹಾಗೂ ಜೂನ್ 4ರಂದು ಮತ ಎಣಿಕೆ ನಡೆಸಲಾಗುತ್ತದೆ ಎಂದು ಕಳೆದ ಶನಿವಾರ ಚುನಾವಣಾ ಆಯೋಗ ಘೋಷಣೆ ಮಾಡಿದೆ.

ಈ ಮೊದಲೇ ಘೋಷಿಸಿರುವಂತೆ ರಾಷ್ಟ್ರೀಯ ಪರೀಕ್ಷಾ ಮಂಡಳಿಯು ಮೇ 15ರಿಂದ 31ರವರೆಗೆ ಸಿಯುಇಟಿ–ಯುಜಿ ಪರೀಕ್ಷೆಗಳನ್ನು ನಡೆಸುವುದಾಗಿ ಘೋಷಿಸಿದೆ. ಈ ಅವಧಿಯಲ್ಲಿ ಮೇ 20 ಮತ್ತು ಮೇ 25ರಂದು ಎರಡು ಬಾರಿ ದೇಶದ ವಿವಿಧೆಡೆ ಚುನಾವಣೆ ನಿಗದಿಯಾಗಿದೆ.

ಪರೀಕ್ಷೆಗೆ ಅರ್ಜಿ ಸಲ್ಲಿಕೆಗೆ ಇದೇ 26ರಂದು ಕೊನೆಯ ದಿನಾಂಕ. ಬಳಿಕ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಪ್ರದೇಶವಾರು ಹಂಚಿಕೆ ಬಗ್ಗೆ ತಿಳಿದುಕೊಳ್ಳುತ್ತೇವೆ. ಈ ಅಂಕಿಅಂಶದ ಆಧಾರದ ಮೇಲೆ ಪರೀಕ್ಷಾ ಮಂಡಳಿಯು ವೇಳಾಪಟ್ಟಿ ಪ್ರಕಟಿಸಲಿದೆ. ಹಾಗಿದ್ದರೂ ನಿಗದಿತ ದಿನಾಂಕಗಳನ್ನು ಬದಲಾಯಿಸುವುದಿಲ್ಲ ಎಂದು ಜಗದೀಶ್ ತಿಳಿಸಿದ್ದಾರೆ.

ಭೂಮಿಯಲ್ಲಿ ಹುದುಗಿಸಿದ್ದ ಗಾಂಜಾ ಪತ್ತೆ ಮಾಡಿದ ಶ್ವಾನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಭೂಮಿಯ ಒಳಗೆ ಬಚ್ಚಿಟ್ಟಿದ್ದ 240 ಗ್ರಾಂ ಗಾಂಜಾವನ್ನು ಕೊಡಗು ಜಿಲ್ಲಾ ಪೊಲೀಸ್ ಘಟಕದ ಶ್ವಾನದಳದ 'ಕಾಪರ್' ಎಂಬ ಶ್ವಾನವು ಭಾನುವಾರ ಪತ್ತೆಹಚ್ಚಿದ್ದು, ಆರೋಪಿ ಬಸವರಾಜು (37) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.



ಆರೋಪಿ ಬಸವರಾಜ

'ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ದೊಡ್ಡಹೊಸೂರು ಗ್ರಾಮದ ಆರೋಪಿಯು ಕುಶಾಲನಗರದ ಬಸವನಹಳ್ಳಿ ಸಮೀಪದ ತೆಪ್ಪದಕಂಡಿ ಎಂಬಲ್ಲಿಗೆ ಬಂದು ಗಾಂಜಾ ಮಾರುತ್ತಿದ್ದ ಸುಳಿವು ದೊರೆಯಿತು. ತಕ್ಷಣವೇ ದಾಳಿ ನಡೆಸಿ ದ್ವಿಚಕ್ರವಾಹನ ಸಮೇತ ಒಂದಿಷ್ಟು ಗಾಂಜಾ ವಶಪಡಿಸಿಕೊಳ್ಳಲಾಯಿತು. ಬಳಿಕ ಅನುಮಾನದ ಮೇರೆಗೆ ದೊಡ್ಡಹೊಸೂರಿನ ಈತನ ಮನೆಯ ಮೇಲೆ ದಾಳಿ ನಡೆಸಲಾಯಿತು. ಆಗ ಮಾದಕದ್ರವ್ಯ ಪತ್ತೆ ಕುರಿತು ಪರಿಣತಿ ಪಡೆದಿದ್ದ 'ಕಾಪರ್' ಎಂಬ ಶ್ವಾನವು ಮನೆಯಲ್ಲಿ ಹುಡುಕಾಡಿ, ಕೊನೆಗೆ ಮನೆಯ ಶೌಚಾಲಯದ ಹಿಂಭಾಗ ಭೂಮಿಯಲ್ಲಿ ಬಚ್ಚಿಟ್ಟಿದ್ದ ಗಾಂಜಾವನ್ನು ಪತ್ತೆ ಹಚ್ಚಿತು' ಎಂದು ಪೊಲೀಸರು ತಿಳಿಸಿದರು.

ಸಂಗೀತದಿಂದ ಮನೋವಿಕಾಸ, ಮಾನಸಿಕ ಶಾಂತಿ: ಸಿ.ಸೋಮಶೇಖರ್

ಮೂವರು ಸಾಧಕರಿಗೆ ಎಸ್‌ವಿಎನ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಶ್ರೀರಾಮಸೇನಾ ಮಂಡಳಿ ಟ್ರಸ್ಟ್ ಆಯೋಜಿಸಿದ್ದ ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮರಣಾ ಸಂಗೀತೋತ್ಸವದಲ್ಲಿ ಸಂಗೀತ ಕ್ಷೇತ್ರದ ಮೂವರು ಸಾಧಕರಿಗೆ ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಟಿ.ಎಚ್.ವಿನಾಯಕರಾಮ್ ಹಾಗೂ ರುದ್ರಪಟ್ಟಣಂ ಸಹೋದರರಾದ ಆರ್.ಎನ್.ತ್ಯಾಗರಾಜನ್ ಹಾಗೂ ಆರ್.ಎನ್. ತಾರಾನಾಥನ್ ಅವರಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನ ಮಾಡಿದ ಬಳಿಕ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಸೋಮಶೇಖರ್ ಮಾತನಾಡಿ, 'ಸಂಗೀತದಿಂದ ಮನೋವಿಕಾಸ, ಮಾನಸಿಕ ಶಾಂತಿ, ಮನರಂಜನೆ ದೊರೆಯುತ್ತದೆ. ಸಂಗೀತವು ಕಲೆ ಹಾಗೂ ವಿಜ್ಞಾನವೂ ಹೌದು' ಎಂದು ಹೇಳಿದರು.

'ಮೂವರು ಸಂಗೀತ ತಪಸ್ವಿಗಳನ್ನು ಈ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗಿದೆ. ರುದ್ರಪಟ್ಟಣಂ ಅನೇಕ ಸಂಗೀತ ಸಾಧಕರನ್ನು ರಾಷ್ಟ್ರಕ್ಕೆ ನೀಡಿದೆ. ಸಂಗೀತ ಕ್ಷೇತ್ರದ ಸಾಧಕರಿಗೆ ಜನ್ಮನೀಡುವ ಭೂಮಿ ಅದು' ಎಂದು ಹೇಳಿದರು.

'ನಾರಾಯಣ ಸ್ವಾಮಿ ಅವರು ತಮ್ಮ 14ನೇ ವಯಸ್ಸಿನಲ್ಲೇ ಶ್ರೀರಾಮಸೇನಾ ಮಂಡಳಿ ಸ್ಥಾಪಿಸಿ ಅದರ ಮೂಲಕ ನಾಡಿಗೆ ಅನೇಕ ಸಂಗೀತ ದಿಗ್ಗಜರನ್ನು ಪರಿಚಯಿಸಿದ್ದರು. ಈ ಮಂಡಳಿಗೆ ರಾಷ್ಟ್ರಪತಿ ಸೇರಿದಂತೆ ಅನೇಕರು ಭೇಟಿ ನೀಡಿದ್ದರು' ಎಂದು ಸ್ಮರಿಸಿದರು.

'ರಾಮಪ್ರಸಾದ್ ಅವರು ಏಕಾಂಗಿಯಾಗಿ ತಂದೆಯವರ ಸೇವೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಸಿಎಂಆರ್ ವಿಶ್ವವಿದ್ಯಾಲಯದ ಮುಖ್ಯಸ್ಥ ಕೆ.ಸಿ.ರಾಮಮೂರ್ತಿ ಮಾತನಾಡಿ, 'ಮಂಡಳಿಯ ಕೆಲಸವನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಎಸ್‌ವಿಎನ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಅವರ ಪುತ್ರ ಸಾಗುತ್ತಿದ್ದಾರೆ. ರಾಮಪ್ರಸಾದ್ ಅವರಿಗೆ ಸಂಗೀತ ಕ್ಷೇತ್ರದ ಮೇಲೆ ಅಗಾಧವಾದ ಆಸಕ್ತಿ ಹಾಗೂ ಒಲವು' ಎಂದು ಹೇಳಿದರು.

ಟ್ರಸ್ಟಿ ಶಿವರಾಮಯ್ಯ ಮಾತನಾಡಿ, 'ಮಂಡಳಿಯಿಂದ 2001ರಿಂದ ಇಲ್ಲಿಯವರೆಗೆ ಎಂ.ಎಸ್.ಸುಬ್ಬುಲಕ್ಷ್ಮಿ ಸೇರಿದಂತೆ ಅನೇಕ ಸಾಧಕರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ' ಎಂದು ಹೇಳಿದರು. ಟ್ರಸ್ಟ್ ಅಧ್ಯಕ್ಷ ಎ.ರವೀಂದ್ರ ಹಾಜರಿದ್ದರು.

ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೂ ಮೊದಲು ಹಾಗೂ ನಂತರ ಸಂಗೀತ ಕಾರ್ಯಕ್ರಮಗಳು ನಡೆದವು. ಅನುರಾಧಾ ಮಧುಸೂದನ್ ತಂಡದಿಂದ ವೀಣಾವಾದನ ನಡೆಯಿತು.



ಆರ್.ಎನ್. ತ್ಯಾಗರಾಜನ್, ಆರ್.ಎನ್.ತಾರಾನಾಥನ್ ಹಾಗೂ ಟಿ.ಎಚ್. ವಿನಾಯಕರಾಮ್ ಅವರಿಗೆ ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಿ.ಸೋಮಶೇಖರ್, ಎ.ರವೀಂದ್ರ, ಕೆ.ಸಿ.ರಾಮಮೂರ್ತಿ, ಕುಮರೇಶ್ ರಾಜಗೋಪಾಲನ್, ಶ್ರೀರಾಮ ಸೇವಾ ಮಂಡಳಿ ಟ್ರಸ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್.ರಾಮಪ್ರಸಾದ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಸಿದ್ಧವಾಗದ ಸೇವಾಜ್ಯೇಷ್ಠತೆ ಪಟ್ಟಿ • ಗ್ರಾಮ ಪಂಚಾಯಿತಿಗೇ ಸೀಮಿತವಾದ ಸೇವೆ

ಪಿಡಿಒಗಳಿಗೆ ಇನ್ನೂ ಸಿಗದ ಸೇವಾ ಬಡ್ತಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ರಾಜ್ಯದಲ್ಲಿ ನೇರ ನೇಮಕಾತಿಯಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿ (ಪಿಡಿಒ) 13 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹಲವರಿಗೆ ಇನ್ನೂ ಸೇವಾಬಡ್ತಿ ಸಿಕ್ಕಿಲ್ಲ. ಅವರ ಸೇವೆ ಇನ್ನೂ ಗ್ರಾಮ ಪಂಚಾಯಿತಿಗೇ ಸೀಮಿತವಾಗಿದೆ.

'ನಾವು 2009-10ರಲ್ಲೇ ಪಿಡಿಒ ಆಗಿದ್ದೇವೆ. ನಮ್ಮ ನಂತರದಲ್ಲಿ ಗ್ರಾಮ ಪಂಚಾಯಿತಿ ಗ್ರೇಡ್‌-1 ಕಾರ್ಯದರ್ಶಿ ಹುದ್ದೆಯಿಂದ ಪಿಡಿಒ ಹುದ್ದೆಗೆ ಪದೋನ್ನತಿ ಹೊಂದಿದವರಲ್ಲಿ ಕೆಲವರು, ಮತ್ತೊಂದು ಬಡ್ತಿ ಪಡೆದು ಸಹಾಯಕ ನಿರ್ದೇಶಕರಾಗಿದ್ದಾರೆ. ನಾವು ಇನ್ನೂ ಪಿಡಿಒ ಹುದ್ದೆಯಲ್ಲೇ ಮುಂದುವರಿದಿದ್ದೇವೆ. ಕ್ರಮಬದ್ಧವಾಗಿ ಸೇವಾಜ್ಯೇಷ್ಠತೆ ಪಟ್ಟಿ ಸಿದ್ಧಪಡಿಸದ ಪರಿಣಾಮ, ನಮಗೆ ಅನ್ಯಾಯವಾಗಿದೆ' ಎಂದು ಪಿಡಿಒಗಳು ದೂರುತ್ತಾರೆ.

ಪ್ರಜಾವಾಣಿ ವಿಶೇಷ

'2008-09ರಲ್ಲಿ ಪಿಡಿಒ ಹುದ್ದೆ ಸೃಜಿಸಲಾಯಿತು. ಶೇ 66ರಷ್ಟು ಹುದ್ದೆ ನೇರ ನೇಮಕಾತಿಯಡಿ ಮತ್ತು ಶೇ 33ರಷ್ಟು ಹುದ್ದೆ ಬಡ್ತಿ ಮೂಲಕ ತುಂಬಲು ಸರ್ಕಾರ ತೀರ್ಮಾನಿಸಿತು. ಪ್ರತಿ ವರ್ಷ ಶೇ 33ರಷ್ಟು ಹುದ್ದೆಗಳಂತೆ ಮೂರು ವರ್ಷಗಳಲ್ಲಿ 5,628 ಹುದ್ದೆ ಭರ್ತಿಗೊಳಿಸಲು ನಿರ್ಣಯಿಸಿತ್ತು. ನೇರ ನೇಮಕಾತಿ ಹುದ್ದೆಗಳನ್ನು ಮೂರು ವರ್ಷಗಳಲ್ಲಿ ನಿಯಮದಂತೆ ಭರ್ತಿ ಮಾಡಿದ್ದಾರೆ. ಬಡ್ತಿ ಮೂಲಕ ತುಂಬಬೇಕಿದ್ದ ಹುದ್ದೆಗಳನ್ನು ಮೂರು ವರ್ಷ ಬದಲು ಎರಡೇ ವರ್ಷದಲ್ಲಿ ತುಂಬಿದ್ದಾರೆ. ಇದರಿಂದ ಬಡ್ತಿ ಮೂಲಕ ಪಿಡಿಒ ಆದವರು, ಸೇವಾಜ್ಯೇಷ್ಠತೆ ಪಟ್ಟಿಯಲ್ಲಿ ಮುಂದಿದ್ದಾರೆ' ಎಂಬುದು ತಕರಾರು.

'2014, 2017ರಲ್ಲಿ ಸೇವಾಜ್ಯೇಷ್ಠತೆ ಪಟ್ಟಿ ಕ್ರಮಬದ್ಧವಾಗಿರದ ಕಾರಣ, ಕೆಎಟಿ ರದ್ದುಪಡಿಸಿದೆ. ನಂತರದಲ್ಲಿ ಸೇವಾಜ್ಯೇಷ್ಠತೆ ಪಟ್ಟಿಯೇ ಸಿದ್ಧವಾಗದ್ದರಿಂದ ಬಡ್ತಿ ಪ್ರಕ್ರಿಯೆಯೇ ನನೆಗುದಿಗೆ ಬಿದ್ದಿದೆ' ಎಂದು ಆರೋಪಿಸಿದರು.

'ಗ್ರಾ.ಪಂ ಕಾರ್ಯದರ್ಶಿ ಆಗಿದ್ದವರಿಗೆ ಪಿಡಿಒ ಹುದ್ದೆಗೆ ಪದೋನ್ನತಿ ನೀಡಿ, 2010ರ ಮಾರ್ಚ್ 11ರಂದು ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯದ ಹಲವು ಜಿಲ್ಲಾ ಪಂಚಾಯಿತಿಗಳು ಈ ಆದೇಶ ಹೊರಡಿಸಿದ ದಿನಕ್ಕಿಂತ ಪೂರ್ವದಲ್ಲಿನ ದಿನಾಂಕ ನಮೂದಿಸಿ, ಹಲವರಿಗೆ ಅಕ್ರಮವಾಗಿ ಬಡ್ತಿ ಆದೇಶ ನೀಡಿವೆ. 2010ರ ಮಾರ್ಚ್‌ನಲ್ಲಿ ಪಿಡಿಒ ಆಗಿ ಬಡ್ತಿ ಪಡೆದವರು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿಯೂ ಅದೇ ತಿಂಗಳ ವೇತನ ಪಡೆದಿದ್ದಾರೆ. ಈ ಬಗ್ಗೆ ತನಿಖೆಯಾಗಬೇಕು' ಎಂದು ಒತ್ತಾಯಿಸಿದರು.

ಆಯುಕ್ತರಿಗೆ ಪತ್ರ: 'ಒಂದು ವೇಳೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ನಿಯಮಾನುಸಾರ ಪಿಡಿಒ ಹುದ್ದೆಗೆ ಬಡ್ತಿ ನೀಡಿದ್ದರೆ, ಎಲ್ಲರೂ 2010ರ ಮಾರ್ಚ್‌ನಲ್ಲೇ ಎಚ್‌ಆರ್‌ಎಂಎಸ್ ತಂತ್ರಾಂಶದ ಮೂಲಕ ವೇತನ ಪಡೆಯಬೇಕಿತ್ತು. ಕೆಲವರಷ್ಟೇ ಆ ತಿಂಗಳ ವೇತನ ಪಡೆದಿರುವುದರಿಂದ ಅಕ್ರಮಕ್ಕೆ ಎಡೆಮಾಡಿ ಕೊಟ್ಟಂತಾಗುತ್ತದೆ. ಈ ಬಗ್ಗೆ ತನಿಖೆಯಾಗಬೇಕು. 12 ಜಿಲ್ಲೆಗಳಲ್ಲಿ 91ಕ್ಕೂ ಅಧಿಕ ಪಿಡಿಒ ಹುದ್ದೆಗಳಿಗೆ ಅಕ್ರಮವಾಗಿ ಬಡ್ತಿ ನೀಡಲಾಗಿದೆಯೇ ಎಂಬುದನ್ನು ಪರೀಕ್ಷಿಸಬೇಕು' ಎಂದು ಆಗ್ರಹಿಸಿ ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ಅವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಆಯುಕ್ತರಿಗೆ 2024ರ ಫೆ.8ರಂದು ಪತ್ರ ಬರೆದಿದ್ದಾರೆ.

ವಿವಿಧ ಆರೋಪ, ದೂರುಗಳ ಹಿನ್ನೆಲೆಯಲ್ಲಿ, ಪಿಡಿಒಗಳಿಗೆ ಬಡ್ತಿ ನೀಡಲು ಹೊಸ ಸೇವಾಜ್ಯೇಷ್ಠತೆ ಪಟ್ಟಿ ಸಿದ್ಧಪಡಿಸುವಂತೆ ನ್ಯಾಯಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ನೀಡಿದ್ದ ಗಡುವು ಮುಗಿದಿತ್ತು. ಈಗ ಮತ್ತೆ ಗಡುವು ವಿಸ್ತರಿಸಿದ ನ್ಯಾಯಾಲಯ, 2024ರ ಜುಲೈ 16ರೊಳಗೆ ಪಟ್ಟಿ ಪ್ರಕಟಿಸಲು ನಿರ್ದೇಶನ ನೀಡಿದೆ.

> ಕಲಬುರಗಿ ಜಿಲ್ಲೆಯಲ್ಲಿ ಪಿಡಿಒದಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ನಿಯಮಾನುಸಾರ ಬಡ್ತಿ ಕೊಟ್ಟಿಲ್ಲ. ಹಲವರಿಗೆ ಅನ್ಯಾಯವಾಗಿದೆ
> **ಶಿವಾನಂದ ಕವಲಗಿ,** ಜಿಲ್ಲಾ ಘಟಕದ ಖಜಾಂಚಿ, ಆರ್‌ಡಿಪಿಆರ್ ನೌಕರರ ಸಂಘ, ಕಲಬುರಗಿ

> ಪಿಡಿಒಗಳಿಗೆ ಬಡ್ತಿ ನೀಡಲು, ನ್ಯಾಯಾಲಯದ ಸೂಚನೆಯಂತೆ ಸೇವಾಜ್ಯೇಷ್ಠತೆ ಪಟ್ಟಿ ತಯಾರಿಸುತ್ತಿದ್ದೇವೆ. ಅರ್ಹರಿಗೆ ಬಡ್ತಿ ಕೊಡಲಾಗುವುದು
> **ಪ್ರಿಯಾಂಕಾ ಮೇರಿ ಫ್ರಾನ್ಸಿಸ್,** ಆಯುಕ್ತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

> ಪಿಡಿಒಗಳಿಗೆ ಬಡ್ತಿ ನೀಡುವ ವಿಚಾರದಲ್ಲಿ ಸರ್ಕಾರದ ವಿಳಂಬ ನೀತಿ ಸರಿಯಲ್ಲ. ಎಲ್ಲರಿಗೂ ನ್ಯಾಯಯುತವಾಗಿ ಬಡ್ತಿ ಕೊಡದಿದ್ದರೆ ಹೋರಾಟ ನಿಶ್ಚಿತ
> **ರಾಜು ವಾರದ** ಅಧ್ಯಕ್ಷ, ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು

'617 ಮಂದಿಗೆ ಬಡ್ತಿ ಕೊಟ್ಟಿದ್ದೇವೆ'

'ರಾಜ್ಯದಲ್ಲಿ 2010ರಿಂದ ಈವರೆಗೆ 617 ಮಂದಿಗೆ ಪಿಡಿಒ ಹುದ್ದೆಯಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ಕೊಟ್ಟಿದ್ದೇವೆ. ಈ ಪೈಕಿ ವಿವಿಧ ಜಿಲ್ಲೆಯವರು 512 ಮತ್ತು ಕಲ್ಯಾಣ ಕರ್ನಾಟಕದವರು 105 ಮಂದಿ ಇದ್ದಾರೆ. ವಿವಿಧ ಜಿಲ್ಲೆಯವರಿಗೆ 2018ರಲ್ಲಿ ಕೊನೆಯದಾಗಿ ಸಾರ್ವತ್ರಿಕವಾಗಿ ಬಡ್ತಿ ಕೊಟ್ಟಿದ್ದರೆ, ಕಲ್ಯಾಣದವರಿಗೆ 2021ರಲ್ಲಿ ಕಡೇಯದಾಗಿ ಬಡ್ತಿ ಕೊಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಒಂಟೆ ಕಚ್ಚಿ ಬಾಲಕನ ಮೂಗಿನ ಮೂಳೆ ಮುರಿತ..!

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ಒಂಟೆಯೊಂದು ಬಾಲಕನಿಗೆ ಕಚ್ಚಿದ ಪರಿಣಾಮ ಆತನ ಮೂಗಿನ ಮೂಳೆ ಮುರಿದಿರುವ ಘಟನೆ ಪಟ್ಟಣದ ಮಹಾಂತೇಶ ನಗರದಲ್ಲಿ ಭಾನುವಾರ ಸಂಜೆ ನಡೆದಿದೆ.

ಪಟ್ಟಣದ ನೇತಾಜಿ ನಗರದ 12 ವರ್ಷದ ಬಾಲಕ ಅಮನ್ ಜಾಧವ ಎಂಬಾತನನ್ನು ಒಂಟೆ ಕಚ್ಚಿ ಗಾಯಗೊಳಿಸಿದೆ.

ಮುದ್ದೇಬಿಹಾಳ ಪಟ್ಟಣದಲ್ಲಿ ಹಲವು ದಿನಗಳಿಂದ ಕೆಲವರು ನಾಲ್ಕೈದು ಒಂಟೆಗಳನ್ನು ನಿತ್ಯವೂ ವಿವಿಧ ವಾರ್ಡ್‌ಗಳಲ್ಲಿ ಸುತ್ತಾಡಿಸಿ, ಮಕ್ಕಳನ್ನು ಒಂಟೆಗಳ ಮೇಲೆ ಕೂಡಿಸಿ ₹10, ₹20 ಪಡೆದುಕೊಂಡು ಆಟವಾಡಿ ಸುತ್ತಿದ್ದರು.

'ಭಾನುವಾರ ನೇತಾಜಿ ನಗರದಿಂದ ಮಹಾಂತೇಶ ನಗರದ ಕಡೆಗೆ ಒಂಟೆ ಹೊರಟಿದ್ದನ್ನು ಮಕ್ಕಳು ಕುತೂಹಲದಿಂದ ನೋಡುತ್ತ ಬೆನ್ನತ್ತಿದ್ದಾರೆ. ಆಗ ಏಕಾಏಕಿ ಅಮನ್‌ಗೆ ಒಂಟೆ ಕಚ್ಚಿದೆ. ತಕ್ಷಣ ಆತನನ್ನು ಮುದ್ದೇಬಿಹಾಳ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕಳಿಸಲಾಗಿದೆ. ಒಂಟೆಯನ್ನು ಮಾಲೀಕರ ಸಮೇತ ಪೊಲೀಸ್ ಠಾಣೆಗೆ ಕರೆತರಲಾಗಿದ್ದು, ಅವರ ಮೇಲೆ ಯಾವುದೇ ದೂರು ದಾಖಲಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಮಶಾನ, ತಿಪ್ಪೆಯಲ್ಲಿ ಕೇಸರಿ ಧ್ವಜ, ರಾಮನ ಫ್ಲೆಕ್ಸ್



ಶ್ರೀನಿವಾಸಪುರ: ತಾಲ್ಲೂಕಿನ ಅಡ್ಡಗಲ್ ಗ್ರಾಮದಲ್ಲಿ ಮನೆಗಳ ಮೇಲೆ ಅಳವಡಿಸಿದ್ದ ಕೇಸರಿ ಧ್ವಜ ಹಾಗೂ ರಾಮನ ಫ್ಲೆಕ್ಸ್ ತೆರವುಗೊಳಿಸಿ ಕೂರೀಗೆಪಲ್ಲಿ ರಸ್ತೆಯ ತಿಪ್ಪೆ ಹಾಗೂ ಸ್ಮಶಾನದ ಬಳಿ ಬಿಸಾಡಲಾಗಿದೆ.

ಚುನಾವಣಾ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಗ್ರಾಮದಲ್ಲಿ ಅಳವಡಿಸಲಾಗಿದ್ದ ಈ ಕಟೌಟ್ ಹಾಗೂ ಧ್ವಜಗಳನ್ನು ತೆರವುಗೊಳಿಸಿದ್ದಾರೆ.ಗ್ರಾಮ ಪಂಚಾಯಿತಿ ಸಿಬ್ಬಂದಿ ಕೆಲಸವನ್ನು ಖಂಡಿಸಿ ಗ್ರಾಮಸ್ಥರು ಕೂರಿಗೇಪಲ್ಲಿ - ಅಡ್ಡಗಲ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ಗೌನಿಪಲ್ಲಿ ಪೊಲೀಸರು ಹಾಗೂ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಬಳಿಕ ಪ್ರತಿಭಟನೆ ಕೈಬಿಡುವಂತೆ ಪ್ರತಿಭಟನಕಾರರನ್ನು ಸಮಾಧಾನಪಡಿಸಿದರು.

ಕೋಲಾರ ಲೋಕಸಭಾ ಕ್ಷೇತ್ರಕ್ಕೆ ಏಪ್ರಿಲ್ 26ರಂದು ಮತದಾನ ನಿಗದಿಯಾಗಿದ್ದು, ಮಾದರಿ ನೀತಿ ಸಂಹಿತೆ ಜಾರಿಯಾಗಿದೆ. ಅದರ ಪ್ರಕಾರ ಕಟೌಟ್, ಬ್ಯಾನರ್, ಫ್ಲೆಕ್ಸ್ ತೆರವುಗೊಳಿಸಲು ಚುನಾವಣಾ ಆಯೋಗ ಈಗಾಗಲೇ ಸೂಚನೆ ನೀಡಿದೆ.

ಕಸದತೊಟ್ಟಿಯಾದ ಪುತಿನ ಸಮಾಧಿ

ಸ್ಮಾರಕ ನಿರ್ಮಾಣಕ್ಕೆ ನಿರ್ಲಕ್ಷ್ಯ • ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ನವೋದಯ ಸಾಹಿತ್ಯ ತ್ರಿರತ್ನಗಳಲ್ಲಿ ಒಬ್ಬರಾದ ಪು.ತಿ. ನರಸಿಂಹಚಾರ್ ಅವರ ಸಮಾಧಿಯನ್ನು ಅವರ ಜನ್ಮದಿನವೇ ಕೆಡವಿ ಕಸದ ತೊಟ್ಟಿಮಾಡಿರುವ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುತಿನ ಅವರು 1998ರ ಅ.23ರಂದು ಮೃತಪಟ್ಟಿದ್ದರು. ಅಂತ್ಯಸಂಸ್ಕಾರ ಇಲ್ಲಿನ ಅರಣ್ಯ ಇಲಾಖೆ ಕಚೇರಿ ಮುಂದಿನ ಶಿಕ್ಷಣ ಇಲಾಖೆಗೆ ಸೇರಿದ ಜಾಗದಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತ್ತು. 26 ವರ್ಷಗಳು ಕಳೆದರೂ ಸಮಾಧಿಯನ್ನು ಸ್ಮಾರಕವಾಗಿ ಮಾಡಲು ನಿರ್ಲಕ್ಷ್ಯ ವಹಿಸಲಾಗಿದೆ. ಅದೀಗ ಕಸದತೊಟ್ಟಿಯಾಗಿ ಮಾರ್ಪಾಡಾಗಿದೆ.

ಭಾನುವಾರ ಪುತಿನ ಅವರ ಜನ್ಮದಿನದಂದೇ ಮೇಲುಕೋಟೆ ಗ್ರಾಮ ಪಂಚಾಯಿತಿಯಿಂದ ವೈರಮುಡಿ ಬ್ರಹ್ಮೋತ್ಸವ ನೆಪದಲ್ಲಿ ಜೆಸಿಬಿ ಮೂಲಕ ಸಮಾಧಿಯನ್ನು ಒಡೆದು, ಕಸವನ್ನು ತುಂಬಲಾಗಿದೆ. ಇದು ಸಾಹಿತಿಗೆ ಅಪಮಾನ ಎಸಗಿದಂತಾಗಿದೆ ಎಂದು ಅಭಿಮಾನಿಗಳು ದೂರಿದ್ದಾರೆ.



ಮೇಲುಕೋಟೆಯ ಅರಣ್ಯ ಇಲಾಖೆಯ ಜಾಗದಲ್ಲಿರುವ ಪುತಿನ ಸಮಾಧಿ

'ಅಧಿಕಾರಿಗಳ ನಡೆ ಸರಿಯಲ್ಲ'

'ಪುತಿನ ಅವರು ಬಿಎಂಶ್ರೀ, ಬೇಂದ್ರೆ, ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ ಅವರಂತಹ ಹಿರಿಯ ಕವಿಗಳ ಸಾಲಿನಲ್ಲಿ ನಿಲ್ಲುತ್ತಾರೆ. ಅವರ ಜನ್ಮದಿನದಂದು ಸಮಾಧಿಯನ್ನು ಕೆಡವಿ ಕಸ ತುಂಬಿಸಿದ ಅಧಿಕಾರಿಗಳ ನಡೆ ಸರಿಯಲ್ಲ' ಎಂದು ಕನ್ನಡ ಸಾಹಿತ್ಯ ಪರಿಷತ್ತು ಪಾಂಡವಪುರ ಘಟಕದ ಅಧ್ಯಕ್ಷ ಪ್ರಕಾಶ್ ಮೇನಾಗ್ರ ಹೇಳಿದರು.

ಸಮಾಧಿ ಬಳಿ ತಾತ್ಕಾಲಿಕ ಶೌಚಾಲಯ ನಿರ್ಮಿಸಲು ಮುಂದಾಗಿದ್ದ ಅಧಿಕಾರಿಗಳಿಗೆ ಹೆಚ್ಚುವರಿ ಜಿಲ್ಲಾಧಿಕಾರಿ, ಆ ಸ್ಥಳದಲ್ಲಿ ಶೌಚಾಲಯ ನಿರ್ಮಿಸದಂತೆ ತಾಕೀತು ಮಾಡಿದ್ದರು. ಶಿಕ್ಷಣ ಇಲಾಖೆಗೆ ಸೇರಿದ ಜಾಗವಾದ್ದರಿಂದ ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಸಮತಟ್ಟು ಮಾಡಿಸುವಾಗ ಸಮಾಧಿಗೆ ಹಾನಿಯಾಗಿದೆ.

'ಸರಿ ಮಾಡುತ್ತೇವೆ'

'ಜಾತ್ರೆ ಅಂಗವಾಗಿ ಸ್ವಚ್ಛತೆಗೆ ಹಾಗೂ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿತ್ತು. ಸಮಾಧಿಯ ಬಳಿ ಯಾವುದೇ ಘಟನೆ ನಡೆದಿಲ್ಲ. ಪುತಿನ ಅವರ ಸಮಾಧಿಯನ್ನು ಮೊದಲೇ ಯಾರೋ ಕೆಡವಿದ್ದರು. ಅದನ್ನು ಸರಿಪಡಿಸಲಾಗುವುದು' ಎಂದು ಮೇಲುಕೋಟೆ ಗ್ರಾಮ ಪಂಚಾಯಿತಿ ಪಿಡಿಒ ರಾಜೇಶ್ ಪ್ರತಿಕ್ರಿಯಿಸಿದರು.

ಪುತಿನ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಭವ್ಯವಾದ ಬಯಲು ರಂಗಮಂದಿರ ನಿರ್ಮಿಸಲಾಗಿದೆ. ಅವರು ವಾಸವಿದ್ದ ಮನೆಯನ್ನೂ ಜೀರ್ಣೋದ್ಧಾರ ಮಾಡಿ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಅವರ ಸಮಾಧಿ ಸ್ಥಳದ ಅಭಿವೃದ್ಧಿಗೆ ಕ್ರಮವಾಗಿಲ್ಲ. ಇದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ.

'ಕೇಂದ್ರದಿಂದ ಸಿಎಎ ದಾಳ'

ಪ್ರಜಾವಾಣಿ ವಾರ್ತೆ



ಮರಿಯಂ ಧವಳೆ

ಕಲಬುರಗಿ: 'ದೇಶದ ಜನರು ಆಕ್ರೋಶದಲ್ಲಿರುವುದನ್ನು ಅರಿತೇ ಕೇಂದ್ರ ಸರ್ಕಾರ ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ದಾಳ ಉರುಳಿಸಿದೆ. ಧರ್ಮದ ಆಧಾರದಲ್ಲಿ ಪೌರತ್ವ ನೀಡುವ ಈ ಕಾಯ್ದೆ ಸಂವಿಧಾನ ವಿರೋಧಿಯಾಗಿದೆ' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಟೀಕಿಸಿದರು.

ನಗರದಲ್ಲಿ ಜನವಾದಿ ಮಹಿಳಾ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಗಳು ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಈ ದೇಶದ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಎಲ್ಲರೂ ಸಮಾನ ನಾಗರಿಕರು. ಆದರೆ, ಅವರು ಭೇದ ಭಾವ ಮಾಡಿ, ಪರಸ್ಪರರ ನಡುವಣ ಒಗ್ಗಟ್ಟು ಮುರಿಯಲು ಬಯಸುತ್ತಿದ್ದಾರೆ. ಧರ್ಮ, ಜಾತಿ ಹೆಸರಲ್ಲಿ ಪೌರತ್ವ ನೀಡುವ ಕಾಯ್ದೆಯನ್ನು ನಾವು ವಿರೋಧಿಸಬೇಕಿದೆ' ಎಂದು ಪ್ರತಿಪಾದಿಸಿದರು.

'ಕೇಂದ್ರ ಸರ್ಕಾರ ಹಿಂದೂಗಳ ಹೆಸರು ಬಳಸಿ, ಧಾರ್ಮಿಕ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತಿದೆ. ಹಿಂದೂಗಳ ಹೆಸರಲ್ಲಿ ಎಲ್ಲಕ್ಕೂ ಹೆಚ್ಚು ಹಿಂದೂಗಳನ್ನೇ ಶೋಷಣೆ ಮಾಡುತ್ತಿದ್ದಾರೆ. ನರೇಗಾದಲ್ಲಿ ಕೆಲಸ ಮಾಡುವವರು, ಅಂಗನವಾಡಿಗಳಲ್ಲಿ ಕೆಲಸ ಮಾಡುವ ಸಹೋದರಿಯರು ಹಿಂದೂಗಳಲ್ಲವೇ? ಅವರ ವೇತನ ಹೆಚ್ಚಿಸಲಾಯಿತೇ? ಇಲ್ಲ. ಆದರೆ, ದೇಶ ಬಂಡವಾಳಶಾಹಿಗಳ ₹ 16 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಯಿತು' ಎಂದು ಆರೋಪಿಸಿದರು.

'ಮುಂಬರುವ ಚುನಾವಣೆಯಲ್ಲಿ ಕೋಮುವಾದಿಗಳನ್ನು ಸೋಲಿಸಬೇಕು. ಅಬ್ ಕಿ ಬಾರ್ ಚಾರ್‌ಸೌ ಸೀಟ್ ಪಾರ್ ಅಲ್ಲ; ಅಬ್ ಕೆ ಬಾರ್ ಅವರನ್ನು ತಡಿಪಾರ್ ಮಾಡಬೇಕು. ಈ ಸರ್ಕಾರವನ್ನು ಮಹಿಳೆಯರು ಸೋಲಿಸದಿದ್ದರೆ ಉಳಿಗಾಲವಿಲ್ಲ' ಎಂದರು.



ರಂಗೋಲಿಯಲ್ಲಿ ಮೂಡಿದ ಅಪ್ಪು..

ನಟ ಪುನೀತ್ ರಾಜಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಕಲಾವಿದರಾದ ಪುನೀತ್‌ಕುಮಾರ್, ಮಧುಸೂಧನ್, ಚಂದನಾ, ದೀಪಾ, ಪುನೀತ್ ರಾಯಣ್ಣ, ಮಂಜುನಾಥ್ ಅವರು ರಂಗೋಲಿಯಲ್ಲಿ 8ಸಾವಿರ ಚದರ ಅಡಿಯ ಚಿತ್ರವನ್ನು ಬಿಡಿಸಿದ್ದು ಭಾನುವಾರ ಗಮನಸೆಳೆಯಿತು – ಪ್ರಜಾವಾಣಿ ಚಿತ್ರ

ಹೊಸಬಾಳೆ ಪುನರಾಯ್ಕೆ

ಒಂದನೇ ಪುಟದಿಂದ

ಹೊಸಬಾಳೆ ಅವರು 2021ರಿಂದಲೂ ಸರಕಾರ್ಯವಾಹರಾಗಿ ಕಾರ್ಯನಿರ್ವಹಿಸುತ್ತಿದ್ದು, 2024ರಿಂದ 2027ರವರೆಗಿನ ಅವಧಿಗೆ ಮತ್ತೆ ಆಯ್ಕೆ ಮಾಡಲಾಗಿದೆ ಎಂದು ಆರ್‌ಎಸ್‌ಎಸ್ 'ಎಕ್ಸ್' ಮಾಧ್ಯಮದಲ್ಲಿ ಹೇಳಿದೆ.

ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅವರು, 1968ರಲ್ಲಿ ಆರ್‌ಎಸ್‌ಎಸ್ ಸೇರಿದ್ದರು. 1972ರಲ್ಲಿ ಎಬಿವಿಪಿಯಲ್ಲಿ ಸಕ್ರಿಯರಾಗಿದ್ದರು. 1978ರಲ್ಲಿ ಪ್ರಚಾರಕ್ ಆಗಿಯೂ ಕಾರ್ಯನಿರ್ವಹಿಸಿದ್ದರು.

2004ರಲ್ಲಿ ಆರ್‌ಎಸ್‌ಎಸ್‌ನ ಸಹ ಬೌದ್ಧಿಕ್ ಪ್ರಮುಖ್ ಆಗಿಯೂ ಜವಾಬ್ದಾರಿ ನಿಭಾಯಿಸಿದ್ದ ಹೊಸಬಾಳೆ ಅವರು, 'ಅಸೀಮಾ' ಕನ್ನಡ ಮಾಸಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಳ್ಳತನದ ಆರೋಪ: ಬಾಲಕಿ ಆತ್ಮಹತ್ಯೆ

ಬಾಗಲಕೋಟೆ: ಶಿಕ್ಷಕಿಯ ಪರ್ಸಿನಲ್ಲಿರುವ ಹಣ ಕದ್ದಿರುವ ಆರೋಪದ ಹಿನ್ನೆಲೆಯಲ್ಲಿ ಮನನೊಂದ ಬಾಲಕಿ ತಾಲ್ಲೂಕಿನ ಹಳೆ ಕದಾಂಪುರ ಗ್ರಾಮದಲ್ಲಿ ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಕದಾಂಪುರ ಪ್ರೌಢಶಾಲೆಯ 8ನೇ ತರಗತಿ ವಿದ್ಯಾರ್ಥಿ ದಿವ್ಯಾ ಬಾರಕೇರ (13) ಮೃತ ಬಾಲಕಿ.

'ಶಾಲೆಯ ಶಿಕ್ಷಕಿ ಜಯಶ್ರೀ ಮಿಶ್ರಿಕೋಟಿ ತಮ್ಮ ಪರ್ಸಿನಲ್ಲಿದ್ದ ಎರಡು ಸಾವಿರ ರೂಪಾಯಿಗಳನ್ನು ದಿವ್ಯಾ ಕದ್ದಿದ್ದಾಳೆ ಎಂಬ ಸಂಶಯದಿಂದ ಮುಖ್ಯಶಿಕ್ಷಕ ಮುಜಾವರ ಸೇರಿ ಎಲ್ಲ ಮಕ್ಕಳ ಎದುರೇ ದಿವ್ಯಾಳಿಗೆ ಹೆದರಿಸಿದ್ದಾರೆ. ಕದ್ದಿರುವುದನ್ನು ಒಪ್ಪದಿದ್ದರೆ ಟಿಸಿ (ವರ್ಗಾವಣೆ ಪ್ರಮಾಣಪತ್ರ) ಕೊಟ್ಟು ಕಳಿಸುವುದಾಗಿ ಅವಮಾನಿಸಿದ್ದಾರೆ. ಇದನ್ನು ಮನಸ್ಸಿಗೆ ಹಚ್ಚಿಕೊಂಡು ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನ್ನ ಮಗಳ ಸಾವಿಗೆ ಶಿಕ್ಷಕಿ ಹಾಗೂ ಮುಖ್ಯಶಿಕ್ಷಕ ಕಾರಣ' ಎಂದು ಬಾಲಕಿಯ ತಂದೆ ಶಿವಪ್ಪ ಬಾರಕೇರ ಗ್ರಾಮೀಣ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈಲ್ವೆ: ಅರ್ಜಿ ಆಹ್ವಾನ

ಬೆಂಗಳೂರು: ರೈಲ್ವೆ ಪ್ರೊಟೆಕ್ಷನ್ ಫೋರ್ಸ್ (ಆರ್‌ಪಿಎಫ್) ಮತ್ತು ರೈಲ್ವೆ ಪ್ರೊಟೆಕ್ಷನ್ ಸ್ಪೆಷಲ್ ಫೋರ್ಸ್‌ನಲ್ಲಿ (ಆರ್‌ಪಿಎಸ್‌ಎಫ್) ಸಬ್ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್‌ಗಳ ಹುದ್ದೆ ಭರ್ತಿ ಮಾಡಲು ರೈಲ್ವೆ ರಿಕ್ರೂಟ್‌ಮೆಂಟ್ ಬೋರ್ಡ್ (ಆರ್‌ಆರ್‌ಬಿ) ಅಧಿಸೂಚನೆ ಹೊರಡಿಸಿದೆ.

4,208 ಕಾನ್‌ಸ್ಟೆಬಲ್ ಮತ್ತು 452 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆರ್‌ಆರ್‌ಬಿ ಅಧಿಕೃತ ವೆಬ್‌ಸೈಟ್‌ನಲ್ಲಿ ಏಪ್ರಿಲ್ 15 ರಿಂದ ಮೇ 14ರವರೆಗೆ ಸಲ್ಲಿಸಬಹುದು. ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಅರ್ಜಿಸಲ್ಲಿಸುವವರು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. ಕಾನ್‌ಸ್ಟೆಬಲ್ ಹುದ್ದೆಗೆ ಅರ್ಜಿ ಸಲ್ಲಿಸಲು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ರೈಲ್ವೆ ನೇಮಕಾತಿ ಮಂಡಳಿ ಅಧಿಕೃತ ವೆಬ್‌ಸೈಟ್‌ಗೆ (https://www.rrbbnc.gov.in/) ಭೇಟಿ ನೀಡಬೇಕು ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಉತ್ತರ ಒಳನಾಡಿನಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ಉತ್ತರ ಒಳನಾಡಿನ ಕೆಲವೆಡೆ ಸೋಮವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಒಣ ಹವೆ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಇದೇ 19ರಿಂದ ಐದು ದಿನಗಳು ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಸಾಧಾರಣ, ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಇದೇ 20ರಂದು ಗುಡುಗು ಸಹಿತ ಸಾಧಾರಣ ಮಳೆ ಆಗಬಹುದು ಎಂದು ಇಲಾಖೆ ಹೇಳಿದೆ.

ಭಾನುವಾರ ಕೊಪ್ಪಳದಲ್ಲಿ ಗರಿಷ್ಠ ಉಷ್ಣಾಂಶ (39.5 ಡಿಗ್ರಿ ಸೆಲ್ಸಿಯಸ್) ಹಾಗೂ ಶಿವಮೊಗ್ಗದಲ್ಲಿ ಕನಿಷ್ಠ ಉಷ್ಣಾಂಶ (19 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ಪಾನಿಪೂರಿ ಸೇವಿಸಿ ಅಸ್ವಸ್ಥಗೊಂಡಿದ್ದ ಬಾಲಕ ಸಾವು

ಮಲೇಬೆನ್ನೂರು (ದಾವಣಗೆರೆ ಜಿಲ್ಲೆ): ಪಟ್ಟಣದಲ್ಲಿ ಈಚೆಗೆ ಬೀದಿಬದಿಯ ಅಂಗಡಿಯಲ್ಲಿನ ಪಾನಿಪೂರಿ ಸೇವಿಸಿ ಅಸ್ವಸ್ಥಗೊಂಡಿದ್ದ ಬಾಲಕ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾನೆ.

ಸ್ಥಳೀಯ ನೆಹರುನಗರ ಬಡಾವಣೆಯ ನಿವಾಸಿ ಇರ್ಫಾನ್ ಅವರ ಪುತ್ರ ಹಜರತ್ ಬಿಲಾಲ್ (6) ಮೃತ ಬಾಲಕ.

ಮಾರ್ಚ್ 13ರಂದು ಸಂಜೆ ರಂಜಾನ್ ಉಪವಾಸದ ನಂತರ ಜಾಮಿಯಾ ಮಸೀದಿ ಬಳಿ ಪಾನಿಪೂರಿ ಸೇವಿಸಿದ್ದ 19 ಮಕ್ಕಳು ಅಸ್ವಸ್ಥಗೊಂಡಿದ್ದರು. ಆ ಪೈಕಿ ಹಲವು ಮಕ್ಕಳು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದು, ಇನ್ನೂ ಕೆಲವು ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿ ನವಜಾತ ಶಿಶು ಮರಣ ಪ್ರಮಾಣ ಇಳಿಕೆ

ಒಂದನೇ ಪುಟದಿಂದ

ಅಪೌಷ್ಟಿಕತೆಯುಳ್ಳ ನವಜಾತ ಶಿಶುಗಳಿಗೆ ತೀವ್ರ ನಿಗಾ ಘಟಕದಲ್ಲಿ ನೀಡಲಾಗುವ ಚಿಕಿತ್ಸೆಯೊಡನೆ ಜಿಲ್ಲಾಮಟ್ಟದ 33 ಹಾಗೂ ತಾಲ್ಲೂಕು ಮಟ್ಟದ 86 ಸರ್ಕಾರಿ ಆಸ್ಪತ್ರೆಗಳಲ್ಲಿನ ಪೌಷ್ಟಿಕತೆ ಪುನಶ್ಚೇತನ ಸೇವೆಗಳನ್ನು ನೀಡಲಾಗುತ್ತಿದೆ. 'ಗರ್ಭಿಣಿಯರ ಮೇಲೆ ಆಶಾ, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ನಿಗಾವಹಿಸಿ, ಪೋಷಕಾಂಶಯುಕ್ತ ಆಹಾರ, ಮಾತ್ರೆ ಪೂರೈಸಲಾಗುತ್ತಿದೆ. ಇದರಿಂದ ತಾಯಿ ಮತ್ತು ಶಿಶುವಿನ ಸಾವಿನ ಪ್ರಕರಣಗಳು ಕಡಿಮೆಯಾಗುತ್ತಿವೆ' ಎನ್ನುತ್ತಾರೆ ಧಾರವಾಡ ಜಿಲ್ಲಾ ಆರೋಗ್ಯಾಧಿಕಾರಿ ಶಶಿ ಪಾಟೀಲ.

ಬಿಜೆಪಿಗೆ ₹6,987 ಕೋಟಿ ದೇಣಿಗೆ: ಆಯೋಗ

ಒಂದನೇ ಪುಟದಿಂದ

ಚುನಾವಣಾ ಆಯೋಗ ಈ ಹಿಂದೆ ಬಿಡುಗಡೆಗೊಳಿಸಿದ್ದ ಪಟ್ಟಿಯಲ್ಲಿ ಯಾವ ಪಕ್ಷಗಳಿಗೆ ಯಾರು ದೇಣಿಗೆ ನೀಡಿದ್ದಾರೆ ಎಂಬ ವಿವರ ಇರಲಿಲ್ಲ. ಈಗ ಹಂಚಿಕೊಂಡಿರುವ ಮಾಹಿತಿಯಲ್ಲಿ ಕೆಲವು ಪಕ್ಷಗಳು ಯಾರಿಂದ ದೇಣಿಗೆ ಪಡೆದಿವೆ ಎಂಬ ವಿವರಗಳಿವೆ.

ಬಿಜೆಪಿಗೆ ಸಿಂಹಪಾಲು: ಬಿಜೆಪಿಯು ಚುನಾವಣಾ ಬಾಂಡ್ ಮೂಲಕ ಅತಿಹೆಚ್ಚು ದೇಣಿಗೆ ಪಡೆದಿದೆ. 2019-20ರ ಅವಧಿಯೊಂದರಲ್ಲೇ ಪಕ್ಷಕ್ಕೆ ದೇಣಿಗೆ ರೂಪದಲ್ಲಿ ₹2,555 ಕೋಟಿ ಹರಿದುಬಂದಿದೆ. 2023ರ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಬಿಜೆಪಿಗೆ ₹421.27 ಕೋಟಿ ದೇಣಿಗೆ ದೊರೆತಿದೆ.

ಬಾಂಡ್ ಯೋಜನೆ ಜಾರಿಯಲ್ಲಿದ್ದ ಒಟ್ಟು ಅವಧಿಯಲ್ಲಿ (ಮಾರ್ಚ್ 2018ರಿಂದ ಜನವರಿ 2024) ಬಿಜೆಪಿ ಒಟ್ಟು ₹7,800 ಕೋಟಿ ದೇಣಿಗೆ ಪಡೆದಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಇತ್ತೀಚೆಗೆ ಪ್ರಕಟಿಸಿದ ವರದಿಯಲ್ಲಿ ಹೇಳಿತ್ತು.

ಬಿಜೆಪಿ ಬಳಿಕ ಎರಡನೇ ಅತಿಹೆಚ್ಚು ದೇಣಿಗೆಯನ್ನು (₹1,396.94 ಕೋಟಿ) ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಡೆದಿದೆ. ಕಾಂಗ್ರೆಸ್ ಪಕ್ಷ (₹1,334.36) ಮೂರನೇ ಸ್ಥಾನದಲ್ಲಿದೆ.

ಮರುಬಳಕೆ ರಾಕೆಟ್ ಪ್ರಯೋಗಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ): ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ದೇಶಿಯ ತಂತ್ರಜ್ಞಾನ ಬಳಸಿ ತಯಾರಿಸಿರುವ ಮರುಬಳಕೆ ಉಡಾವಣಾ ವಾಹನವು (ಆರ್‌ಎಲ್‌ವಿ) ಸ್ವಾಯತ್ತವಾಗಿ ನೆಲೆ ಕಂಡುಕೊಳ್ಳುವ (ಲೆಕ್ಸ್) ವಿಶೇಷ ಪರೀಕ್ಷಾರ್ಥ ಹಾರಾಟಕ್ಕೆ ಸಮೀಪದ ಡಿಆರ್‌ಡಿಒ ವಾಯುನೆಲೆ ಶೀಘ್ರದಲ್ಲೇ ಸಾಕ್ಷಿಯಾಗಲಿದೆ.

ಮರುಬಳಕೆ ರಾಕೆಟ್ ಪರಿಕಲ್ಪನೆ: ಇಸ್ರೊ ಸೇರಿದಂತೆ ವಿಶ್ವದ ಹಲವು ಬಾಹ್ಯಕಾಶ ಸಂಸ್ಥೆಗಳು ನಭಕ್ಕೆ ಉಪಗ್ರಹಗಳನ್ನು ಕಳುಹಿಸುವಾಗ ಪ್ರತಿ ಬಾರಿಯೂ ಹೊಸ ಉಡಾವಣಾ ರಾಕೆಟ್ ಬಳಸಬೇಕಿದೆ. ಉಪಗ್ರಹವನ್ನು ನಭಕ್ಕೆ ಸೇರಿಸಿದ ಬಳಿಕ ರಾಕೆಟ್ ಅಲ್ಲಿಯೇ ಉರಿದು ನಾಶವಾಗುತ್ತಿತ್ತು. ಇದರಿಂದ ಕೋಟ್ಯಂತರ ಹಣ ನಷ್ಟವಾಗುತಿತ್ತು. ಈ ನಷ್ಟ ತಡೆಯುವ ಉದ್ದೇಶದಿಂದ ಮರುಬಳಕೆ ವಾಹನ (ಆರ್‌ಎಲ್‌ವಿ)ದ ಪರಿಕಲ್ಪನೆಯನ್ನು ದೇಶಿ ತಂತ್ರಜ್ಞಾನದ ಮೂಲಕ ಇಸ್ರೊ ಆವಿಷ್ಕರಿಸಿದೆ.

ಭಾರತೀಯ ವಾಯುಪಡೆ, ಡಿಆರ್‌ಡಿಒ, ಶಸ್ತ್ರಾಸ್ತ್ರಗಳ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ಎಆರ್‌ಡಿಇ), ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ), ಸೆಮಿಲ್ಯಾಕ್ ಸಂಸ್ಥೆಗಳು ತಂತ್ರಜ್ಞಾನ ಮತ್ತು ಸಾಧನಗಳನ್ನು ಪೂರೈಸುವ ಹೊಣೆ ಹೊತ್ತಿವೆ.

ಮರುಬಳಕೆ ವಾಹನ ಲ್ಯಾಂಡಿಂಗ್ ಪ್ರಕ್ರಿಯೆ?: ಚಳ್ಳಕೆರೆ ಸಮೀಪದ ಡಿಆರ್‌ಡಿಒ ಏರೋನಾಟಿಕಲ್ ಟೆಸ್ಟ್ ರೇಂಜ್‌-2ರ ಸುಸಜ್ಜಿತವಾದ ವಾಯುನೆಲೆಯಲ್ಲಿ ನಡೆಯುತ್ತಿರುವ ಈ ಪರೀಕ್ಷಾರ್ಥ ಪ್ರಯೋಗದಲ್ಲಿ ಭಾರತೀಯ ವಾಯುಪಡೆಯ ಚಿನೂಕ್ ಯುದ್ಧ ಹೆಲಿಕಾಪ್ಟರ್ ಪ್ರಮುಖ ಪಾತ್ರ ವಹಿಸುತ್ತಿದೆ. ಕಾಪ್ಟರ್‌ನ ಕೆಳಭಾಗಕ್ಕೆ ಮರುಬಳಕೆ ಆರ್‌ಎಲ್‌ವಿ ರಾಕೆಟ್ ಅನ್ನು ಕಟ್ಟಿ, ಅಂದಾಜು 4.5 ಕಿ.ಮೀ ಎತ್ತರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಂದ ಪರೀಕ್ಷಾರ್ಥ ರಾಕೆಟ್ ಅನ್ನು ಬಿಡುಗಡೆ ಮಾಡಲಾಗುತ್ತದೆ.

ನಂತರ ರಾಕೆಟ್‌ನ ಎಂಜಿನ್ ಪೂರ್ವ ನಿಗದಿಯಂತೆ ಸ್ವಯಂಆಗಿ ಚಾಲನೆಗೊಂಡು ಗಾಳಿಯ ವೇಗ, ತಾಪಮಾನ ಸೇರಿದಂತೆ ಎಲ್ಲ ಒತ್ತಡಗಳನ್ನು ಸಹಿಸಿಕೊಂಡು ಭೂಮಿಯ ಕಡೆಗೆ ವೇಗವಾಗಿ ಹಿಂದಿರುಗುತ್ತದೆ. ಇಸ್ರೊ ವಿಜ್ಞಾನಿಗಳು ನೀಡುವ ಎಲ್ಲ ಗಣಕೀಕೃತ ಕಮಾಂಡ್‌ಗಳನ್ನು ರಾಕೆಟ್ ಪಾಲಿಸುತ್ತ, ಗೊತ್ತುಪಡಿಸಿದ ವಾಯುನೆಲೆಗೆ ಇಳಿಯಲು ಸಜ್ಜಾಗುತ್ತದೆ. ರಾಕೆಟ್ ಹಿಂಬದಿಯಲ್ಲಿ ಅಳವಡಿಸಿರುವ ಪ್ಯಾರಚ್ಯೂಟ್‌ನ ಸಹಾಯದಿಂದ ಅದು ತನ್ನ ವೇಗವನ್ನು ಗಂಟೆಗೆ 350ಕಿ.ಮೀ.ಗೆ ತಗ್ಗಿಸಿಕೊಂಡು, ಸುರಕ್ಷಿತವಾಗಿ ಭೂಸ್ಪರ್ಶ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಮುಂದಿನವಾರ ನಡೆಯುವ ಮಹತ್ವದ ಹಾರಾಟದಲ್ಲಿ ರಾಕೆಟ್ ಅನ್ನು ರನ್‌ವೇಯ ಆಚೆ-ಈಚೆಗೂ ಭೂಸ್ಪರ್ಶ ಮಾಡಿಸಿ, ನಂತರ ರನ್‌ವೇಯ ಮಧ್ಯಭಾಗಕ್ಕೆ ಕರೆತರುವ ಪರೀಕ್ಷೆ ನಡೆಸಲಾಗುತ್ತದೆ. ಇದು ಯಶಸ್ವಿಯಾದರೆ ಚಂದ್ರಯಾನ-3ರಲ್ಲಿ ಇದೇ ತಂತ್ರಜ್ಞಾನ ಹೊಂದಿರುವ ಉಡಾವಣಾ ರಾಕೆಟ್ ಬಳಸಲು ಇಸ್ರೊ ಚಿಂತನೆ ನಡೆಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಸ್.ಸೋಮನಾಥ್ ಹೇಳುತ್ತಾರೆ. ಕಳೆದ ಒಂದು ವಾರದಿಂದ ಡಿಆರ್‌ಡಿಒ ವಾಯುನೆಲೆಯಲ್ಲಿ ಮೂರು ಬಾರಿ ಚಿನೂಕ್ ಹೆಲಿಕಾಪ್ಟರ್ ಉಡಾವಣಾ ರಾಕೆಟ್ ಅನ್ನು ಹೊತ್ತು ಪರಿಕ್ಷಾರ್ಥ ಹಾರಾಟದ ತಾಲೀಮು ನಡೆಸುತ್ತಿದೆ.

ಎಐಸಿಸಿ ವಕ್ತಾರ ಸಂಕೇತ ಏಣಗಿ ರಾಜೀನಾಮೆ

ಧಾರವಾಡ: ಎಐಸಿಸಿ ವಕ್ತಾರ ಸಂಕೇತ ಎಂ. ಏಣಗಿ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ಪತ್ರವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ರವಾನಿಸಿದ್ದಾರೆ.

'ಪಕ್ಷದ ಗೆಲುವಿಗೆ ಕಾರಣರಾದ ಕಾರ್ಯಕರ್ತರನ್ನು ಕಡೆಗಣಿಸಲಾಗಿದೆ. ಪಕ್ಷ ಅಧಿಕಾರಕ್ಕೆ ಏರಿದ ನಂತರ ನನ್ನಂಥ ಸಹಸ್ರಾರು ಕಾರ್ಯಕರ್ತರನ್ನು ಪರಿಗಣಿಸದಿರುವುದು ನೋವುಂಟು ಮಾಡಿದೆ. ವೀರಶೈವ ಲಿಂಗಾಯತನಾಗಿದ್ದಕ್ಕೆ ನನ್ನನ್ನು ಬಲಿಪಶು ಮಾಡಲಾಗಿದೆ. ನಾಯಕರ ನಡೆಯಿಂದ ಬೇಸತ್ತು ರಾಜೀನಾಮೆ ನೀಡಿದ್ದೇನೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಸಂಧಾನಕ್ಕೆ ಬಗ್ಗದ ಕೆ.ಎಸ್. ಈಶ್ವರಪ್ಪ

ಒಂದನೇ ಪುಟದಿಂದ

ಅಲ್ಲದೆ, ನಿಯೋಗವು ಮಾತುಕತೆ ನಡೆಸುತ್ತಿರುವಾಗಲೇ ಬೇರೆ ಕಾರ್ಯಕ್ರಮದ ಕಾರಣ ನೀಡಿ ಅವರು ಸಭೆಯಿಂದ ಹೊರನಡೆದರು. ಸಂಧಾನಕಾರರು ಕಾಯುತ್ತ ಕುಳಿತರೂ ತಮ್ಮ ನಿವಾಸಕ್ಕೆ ಬಹಳ ಹೊತ್ತು ಮರಳಲಿಲ್ಲ.

'ಪ್ರಧಾನಿ ಮೋದಿ ನನ್ನ ದೇವರು. ಪ್ರಾಣ ಹೋದರೂ ಅವರ ಹೆಸರು ಹೇಳುವುದನ್ನು ಬಿಡುವುದಿಲ್ಲ. ಆದರೆ, ಕುಟುಂಬವೊಂದರ (ಯಡಿಯೂರಪ್ಪ) ಕಪಿಮುಷ್ಟಿಯಿಂದ ಪಕ್ಷವನ್ನು ಬಿಡುಗಡೆಗೊಳಿಸಬೇಕು ಎನ್ನುವ ಉದ್ದೇಶದಿಂದ ಲೋಕಸಭಾ ಚುನಾವಣೆಗೆ ಪಕ್ಷೇತರನಾಗಿ ಸ್ಪರ್ಧಿಸುತ್ತಿದ್ದೇನೆ. ಗೆದ್ದ ಬಳಿಕ ಮೋದಿ ಬಳಿ ಹೋಗುವೆ. ಮೋದಿ ಅವರ ಸಮಾವೇಶದಲ್ಲಿ ಭಾಗವಹಿಸದಿರುವ ಬಗ್ಗೆ ದುಃಖವಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಯಡಿಯೂರಪ್ಪ ಹಾಗೂ ಅವರ ಪುತ್ರರ ಕೈಯಲ್ಲಿ ಪಕ್ಷ ನಲುಗುತ್ತಿದೆ. ಲಿಂಗಾಯತರೆಲ್ಲರೂ ಯಡಿಯೂರಪ್ಪನವರ ಕೈಯಲ್ಲಿದ್ದಾರೆಂಬ ಭ್ರಮೆಯಲ್ಲಿ ಕೇಂದ್ರದ ನಾಯಕರಿದ್ದಾರೆ. ರಾಜ್ಯದಲ್ಲಿ ಯಡಿಯೂರಪ್ಪ ಹಾಗೂ ಅವರ ಪುತ್ರ ವಿಜಯೇಂದ್ರ ಅವರದೇ ರಾಜ್ಯಭಾರವಾಗಿದೆ. ನೊಂದ ಕಾರ್ಯಕರ್ತರು ಇವರಿಂದ ನಲುಗಿ ಹೋಗಿದ್ದಾರೆ' ಎಂದರು.

ಸಂಧಾನ ವಿಫಲ: ಮಧ್ಯಾಹ್ನ 12ಕ್ಕೆ ಈಶ್ವರಪ್ಪ ಅವರ ಮನವೊಲಿಸಲು ಸಭೆ ನಡೆಸಲಾಯಿತು. ಈಶ್ವರಪ್ಪ ಅವರು ಸಭೆಯ ಮಧ್ಯೆ ಹೊರನಡೆದರೂ ಕಾದು ಕುಳಿತ ನಿಯೋಗ ಕಡೆಗೆ ಸಂಧಾನ ಫಲಿಸದೇ ಮರಳಿತು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಮೋಹನ್ ಅಗರ್‌ವಾಲ್, 'ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಪ್ರವಾಸ ಕೈಗೊಂಡಿರುವೆ. ಸ್ಪರ್ಧಿಸುವುದು ಬೇಡ ಎಂದು ಈಶ್ವರಪ್ಪ ಅವರನ್ನು ಕೋರಲಾಯಿತು. ಅವರ ಕುಟುಂಬ ಸದಸ್ಯರೊಂದಿಗೂ ಈ ಬಗ್ಗೆ ಚರ್ಚಿಸಲಾಗಿದ್ದು, ಕಾದು ನೋಡಬೇಕಿದೆ' ಎಂದರು.

'ಈಶ್ವರಪ್ಪ ಅವರ ಜೊತೆಯಲ್ಲಿ ಆಡಿ ಬೆಳೆದಿದ್ದೇವೆ. ಪುತ್ರನಿಗೆ ಟಿಕೆಟ್ ಕೈತಪ್ಪಿದ್ದಕ್ಕೆ ಅವರಿಗೆ ಆಘಾತವಾಗಿದೆ. ಯಾವುದೇ ಕಾರಣಕ್ಕೂ ಸಂಘಟನೆಯಿಂದ ವಿಮುಖವಾಗದಂತೆ ಮನವರಿಕೆ ಮಾಡಲಾಗಿದೆ' ಎಂದು ಶಾಸಕ ಆರಗ ಜ್ಞಾನೇಂದ್ರ ತಿಳಿಸಿದರು.

ಬಿಜೆಪಿ ಕಟ್ಟುವಲ್ಲಿ ಈಶ್ವರಪ್ಪ ಕೊಡುಗೆ ಅಪಾರ. ಆದ್ದರಿಂದ, ಅವರ ಜೊತೆ ಚರ್ಚಿಸಿ ಮೋದಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಕಾರ್ಯಕ್ರಮಕ್ಕೆ ಬರುವ ನಿರೀಕ್ಷೆ ಹೆಚ್ಚಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

> ಯಡಿಯೂರಪ್ಪ ಅವರು ಸಂಧಾನಕ್ಕಾಗಿ ನಿಯೋಗ ಕಳುಹಿಸಿದ್ದರು. ನಾನು ಒಪ್ಪಿಲ್ಲ. ನನ್ನ ಪುತ್ರನಿಗೆ ಟಿಕೆಟ್ ತಪ್ಪಿಸಿದ್ದು ಮಾತ್ರವಲ್ಲ, ನನಗೆ ಯಡಿಯೂರಪ್ಪ ಕುಟುಂಬ ಮೋಸ ಮಾಡಿದೆ
> **ಕೆ.ಎಸ್. ಈಶ್ವರಪ್ಪ,** ಮಾಜಿ ಉಪಮುಖ್ಯಮಂತ್ರಿ

ಪಟ್ಟು ಬದಲಿಸದ ರೇಣುಕಾಚಾರ್ಯ

ಒಂದನೇ ಪುಟದಿಂದ

'ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಸೋಲಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಕಾರಣ. ನಾವು ಅವರಿಗೆ ಬೆಂಬಲ ನೀಡುವುದಿಲ್ಲ. ಬಂಡಾಯ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಮೂರು ದಿನಗಳ ಬಳಿಕ ಸಭೆ ಸೇರಿ ನಿರ್ಧರಿಸಲಾಗುವುದು' ಎಂದು ಹೇಳಿದರು.

ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಎಂ.ಪಿ. ರೇಣುಕಾಚಾರ್ಯ, ಜಿ.ಕರುಣಾಕರ ರೆಡ್ಡಿ, ಬಿ.ಜಿ. ಅಜಯ್‌ಕುಮಾರ್, ಲೋಕಿಕೆರೆ ನಾಗರಾಜ್, ಮಾಡಾಳ್ ಮಲ್ಲಿಕಾರ್ಜುನ, ಮಾಜಿ ಶಾಸಕ ಬಸವರಾಜ ನಾಯ್ಕ, ಡಾ.ಟಿ.ಜಿ. ರವಿಕುಮಾರ್ ಸಭೆಯಲ್ಲಿದ್ದರು.



ಪರೀಕ್ಷಾ ಭಯದಿಂದ ಪಾರಾಗಿ

ಸುಭಾಷ್ ಎಚ್.ಜೆ

ಮಾರ್ಚ್ ಎಂದರೆ ಪರೀಕ್ಷೆಯ ಭಯ ನೆನಪಾಗುತ್ತದೆ. ಸೂಕ್ತ ಮಾರ್ಗದರ್ಶನ, ಸಿದ್ಧತೆ ಹಾಗೂ ಪರೀಕ್ಷೆಯನ್ನು ಸಮರ್ಪಕವಾಗಿ ಎದುರಿಸುವ ಧೈರ್ಯವಿದ್ದರೆ ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯವಿದೆ. ಪರೀಕ್ಷೆ ಬರೆಯಲು ಬೇಕಿರುವುದು ಜಾಣ ತಯಾರಿ.

ಓದಿದ್ದು ಮರೆತು ಹೋಗುತ್ತಾ?

'ಒಮ್ಮೆ ಓದಿದ್ದನ್ನು ನೆನಪಿಟ್ಟುಕೊಳ್ಳಲು ಏನಾದರೂ ಉಪಾಯವಿದೆಯೇ?' ಇದು ಬಹುತೇಕ ಮಕ್ಕಳು ಹಾಗೂ ಪೋಷಕರ ಪ್ರಶ್ನೆ. ಪ್ರಯತ್ನವಿಲ್ಲದೇ, ನಿರಾಯಾಸವಾಗಿ ಓದಿದ್ದನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಮತ್ತೆ ಮತ್ತೆ ಓದುವುದು, ಅದನ್ನು ಪುನರಾವರ್ತನೆ ಮಾಡಿಕೊಳ್ಳುವುದು, ನೆನಪಿಗೆ ಬಾರದೆ ಇರುವ ಸಂಗತಿಯನ್ನು ಮತ್ತೊಮ್ಮೆ ಓದುವುದು ಇವೇ ಅದಕ್ಕಿರುವ ಪರ್ಯಾಯ ಉಪಾಯಗಳು. ಆದರೆ, ಪರೀಕ್ಷೆ ಸಮಯದಲ್ಲಿ ಓದಿದ್ದನ್ನು ಮರೆಯುವುದಕ್ಕೆ ಮುಖ್ಯ ಕಾರಣ ಪರೀಕ್ಷೆಯ ಒತ್ತಡ ಮತ್ತು ಅದರೆಡಗಿನ ಭಯ. ಜತೆಗೆ ವಿಷಯವನ್ನು ಅರ್ಥಮಾಡಿಕೊಳ್ಳದೇ ಕಂಠಪಾಠ ಮಾಡುವುದು.

ಹೀಗೆ ಮಾಡಿ: ಓದಿದ ವಿಷಯವನ್ನು ನಿಮ್ಮದೇ ಪದಗಳಲ್ಲಿ ಬರೆದಿಡಿ. ಕಲಿತಿದ್ದನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಿ. ಇದರಿಂದ ಜ್ಞಾಪಕಶಕ್ತಿ ವೃದ್ಧಿಸುತ್ತದೆ. ಒಂದು ಚಿತ್ರವು ಸಾವಿರ ಶಬ್ದಗಳಿಗೆ ಸಮ. ಕಲಿತ ವಿಷಯಗಳನ್ನು ಚಿತ್ರ, ನಕ್ಷೆಗಳ ಮೂಲಕ ಸಾರಾಂಶವನ್ನು ರೂಪಿಸಿ. ಇದರಿಂದ ನೆನಪಿಟ್ಟುಕೊಳ್ಳುವುದು ಮತ್ತಷ್ಟು ಸುಲಭವಾಗುತ್ತದೆ. ಇದಕ್ಕೆ 'ಮೈಂಡ್ ಮ್ಯಾಪ್' ಎಂದು ಕರೆಯುತ್ತಾರೆ.

ಫ್ಲ್ಯಾಶ್‌ಕಾರ್ಡ್ಸ್‌ನ ನೆರವು: ಒಂದು ಪಾಠವನ್ನು ಓದಿದ ನಂತರ ಅಂಚೆ ಚೀಟಿಯಷ್ಟು ಪುಟ್ಟ ಕಾಗದ ಅಥವಾ ಕಾರ್ಡ್‌ನ ಮೇಲೆ, ಇಡೀ ಪಾಠದ ಸಾರಾಂಶವನ್ನು ತಿಳಿಸುವಂಥ ಮುಖ್ಯ ವಿಷಯಗಳನ್ನು ಕಡಿಮೆ ಪದಗಳಲ್ಲಿ ಬರೆದಿಡಿ. ಇದಕ್ಕೆ 'ಫ್ಲ್ಯಾಶ್ ಕಾರ್ಡ್ಸ್' ಎನ್ನುತ್ತಾರೆ. ಉದಾಹರಣೆಗೆ, ಇತಿಹಾಸ ವಿಷಯದ ಯಾವುದಾದರೊಂದು ಪಾಠದ 'ಫ್ಲ್ಯಾಶ್ ಕಾರ್ಡ್'ಸಿದ್ಧಪಡಿಸಿದರೆ, ಅದರಲ್ಲಿ ಬರುವ ಮುಖ್ಯ ಹೆಸರುಗಳು, ಘಟನೆಗಳು, ಸೇವೆಗಳು, ಕಾಲಮಾನ ಇತ್ಯಾದಿಯನ್ನು ಕಡಿಮೆ ಪದ ಅಥವಾ ಅಕ್ಷರಗಳಲ್ಲಿ (ಆಕ್ರೋನಿಂ) ಬರೆದಿಡಿ. ಪರೀಕ್ಷೆಯ ಹಿಂದಿನ ದಿನ ಕಡಿಮೆ ಸಮಯದಲ್ಲಿ ಮೆಲುಕು ಹಾಕಲು ಈ ಕಾರ್ಡ್‌ಗಳನ್ನು ಬಳಸಿ.

ಒಂದೇ ವಿಚಾರವನ್ನು ಹಲವು ಪುಸ್ತಕಗಳ ಮೂಲಕ ತಿಳಿದು, ವಿವಿಧ ದೃಷ್ಟಿಕೋನದಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೆ ಹೆಚ್ಚು ಗಮನಕೊಡಿ. ಹೀಗೆ ಮಾಡುವುದರಿಂದ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ. ಅರ್ಥವಾದ ವಿಷಯ ಸದಾ ನೆನಪಿನಲ್ಲಿ ಉಳಿಯುತ್ತದೆ. ಉದಾಹರಣೆಗೆ ಅರ್ಥವಾಗದ ಯಾವುದೋ ವಿದೇಶಿ ಭಾಷೆಯ ಹಾಡನ್ನು ಕಲಿಯಲು ತೆಗೆದುಕೊಳ್ಳುವ ಸಮಯಕ್ಕೆ ಹೋಲಿಸಿದರೆ ಅರ್ಥವಾಗುವ ಮಾತೃಭಾಷೆಯ ಹಾಡನ್ನು ಕಲಿಯಲು ತೆಗೆದುಕೊಳ್ಳುವ ಸಮಯ ತುಂಬಾ ಕಡಿಮೆ ಇರುತ್ತದೆ.

ನಕಾರಾತ್ಮಕ ಆಲೋಚನೆ ಬೇಡ

ಪರೀಕ್ಷೆ ಕುರಿತ ನಕಾರಾತ್ಮಕ ಆಲೋಚನೆಗಳನ್ನು ಬರೆದಿಡಿ

> ಪರೀಕ್ಷೆಯ ಕುರಿತ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟುಬಿಡಿ. ಓದುವುದು ಮತ್ತು ಬರೆಯುವುದು ಪ್ರೀತಿಯ ಕಾಯಕವಾದರೆ ಪರೀಕ್ಷೆಯ ಕುರಿತ ಭಯ ತನ್ನಿಂತಾನೆ ಮಾಯವಾಗುತ್ತದೆ. ಹಾಗೆ ಮಾಡಲು ಒಮ್ಮೆ ಪ್ರಯತ್ನಿಸಿ ನೋಡಿ.

(ಉದಾಹರಣೆಗೆ ಫೇಲಾದರೆ ನಮ್ಮ ಮನೆಯಲ್ಲಿ ಹೊಡೆಯುತ್ತಾರೆ) ಅದರ ಬದಲು ಸಕಾರಾತ್ಮಕ ಆಲೋಚನೆಗಳನ್ನು ತುಂಬಿಕೊಳ್ಳಿ (ಉದಾ: ನಾನು ಈ ಬಾರಿ ಒಳ್ಳೆಯ ತಯಾರಿ ನಡೆಸಿದ್ದೇನೆ, ಈ ಬಾರಿ ಖಂಡಿತವಾಗಿ ಉತ್ತೀರ್ಣನಾಗುತ್ತೇನೆ). ಪರೀಕ್ಷೆಯ ದಿನ, ಕೊನೆಯ ಕ್ಷಣದಲ್ಲಿ ಹೊಸ ವಿಚಾರಗಳನ್ನು ಕಲಿಯುವುದು ಬೇಡ. ಪರೀಕ್ಷೆಗೂ ಮುಂಚೆಯೇ ಸಾಕಷ್ಟು ಓದಿ, ಪರೀಕ್ಷೆಯ ದಿನ ಕೇವಲ ಅದರ ಪುನರಾವರ್ತನೆ ನಡೆಸಿ. ಪರೀಕ್ಷೆಯ ಹಿಂದಿನ ದಿನವೇ ಹಾಲ್ ಟಿಕೆಟ್, ಪೆನ್ನು ಅವಶ್ಯಕ ವಸ್ತುಗಳನ್ನು ಜೋಡಿಸಿಕೊಳ್ಳಿ.

ಪರೀಕ್ಷೆಗೂ ಮುನ್ನ ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ. ಎಷ್ಟರ ಮಟ್ಟಿಗೆ ಅಭ್ಯಾಸ ನಡೆಸಿದ್ದೀರಿ ಎಂಬುದನ್ನು ಅರಿಯಿರಿ. ಇದು ನಿಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ಸರಿಯಾಗಿ ತಿಳಿದಿರುವ ಪ್ರಶ್ನೆಗೆ ಮೊದಲು ಉತ್ತರವನ್ನು ಬರೆಯಿರಿ. ಪರೀಕ್ಷೆ ಬರೆಯುವಾಗ ಸಮಾಧಾನದಿಂದಿರಿ. ಯಾವುದೇ ಪ್ರಶ್ನೆಗೆ ಉತ್ತರ ತಿಳಿಯದಿದ್ದರೆ ಗಾಬರಿಯಾಗಬೇಡಿ. ದೊಡ್ಡ ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಅರೆಕ್ಷಣ ಉತ್ತರವನ್ನು ಮನದಲ್ಲಿ ನೆನಪಿಸಿಕೊಂಡ ನಂತರ ಬರೆಯಲು ಶುರು ಮಾಡಿ.

ಪರೀಕ್ಷೆಯ ನಂತರ ಪ್ರಶ್ನೆ ಪತ್ರಿಕೆಯನ್ನು ಸ್ನೇಹಿತರೊಂದಿಗೆ ಚರ್ಚಿಸುವುದರಿಂದ ಆತಂಕ ಉಂಟಾಗಬಹುದು. ಮುಗಿದು ಹೋದ ವಿಷಯದ ಬಗ್ಗೆ ಚಿಂತಿಸಬೇಡಿ. ಬದಲಾಗಿ ಮರುದಿನ ಇರುವ ಪರೀಕ್ಷೆಗೆ ತಯಾರಿ ನಡೆಸಿ. ಪರೀಕ್ಷೆಯ ಬಗ್ಗೆ ಗಮನ ಕೊಡಿ, ಫಲಿತಾಂಶದ ಕಡೆ ಅಲ್ಲ.

ಪರೀಕ್ಷಾ ಸಮಯದಲ್ಲಿ ಉತ್ತಮ ಆಹಾರ, ಏಳರಿಂದ ಎಂಟು ಗಂಟೆಯ ಕಾಲ ನಿದ್ರೆ, ಧ್ಯಾನ, ವ್ಯಾಯಾಮ ಮಾಡುವುದನ್ನು ಮರೆಯಬೇಡಿ. ಓದುವ ಜಾಗದಲ್ಲಿ ಊಟ, ನಿದ್ರೆ, ಮೊಬೈಲ್ ಬಳಸುವುದನ್ನು ಮಾಡಬೇಡಿ.

ಓದಲು ಮನಸ್ಸು ಬರುತ್ತಿಲ್ಲವೇ?

ಓದಲು ನಿಗದಿತ ಸಮಯವನ್ನು ಮತ್ತು ಸ್ಥಳವನ್ನು ಆಯ್ಕೆ ಮಾಡಿಕೊಳ್ಳಿ. ಏಕಾಗ್ರತೆಗೆ ಭಂಗ ತರುವ ಟಿ.ವಿ, ಮೊಬೈಲ್, ಮನೆಯ ಇತರೆ ಸದಸ್ಯರ ಸಂಪರ್ಕದಿಂದ ದೂರವಿರಿ. ಒಂದೇ ದಿನ ಹತ್ತು ಗಂಟೆ ಓದುತ್ತೇನೆ ಎಂಬ ಸಾಹಸ ಮಾಡಬೇಡಿ. ಮೊದಲ ದಿನ ಕೆಲ ಹೊತ್ತು ಅಭ್ಯಾಸ ಮಾಡಿ. ಕ್ರಮೇಣ ಓದಿನ ಸಮಯವನ್ನು ಹೆಚ್ಚಿಸಿಕೊಳ್ಳಿ.

ಮೊದಲಿಗೆ ಓದುವಾಗ ಕೇವಲ 25 ನಿಮಿಷಗಳ ಕಾಲ ಏಕಚಿತ್ತದಿಂದ ಓದಲು ಪ್ರಯತ್ನಿಸಿ. ಐದು ನಿಮಿಷಗಳ ವಿರಾಮ ಪಡೆಯಿರಿ. ಇದು ಏಕಾಗ್ರತೆ ಮತ್ತು ಆಸಕ್ತಿಯನ್ನು ಹೆಚ್ಚಿಸುತ್ತದೆ. ಈ ತಂತ್ರವನ್ನು ಪೋಮೊಡೋರೋ ಎಂದೂ ಕರೆಯುತ್ತಾರೆ. ಇಂದಿನ ವಿಷಯಗಳನ್ನು ಓದುವ ಮೊದಲು ಹಿಂದಿನ ದಿನದ ಓದನ್ನು ಪುನರಾವರ್ತನೆ ಮಾಡಿ. ನಿರಂತರ ಓದುವಿಕೆಯ ನಡುವೆ ವಿರಾಮ ಪಡೆದಾಗ ಮೊಬೈಲ್, ಟಿ.ವಿಯನ್ನು ನೋಡದೇ ನಡಿಗೆ, ಧ್ಯಾನ, ಆಟ ಆಡುವುದನ್ನು ರೂಢಿಸಿಕೊಳ್ಳಿ.

ಆತ್ಮಸ್ಥೈರ್ಯ, ಸಕಾರಾತ್ಮಕ ಆಲೋಚನೆಗಳು ಮಾನಸಿಕವಾಗಿ ಪರೀಕ್ಷೆಗೆ ಸಿದ್ಧ ಮಾಡುತ್ತವೆ. ಪರೀಕ್ಷೆಯ ಭಯದಿಂದ ಪಾರಾಗಿ. ಪ್ರತಿಯೊಂದು ದಿನವನ್ನು ಶ್ರದ್ಧೆಯಿಂದ ಹಿಂದಿನ ದಿನವೇ ಯೋಜಿಸಿಕೊಳ್ಳುವುದನ್ನು ಮರೆಯಬೇಡಿ.

(ಲೇಖಕರು, ಮಾನಸಿಕ ಆರೋಗ್ಯತಜ್ಞರು, ನಿಮ್ಹಾನ್ಸ್)

ಸಹಾಯವಾಣಿಗೆ ಕರೆ ಮಾಡಿ

ಎಲ್ಲ ಸೂಚನೆಗಳನ್ನು ಪಾಲಿಸಿದ ನಂತರವೂ ಕೆಲವು ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಕುರಿತು ಭಯ ಮೂಡುವುದು ವಿರಳವೇನಲ್ಲ. ಒಂದು ವೇಳೆ ಪರೀಕ್ಷೆಯ ಭಯ ನಿವಾರಿಸಿಕೊಳ್ಳಲು ಕಷ್ಟವಾದರೆ ನಿಸ್ಸಂಕೋಚವಾಗಿ ಸಹಾಯವಾಣಿ 14416 ಸಂಖ್ಯೆಗೆ ಕರೆ ಮಾಡಿ ಮಾತನಾಡಿ. ಈ ಸಂಖ್ಯೆಗೆ ಕರೆ ಮಾಡುವುದರ ಮೂಲಕ ನೀವು ನಿಮ್ಹಾನ್ಸ್‌ನಲ್ಲಿ ಸ್ಥಾಪಿತವಾಗಿರುವ ಭಾರತ ಸರ್ಕಾರದ ರಾಷ್ಟ್ರೀಯ ಟೆಲಿ ಮಾನಸ್ ಸೇವೆಯ ಆಪ್ತ ಸಮಾಲೋಚಕರೊಂದಿಗೆ ಮಾತನಾಡಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

40) ಮಿಶ್ರ ಬೇಸಾಯ ಎಂದರೇನು?

ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೇ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು

41) ಭಾರತದಲ್ಲಿ ಕಾಲುವೆ ನೀರಾವರಿಯನ್ನು ವ್ಯಾಪಕವಾಗಿ ಬಳಸಿಕೊಂಡ ರಾಜ್ಯಗಳಾವುವು?

ಉತ್ತರ:– ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

42) ಉತ್ತರದ ಮಹಾ ಮೈದಾನ ಬಗ್ಗೆ ಬರೆಯಿರಿ.


ಉತ್ತರ : ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂತಲೂ ಕರೆಯುವರು. ಇದು ಉತ್ತರದಲ್ಲಿ ಹಿಮಾಲಯ ಪರ್ವತಗಳು ಹಾಗೂ ದಕ್ಷಿಣದಲ್ಲಿ ಪರ್ಯಾಯ ಪ್ರಸ್ಥಭೂಮಿಯ ನಡುವೆ ಕಂಡು ಬರುವುದು. ಇದು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯವರೆಗೂ ಹಬ್ಬಿದೆ. ಇದು ಪೂರ್ವ ಮತ್ತು ಪಶ್ಚಿಮವಾಗಿ ಸುಮಾರು 2400 ಕಿ. ಮೀ ಉದ್ದವಾಗಿದೆ. ಈ ಮೈದಾನವು 70 ರಿಂದ 500 ಕಿ. ಮೀ. ಅಗಲವಾಗಿದೆ. ಈ ಮೈದಾನವು ಬಹುತೇಕವಾಗಿ ಸಮತಟ್ಟಾಗಿದೆ. ಉತ್ತರ ಭಾರತದ ಮೈದಾನವು, ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವ ಸಂಚಯನ ಮೈದಾನವಾಗಿದೆ.

43) ಭಾರತದ ನಕಾಶೆಯನ್ನು ಬಿಡಿಸಿ, ಕೆಳಗಿನವುಗಳನ್ನು ಗುರುತಿಸಿ

ಎ) 23 1/2^{0} ಉತ್ತರ ಅಕ್ಷಾಂಶ ಬಿ) ನರ್ಮದಾ ನದಿ

ಸಿ) ದೆಹಲಿ.

ಉತ್ತರ:–



44) ಭಾರತ ಮತ್ತು ಚೀನಾದ ನಡುವೆ ಗಡಿವಿವಾದ ಇದ್ದರೂ ಕೂಡಾ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮ ಪಡಿಸಿಕೊಂಡಿವೆ. (ಮಾರ್ಚ್ 2019ರ ಪ್ರಶ್ನೆ)


ಉತ್ತರ:– ಭಾರತದ ಧೋರಣೆಯ ವಿರುದ್ಧ ಚೈನಾ–ಟಿಬೆಟನ್ನು ವಶಪಡಿಸಿಕೊಂಡಿತು. 1962ರಲ್ಲಿ ಚೀನಾ ದೇಶವು ಭಾರತವನ್ನು ಆಕ್ರಮಿಸಿತು ಹಾಗೂ ಯುದ್ಧದಲ್ಲಿ ಭಾರತ ಸೋಲು ಅನುಭವಿಸಿತು. ನಮ್ಮ ರಾಜ್ಯಗಳಲ್ಲೊಂದಾದ ಅರುಣಾಚಲ ಪ್ರದೇಶವನ್ನು ಚೈನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಭಾರತ–ಚೈನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದವನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ಮಧ್ಯೆ ಮನಸ್ತಾಪವಿದೆ. ಭಾರತ ಚೈನಾದ ಮಧ್ಯೆ ಇರುವ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ. ಹೀಗಾಗಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಗಡಿ ರೇಖೆ ನಿಖರವಾಗಿ ಇಲ್ಲ. ಭಾರತ ಮತ್ತು ಚೀನಾದ ನಡುವೆ, ಗಡಿಯಲ್ಲಿ ದೋಕ್ಲಾಮ್, ತವಾಂಗ್, ಆಕ್ಸಯ್ ಚೀನಾ ಮೊದಲಾದ ಸಮಸ್ಯೆಗಳಿದ್ದರೂ ನಮ್ಮ ಉತ್ತರ ಭಾಗದಲ್ಲಿರುವ ಬೃಹತ್ ನೆರೆಯ ರಾಷ್ಟ್ರವಾದ ಚೀನಾದೊಡನೆ ಇತಿಹಾಸದ ಉದ್ದಕ್ಕೂ ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡಿದೆ. ಅಕ್ಟೋಬರ್ 1949ರಲ್ಲಿ ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ. ಪಂಚಶೀಲ ಹಾಗೂ ಹಿಂದಿ–ಚೀನೀ ಭಾಯಿಭಾಯಿ ತತ್ವದ ಆಧಾರದಲ್ಲಿ ಪರಸ್ಪರ ಭಾರತ–ಚೀನಾ ಸಂಬಂಧವನ್ನು ಬೆಳೆಸಿಕೊಳ್ಳಲು ಯತ್ನಿಸಲಾಯಿತು.

45) ಭಾರತದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ

ಎ) ಕೋಲ್ಕತ್ತಾ ಬಿ) ಕಾವೇರಿ ನದಿ

ಸಿ) 82 1/2^{0} ಪೂರ್ವ ರೇಖಾಂಶ

ಉತ್ತರ:–



46) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?

ಉತ್ತರ:– ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:–

1. ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.
2. ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣತೊಡಗಿತು.
3. ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ. ಎಸ್. ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CET BIOLOGY

15. Identify the incorrect statement from the following.

(a) The reservoir pool for phosphorus cycle is earth's crust, whereas atmosphere is the reservoir pool for carbon cycle.

(b) During carbon cycle and phosphorus cycle, there is very little respiratory release of carbon and phosphorus respectively.

(c) Atmospheric inputs of phosphorus throughout rainfall are much smaller than carbon inputs.

(d) Gaseous exchanges of phosphorus between organism and environment are negligible

Ans: b

Expl:- All the statements given in the questions are correct except the one that there is very little respiratory release of carbon and phosphorus during each carbon and phosphorus cycle. In carbon cycle a considerable amount or large amount of carbon is returned to the atmosphere in the form of CO_2 through numerous respiratory activities of producers and consumers.

Decomposers also contribute substantially to CO_2 pool by their processing of waste materials and dead organic matter of land or oceans. Some amount of carbon is lost to sediments and removed from circulation. Additional human activities are also responsible for releasing CO_2 to the atmosphere. Whereas, in phosphorus cycle there is no respiratory release of phosphorus into the atmosphere.

16. The result of the following reaction/ experiment carried out by *Avery et. al.* on *Streptococcus pneumoniae* has proved conclusively that DNA is the genetic material

(a) Live 'R' strain + DNA from 'S' strain + DNAase

(b) Heat killed 'R' strain + DNA from 'S' strain + DNAase

(c) Live 'R' strain + DNA from 'S' strain + RNAase

(d) Live 'R' strain + Denatured DNA of 'S' strain+protease

Ans:a

Expl:- In 1944, *Avery et. al.* purified biochemical's from the heat killed *S*-type bacteria into three components, i.e., DNA, carbonydrate and protein. DNA fraction was further divided into two parts (i.e., one with DNase and one without DNase). It was observed that only DNA of *S*-type can change *R*-type of bacteria in to *S*-type.

Therefore, the character or gene of virulence is located in DNA. Protease and hormone RNases also did not cause this transformation. This shows that Protein and RNA was not the transforming substance. Hence, they came to the conclusion that the chemical to be inherited was DNA.

17. Match the storage products listed under column I with the organisms given under column II; choose the appropriate option from the given choices.

Column I	Column II
A) Glycogen	1) Sargassum
B) Pyrenoids	2) Nostoc
C) Laminarian and mannitol	3) Polysiphonia
	4) spirogyra
D) Floridean strach	5) agaricus

	A	B	C	D
(a)	3	4	1	5
(b)	4	3	5	2
(c)	5	4	1	3
(d)	2	1	4	3

Ans: C

Expl:- Agaricus is a type of fungi belonging to class- Basidiomycetes. The reserve food material is glycogen or oil droplets in fungi. Spirogyra is an algae belonging to the Group-Chlorophyta (green algae). The chloroplasts of Spirogyra have 2-20 thylakoid lamellae which are usually associated with pyrenoids. Each pyrenoid has a central protein called 'pyreno crystal' and a surrounding starch sheath.

They serve the purpose of storing starch. Sargassum belongs to the group Pheophyta (brown algae). The accumulation product of photosynthesis in this is D-mannitol and the reserve food material is Laminarin.

And Polysiphonia belongs to the group-Rhodophyta (red algae) which has the reserve food material in the form of floridean starch (much more similar to the glycogen).

18. Identify the desirable charecteristics for a plasmid used in rDNA technology from the following

(a) Ability to multiply and express outside the host in a bioreactor.

(b) A highly active promoter.

(C) A site at which replication can be initiated.

(D) One or more identifiable marker genes.

(E) One or more unique restriction sites.

(a) A, C and E (b) B, C, and E

(c) A, C, D and E (d) B, C, D, and E

Ans:d

(Contd.......)



ಸುಭಾಷಿತ

ತಾಳಿ ತಾಳಿ ಎನ್ನುವುದೇ ಮಂತ್ರ; ತಾಳ್ಮೆ ಇಲ್ಲದಿರೆ ಬಾಳೇ ಅತಂತ್ರ. -ಪು.ತಿ.ನ.

ಲೋಕಸಭೆಗೆ 7 ಹಂತದ ಚುನಾವಣೆ ದೀರ್ಘಾವಧಿ ಪ್ರಕ್ರಿಯೆಯ ಸವಾಲು

ಕೇಂದ್ರ ಚುನಾವಣಾ ಆಯೋಗವು ಲೋಕಸಭೆ ಹಾಗೂ ಕೆಲವು ವಿಧಾನಸಭೆಗಳಿಗೆ ಚುನಾವಣೆಯ ದಿನಾಂಕವನ್ನು ಘೋಷಣೆ ಮಾಡಿದ ನಂತರದಲ್ಲಿ ದೇಶದ ಎಲ್ಲೆಡೆ ಚುನಾವಣಾ ಕಾವು ಏರಿದೆ. ಲೋಕಸಭೆಗೆ ಏಳು ಹಂತಗಳಲ್ಲಿ ಮತದಾನ ನಡೆಯಲಿದೆ ಎಂದು ಆಯೋಗವು ಘೋಷಿಸಿದೆ. ಮೊದಲ ಹಂತವು ಏಪ್ರಿಲ್ 19ರಂದು ನಡೆಯಲಿದೆ, ಕೊನೆಯ ಹಂತದ ಮತದಾನವು ಜೂನ್ 1ರಂದು ನಡೆಯಲಿದೆ. ಮತಗಳ ಎಣಿಕೆಯು ಜೂನ್ 4ರಂದು ನಡೆಯಲಿದೆ. ದೇಶದ ಜನಜೀವನದ ಮೇಲೆ, ದೇಶದಲ್ಲಿನ ಚರ್ಚೆಗಳ ಮೇಲೆ ಚುನಾವಣೆಯು ಎರಡೂವರೆ ತಿಂಗಳಿಗೂ ಹೆಚ್ಚು ಕಾಲ ದಟ್ಟವಾದ ಪ್ರಭಾವ ಬೀರಲಿದೆ. ಚುನಾವಣೆಯು ರಾಜಕಾರಣ ಹಾಗೂ ಆಡಳಿತಕ್ಕೆ ನೇರವಾಗಿ ಸಂಬಂಧಿಸಿದ್ದು, ಆದರೆ ಅದರ ವ್ಯಾಪ್ತಿ ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ. ರಾಜಕಾರಣ ಹಾಗೂ ಆಡಳಿತದ ಆಚೆಗೂ ಹತ್ತು ಹಲವು ಸಂಗತಿಗಳ ಮೇಲೆ ಚುನಾವಣೆಯು ಪ್ರಭಾವ ಬೀರುತ್ತದೆ. ಚುನಾವಣಾ ಪ್ರಚಾರ ಕಾರ್ಯಕ್ರಮಗಳು ಸಾಂಸ್ಕೃತಿಕ ಅಭಿವ್ಯಕ್ತಿಗಳೂ ಹೌದು. ಚುನಾವಣಾ ಪ್ರಚಾರ ಕಾರ್ಯಗಳು ಪಕ್ಷಗಳು, ಅಭ್ಯರ್ಥಿಗಳ ಕಡೆಯಿಂದ ವಿಶಿಷ್ಟವಾದ ಹಾಗೂ ವಿಭಿನ್ನವಾದ ಬಗೆಗಳಲ್ಲಿ ನಡೆಯುತ್ತವೆ. ಚುನಾವಣಾ ಅಭಿಯಾನದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವವರು ಯಾರು, ಅವರು ಮಾತನಾಡುವ ವಿಷಯಗಳು ಯಾವುವು, ಅವರು ಏನನ್ನು ಮಾತನಾಡಬಹುದು ಎಂಬುದರ ಸ್ಥೂಲ ಚಿತ್ರಣ ಹಲವರ ಮನಸ್ಸಿನಲ್ಲಿ ಇರುತ್ತದೆಯಾದರೂ ಮುಂದಿನ ದಿನಗಳಲ್ಲಿ ಅದು ಹೆಚ್ಚು ಸ್ಪಷ್ಟವಾದ ರೂಪ ಪಡೆದುಕೊಳ್ಳಲಿದೆ.



ಚುನಾವಣಾ ಪ್ರಕ್ರಿಯೆಯು ದೀರ್ಘಾವಧಿ ಆಗಿರುವುದು ಕೆಲವು ಕಳವಳಗಳಿಗೆ ಕಾರಣವಾಗಿದೆ

ಚುನಾವಣಾ ಪ್ರಕ್ರಿಯೆಯು ದೀರ್ಘಾವಧಿಗೆ ಇರಲಿರುವುದರ ಬಗ್ಗೆ ಕೆಲವು ಕಳವಳಗಳು ವ್ಯಕ್ತವಾಗಿವೆ. ದೀರ್ಘ ಅವಧಿಯ ಈ ಪ್ರಕ್ರಿಯೆಯು ಚುನಾವಣಾ ಅಭಿಯಾನದ ಮೇಲೆ ಹಾಗೂ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿರುತ್ತದೆ. ಕಳೆದ ಬಾರಿಯ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತದಾನದ ಹಂತಗಳು 36 ದಿನಗಳಲ್ಲಿ ಪೂರ್ಣಗೊಂಡಿದ್ದವು. ಈ ಬಾರಿ ಅದು 46 ದಿನಗಳಿಗೆ ವಿಸ್ತರಿಸಿಕೊಂಡಿದೆ. ಚುನಾವಣಾ ಪ್ರಚಾರ ಕಾರ್ಯವು ಈಗಾಗಲೇ ಆರಂಭ ಆಗಿಬಿಟ್ಟಿದೆ. ಪ್ರಚಾರ ಕಾರ್ಯಕ್ಕೆ ಹೆಚ್ಚಿನ ದಿನಗಳು ದೊರೆತರೆ, ಹೆಚ್ಚು ಸಂಪನ್ಮೂಲ ಇರುವ ಪಕ್ಷಗಳಿಗೆ ಹೆಚ್ಚು ಅನುಕೂಲ ಆಗುತ್ತದೆ. ಕಡಿಮೆ ಸಂಪನ್ಮೂಲಗಳು ಇರುವ ಪಕ್ಷಗಳ ಪಾಲಿಗೆ ಅದು ಅನನುಕೂಲಕರ ಆಗುತ್ತದೆ. ಅಂದರೆ, ಸಮಾನ ಅವಕಾಶಗಳನ್ನು ನಿರಾಕರಿಸಿದಂತೆ ಆಗುತ್ತದೆ. ದೇಶದಲ್ಲಿ ಈಗಷ್ಟೇ ಬೇಸಿಗೆ ಕಾಲ ಶುರುವಾಗಿದೆ. ಬೇಸಿಗೆಯುದ್ದಕ್ಕೂ ಚುನಾವಣಾ ಅಭಿಯಾನ ನಡೆಯಲಿದೆ. ಬಿಸಿಲಿನ ಝಳ ತೀವ್ರವಾಗಿರುವ ಹೊತ್ತಿನಲ್ಲಿ ಪ್ರಚಾರ ಕಾರ್ಯ ನಡೆಸುವುದು ಅಭ್ಯರ್ಥಿಗಳಿಗೆ, ಕಾರ್ಯಕರ್ತರಿಗೆ ಬಹಳ ಸವಾಲಿನ ಕೆಲಸವಾಗಲಿದೆ. ಚುನಾವಣೆ ಸಂದರ್ಭದಲ್ಲಿ ಭದ್ರತೆಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಅಂದರೆ, ಭದ್ರತಾ ಸಿಬ್ಬಂದಿಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ರವಾನಿಸುವುದಕ್ಕೆ, ಅವರನ್ನು ಅಲ್ಲಿ ಕರ್ತವ್ಯಕ್ಕೆ ನಿಯೋಜಿಸುವುದಕ್ಕೆ ಹೆಚ್ಚಿನ ಸಮಯಾವಕಾಶದ ಅಗತ್ಯ ಇರುತ್ತದೆ. ಹೀಗಾಗಿಯೇ ಚುನಾವಣಾ ಪ್ರಕ್ರಿಯೆಯು ಸುದೀರ್ಘವಾಗಿರುತ್ತದೆ ಎಂಬ ವಾದವೊಂದು ಇದೆ. ಆದರೆ ಈ ವಾದವು ಹಿಂದಿನಷ್ಟು ಈಗ ಸಂಗತವಾಗಿ ಉಳಿದಿಲ್ಲ. ಚುನಾವಣಾ ಪ್ರಕ್ರಿಯೆಯು ಸುದೀರ್ಘವಾದಷ್ಟೂ ಚುನಾವಣಾ ವೆಚ್ಚ ಹೆಚ್ಚಾಗುತ್ತದೆ. ಚುನಾವಣಾ ನೀತಿ ಸಂಹಿತೆಯು ಈಗ ದೇಶದಾದ್ಯಂತ ಜಾರಿಗೆ ಬಂದಿದೆ. ನೀತಿ ಸಂಹಿತೆಯು ಚುನಾವಣಾ ಪ್ರಕ್ರಿಯೆಯ ದೀರ್ಘ ಅವಧಿಗೆ ಉಲ್ಲಂಘನೆ ಆಗದಂತೆ ನೋಡಿಕೊಳ್ಳುವ ಹೊಣೆ ಈಗ ಚುನಾವಣಾ ಆಯೋಗದ ಮೇಲೆ ಇದೆ. ನೀತಿ ಸಂಹಿತೆಯು ಜಾರಿಯಲ್ಲಿ ಇರುವಷ್ಟು ಕಾಲ ಸರ್ಕಾರಗಳ ಮಾಮೂಲಿನ ಕೆಲಸಗಳಿಗೂ ತಡೆ ಬಿದ್ದಂತೆ ಆಗುತ್ತದೆ. ಅಲ್ಲದೆ, ಒಂದು ರಾಜ್ಯದಲ್ಲಿ ಚುನಾವಣೆ ನಡೆಯುತ್ತಿದೆ ಎಂಬ ಕಾರಣಕ್ಕೆ ಇನ್ನೊಂದು ರಾಜ್ಯದಲ್ಲಿ ಸರ್ಕಾರಿ ಕೆಲಸಗಳಿಗೆ ಅಡೆತಡೆಗಳು ಎದುರಾಗುವುದು ಸರಿಯಲ್ಲ. ಕೆಲವು ಪ್ರದೇಶಗಳ ಮತದಾರರು ಹಾಗೂ ಅಭ್ಯರ್ಥಿಗಳು ಚುನಾವಣಾ ಫಲಿತಾಂಶ ಬರುವುದಕ್ಕೆ ಬಹಳ ಕಾಲ ಕಾಯಬೇಕು. ಕೆಲವು ರಾಜ್ಯಗಳ ಮತದಾರರು ಫಲಿತಾಂಶಕ್ಕಾಗಿ ಹಲವು ವಾರಗಳವರೆಗೆ ಕಾಯಬೇಕು.

ಈಚಿನ ವರ್ಷಗಳಲ್ಲಿ ದೇಶದ ಚುನಾವಣಾ ಪ್ರಕ್ರಿಯೆಯ ಅವಧಿಯು ಹೆಚ್ಚಾಗುತ್ತ ಬಂದಿದೆ. 2004ರಲ್ಲಿ ಚುನಾವಣಾ ಪ್ರಕ್ರಿಯೆಯು 21 ದಿನಗಳಲ್ಲಿ ಪೂರ್ಣಗೊಂಡಿತ್ತು. 2009ರಲ್ಲಿ ಅದು 28 ದಿನಗಳಲ್ಲಿ, 2014ರಲ್ಲಿ 37 ದಿನಗಳಲ್ಲಿ ಹಾಗೂ 2019ರಲ್ಲಿ 36 ದಿನಗಳಲ್ಲಿ ಪೂರ್ಣಗೊಂಡಿತ್ತು. ಈ ಬಾರಿಯ ಚುನಾವಣೆಯು 46 ದಿನಗಳ ಅವಧಿಯಲ್ಲಿ ನಡೆಯಲಿದೆ. ಇಷ್ಟು ದೀರ್ಘಾವಧಿಯು ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಬೇಕು ಎಂಬ ತತ್ವಕ್ಕೆ ಪೂರಕವಾಗಿಲ್ಲ. ಚುನಾವಣೆ ಅಂದರೆ ಅದು ಮನುಷ್ಯ ಪ್ರಯತ್ನದ ಫಲ. ದೈಹಿಕ, ಮಾನಸಿಕ, ಭಾವನಾತ್ಮಕ, ಆರ್ಥಿಕ ಅಂಶಗಳು ಮನುಷ್ಯನ ವರ್ತನೆಯ ಮೇಲೆ ಪರಿಣಾಮ ಉಂಟುಮಾಡುವ ರೀತಿಯಲ್ಲಿಯೇ ಚುನಾವಣೆಗಳ ಮೇಲೆಯೂ ಪ್ರಭಾವ ಬೀರುತ್ತವೆ. ಇಲ್ಲಿ ಹವಾಮಾನ ಕೂಡ ಪರಿಗಣಿಸಬೇಕಾದ ಒಂದು ಅಂಶ. ಇವೆಲ್ಲವನ್ನೂ ಪರಿಗಣಿಸಿ ಚುನಾವಣಾ ಆಯೋಗವು ಅತ್ಯಂತ ಹೆಚ್ಚು ಸೂಕ್ತವಾದ, ಚುನಾವಣೆಯನ್ನು ಅತ್ಯಂತ ಹೆಚ್ಚು ನ್ಯಾಯಸಮ್ಮತವಾಗಿ ಹಾಗೂ ಅತ್ಯಂತ ಹೆಚ್ಚು ದಕ್ಷವಾಗಿ ನಡೆಸಲು ಅನುವು ಮಾಡಿಕೊಡುವ ವೇಳಾಪಟ್ಟಿಯನ್ನು ರೂಪಿಸಬೇಕು. ಈ ಬಾರಿಯ ಚುನಾವಣೆಯ ವೇಳಾಪಟ್ಟಿಯನ್ನು ಆಯೋಗವು ಇನ್ನಷ್ಟು ಹೆಚ್ಚು ಸಮಂಜಸವಾಗಿ ಸಿದ್ಧಪಡಿಸಬಹುದಿತ್ತು.

ದಿನದ ಟ್ವೀಟ್

ಯಾರವರು?!



ಯಾರೋ ಒಬ್ಬರು ಜೆಡಿಯು ಕಚೇರಿಗೆ ಬಂದರು ಮತ್ತು 10 ಕೋಟಿ ರೂಪಾಯಿ ಮೊತ್ತದ ಚುನಾವಣಾ ಬಾಂಡ್‌ಗಳಿದ್ದ ಮುಚ್ಚಿದ ಲಕೋಟೆಯನ್ನು ಅಲ್ಲಿನವರ ಕೈಗಿತ್ತರು. ಆ ಯಾರೋ ಒಬ್ಬರು ಯಾರಿರಬಹುದು? ಬರೀ ತಪ್ಪು ಉತ್ತರಗಳು!

(ತನಗೆ ಬಂದಿರುವ ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಬಿಹಾರದ ಜೆಡಿಯು ಘಟಕ ನೀಡಿರುವ ಉತ್ತರಕ್ಕೆ ಪ್ರತಿಕ್ರಿಯೆ)

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ



ಒಂದು ವರ್ಷದಲ್ಲಿ, ಟಿಸಿಎಸ್ 10,669 ಉದ್ಯೋಗಿಗಳನ್ನು ಕೈಬಿಟ್ಟಿದೆ, ಇನ್ಫೊಸಿಸ್ 24,182 ಮಂದಿಯನ್ನು ವಜಾಗೊಳಿಸಿದೆ, ವಿಪ್ರೊದ 18,510 ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಭಾರತದ ಕುಶಲ ಯುವಜನರಿಗೆ ಉದ್ಯೋಗಗಳು ಎಲ್ಲಿವೆ?

ಜವಾಹರ್ ಸರ್ಕಾರ್, ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್

25 ವರ್ಷಗಳ ಹಿಂದೆ

ಗುರುವಾರ, 18-3-1999

• ರಾಜ್ಯದ ಹಗುರ ಬಜೆಟ್ ಕೊರತೆ ಏರದಂತೆ ಎಚ್ಚರಿಕೆ

ಬೆಂಗಳೂರು, ಮಾರ್ಚ್ 17– ರೈತರಿಗೆ ಹಾಗೂ ಜನಸಾಮಾನ್ಯರಿಗೆ ಹೊರೆಯಾಗದ ರೂ.125 ಕೋಟಿಗಳ ಕೊರತೆಯ 1999–2000ನೇ ಸಾಲಿನ ಬಜೆಟ್ ಅನ್ನು ಹಣಕಾಸು ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ವಿಧಾನಸಭೆಯಲ್ಲಿ ಮಂಡಿಸಿದರು.

ಬಜೆಟ್ ಕೊರತೆ ಪ್ರಮಾಣವನ್ನು ಕಳೆದ ಸಾಲಿನ ಕೊರತೆಯ ಪರಿಷ್ಕೃತ ಅಂದಾಜಿನ ಮಟ್ಟದಲ್ಲೇ ಇರಿಸಲಾಗಿದೆ. ರಸಗೊಬ್ಬರಗಳ ಮೇಲಿನ ಮಾರಾಟ ತೆರಿಗೆ, ಕಾಫಿ ಬೆಳೆ ಮೇಲೆ ಇದ್ದ ಕೃಷಿ ವರಮಾನ ತೆರಿಗೆ ಹಾಗೂ ವಾಹನಗಳ ವರ್ಗಾವಣೆ ಮಾರಾಟ ತೆರಿಗೆ ರದ್ದು ಮಾಡಲಾಗಿದೆ.

• ಮೀಸಲಾತಿ ಸುತ್ತೋಲೆ ಸಂಸತ್‌ನಲ್ಲಿ ಕೋಲಾಹಲ

ನವದೆಹಲಿ, ಮಾರ್ಚ್ 17– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನಿರಾಕರಿಸುವ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕೆಂದು ಆಳುವ ಪಕ್ಷವನ್ನು ಹೊರತುಪಡಿಸಿ, ಪ್ರತಿಪಕ್ಷಗಳ ದಲಿತ ವರ್ಗಗಳ ಸದಸ್ಯರು ಒತ್ತಾಯಿಸಿ ಪ್ರತಿಭಟನೆ ಮಾಡಿದ್ದರಿಂದ ಲೋಕಸಭೆಯ ಕಲಾಪ ಇಂದು ನಡೆಯಲಿಲ್ಲ.

ಬೂಟಾ ಸಿಂಗ್ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ವರ್ಗದ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿನ ಅಂಗಳಕ್ಕೆ ಧಾವಿಸಿ ಘೋಷಣೆ ಕೂಗಿದರು.

50 ವರ್ಷಗಳ ಹಿಂದೆ

ಸೋಮವಾರ, 18-3-1974

• ಬಿಹಾರ ವಿಧಾನಸಭೆಗೆ ಇಂದು ಬೃಹತ್ ವಿದ್ಯಾರ್ಥಿ ಘೇರಾವೋ

ಪಟನಾ, ಮಾರ್ಚ್ 17– ಬೆಲೆಗಳ ಏರಿಕೆ, ಭ್ರಷ್ಟಾಚಾರ ಮತ್ತು ನಿರುದ್ಯೋಗದ ವಿರುದ್ಧ ಪ್ರತಿಭಟಿಸಲು ಹಾಗೂ ಉದ್ಯೋಗ ಮೂಲದ ಶಿಕ್ಷಣಕ್ಕೆ ಒತ್ತಾಯಪಡಿಸಲು ವಿದ್ಯಾರ್ಥಿಗಳು ಸೋಮವಾರ ಬಿಹಾರ ವಿಧಾನಸಭೆಗೆ ಘೇರಾವೋ ಮಾಡಲಿದ್ದಾರೆ.

ರಾಜ್ಯದ ನಾನಾ ಭಾಗಗಳಿಂದ ಸಹಸ್ರಾರು ವಿದ್ಯಾರ್ಥಿಗಳು ಈಗಾಗಲೇ ಇಲ್ಲಿಗೆ ಆಗಮಿಸಿದ್ದಾರೆ. ಬಿಹಾರದ ಕಮ್ಯುನಿಸ್ಟೇತರ ವಿದ್ಯಾರ್ಥಿ ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿಯು ಈ ಘೇರಾವೋವನ್ನು ವ್ಯವಸ್ಥೆಗೊಳಿಸಿದೆ.

• ರಾಜ್ಯದ 5 ಮೆಡಿಕಲ್ ಕಾಲೇಜುಗಳಿಗೆ ಮನ್ನಣೆ ಇಲ್ಲ

ಬರೋಡ, ಮಾರ್ಚ್ 17– ಕಡಿಮೆ ದರ್ಜೆ ಕಾರಣವನ್ನು ಆಧರಿಸಿ ಭಾರತದ ವೈದ್ಯಕೀಯ ಮಂಡಲಿಯು ರಾಷ್ಟ್ರದಲ್ಲಿ ಒಟ್ಟು 9 ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಮನ್ನಣೆಯನ್ನು ರದ್ದುಪಡಿಸಿದೆ. ಈ ಪೈಕಿ ದಾವಣಗೆರೆ ಮೆಡಿಕಲ್ ಕಾಲೇಜು, ಮಣಿಪಾಲದಲ್ಲಿರುವ ಕಸ್ತೂರಬಾ ಮೆಡಿಕಲ್ ಕಾಲೇಜು, ಬೆಳಗಾವಿಯಲ್ಲಿರುವ ಜೆ.ಎಲ್.ಎನ್. ಮೆಡಿಕಲ್ ಕಾಲೇಜು, ಕಲ್ಬುರ್ಗಿ ಮೆಡಿಕಲ್ ಕಾಲೇಜು ಮತ್ತು ಬೆಂಗಳೂರಿನ ಸೇಂಟ್‌ಜಾನ್ ಮೆಡಿಕಲ್ ಕಾಲೇಜುಗಳೂ ಸೇರಿವೆ.

ಎಂಎಸ್‌ಪಿ ಯಾಕೆ ಅನ್ನುವುದು ಈಗ ಪ್ರಶ್ನೆಯಾಗಬಾರದು, ಹೇಗೆ ಅನ್ನುವುದಷ್ಟೇ ಪ್ರಶ್ನೆಯಾಗಬೇಕು

ಹಲವು ಸಮಸ್ಯೆಗಳಿಗೆ ಪರಿಹಾರ ಎಂಎಸ್‌ಪಿ



ಟಿ.ಎಸ್.ವೇಣುಗೋಪಾಲ್

ರೈತರು ಎಂಎಸ್‌ಪಿ ಬಲವರ್ಧನೆಗೆ ಒತ್ತಾಯಿಸುತ್ತಿದ್ದಾರೆ. ಅದಕ್ಕೆ ಕಾನೂನು ಖಾತರಿ ಬೇಕು ಎನ್ನುತ್ತಿದ್ದಾರೆ. ಎಂಎಸ್‌ಪಿ ಅನ್ನುವುದು ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳನ್ನು ಕೊಳ್ಳುವುದಕ್ಕೆ ನೀಡುವ ಕನಿಷ್ಠ ಬೆಂಬಲ ಬೆಲೆ. ಇಷ್ಟಾದರೂ ಸಿಕ್ಕರೆ ರೈತರಿಗೆ ಮಾಡಿದ ಖರ್ಚಿನ ಜೊತೆಗೆ ಕೊಂಚ ಲಾಭ ದೊರೆತು ಕೃಷಿಯಲ್ಲೇ ಮುಂದುವರಿಯುವುದಕ್ಕೆ ಸಾಧ್ಯವಾಗಬಹುದು.

ಯಾರಿಗೂ ಇಲ್ಲದ ಎಂಎಸ್‌ಪಿ ಸೌಲಭ್ಯ ರೈತರಿಗೆ ಮಾತ್ರ ಯಾಕೆ? ಕೃಷಿಯಲ್ಲಿ ಅನಿಶ್ಚಿತತೆ ಹೆಚ್ಚು. ಎಷ್ಟು ಉತ್ಪಾದನೆಯಾಗುತ್ತದೆ ಅನ್ನುವುದು ಖಾತರಿಯಿಲ್ಲ. ಮಳೆ ಇಲ್ಲದೆ ಅಥವಾ ಅತಿ ಮಳೆಯಾಗಿ ಅಥವಾ ಇನ್ನಾವುದೋ ಕಾರಣಕ್ಕೆ ಫಸಲು ನಾಶವಾಗಿಬಿಡಬಹುದು. ಬೆಳೆದ ಬೆಳೆಗೆ ಎಷ್ಟು ಬೆಲೆ ಸಿಗಬಹುದು ಅನ್ನುವುದೂ ಖಚಿತವಿಲ್ಲ. ದಾಸ್ತಾನು ಹೆಚ್ಚಿ ಬೆಲೆ ಕುಸಿಯಬಹುದು. ದೊಡ್ಡ ವ್ಯಾಪಾರಿಗಳು, ಸರ್ಕಾರದ ನೀತಿಗಳು ಬೆಲೆಯನ್ನು ಮೇಲೆ ಕೆಳಗೆ ಮಾಡಿಬಿಡಬಹುದು. ಒಳ್ಳೆಯ ಬೆಲೆ ಸಿಕ್ಕಾಗ ಮಾರೋಣ ಎಂದುಕೊಂಡು ಕಾಯುವ ಸ್ಥಿತಿಯಲ್ಲಿ ಹೆಚ್ಚಿನವರು ಇರುವುದಿಲ್ಲ. ಸಾಲ ಮಾಡಿಕೊಂಡಿರುತ್ತಾರೆ. ದಾಸ್ತಾನು ಕೂಡಿಡುವುದಕ್ಕೆ ವ್ಯವಸ್ಥೆ ಇರುವುದಿಲ್ಲ. ಸಿಕ್ಕ ಬೆಲೆಗೆ ಮಾರಿಕೊಳ್ಳುತ್ತಾರೆ.

ರೈತರು ಬೆಳೆಯುವ ಆಹಾರಧಾನ್ಯಗಳು ಎಷ್ಟು ಮುಖ್ಯವೆಂದರೆ, ಅವು ಇಲ್ಲದೆ ಜೀವನ ಸಾಗುವುದಿಲ್ಲ. ಅವುಗಳ ಬೆಲೆ ಏರುವುದಕ್ಕೆ ಸರ್ಕಾರ ಬಿಡುವುದಿಲ್ಲ. ಆದರೆ ರೈತರ ಖರ್ಚು ಮಾತ್ರ ಏರುತ್ತಲೇ ಇದೆ. ಹಾಗಾಗಿ, ರೈತರ ಜೀವನಮಟ್ಟದಲ್ಲಿ ಸುಧಾರಣೆಯಾಗುತ್ತಿಲ್ಲ. ನಮ್ಮಲ್ಲಿಯ ಶೇ 80ರಷ್ಟು ಕೃಷಿಕರು ಸಣ್ಣ ರೈತರು. ಕೃಷಿಕ ಕುಟುಂಬದ ತಿಂಗಳ ಆದಾಯ ಹೆಚ್ಚೆಂದರೆ ₹ 10,000. ಬಹುಪಾಲು ದೇಶಗಳಲ್ಲಿ ಇದೇ ಕಥೆ. ಅದರಿಂದಾಗಿಯೇ ಹೆಚ್ಚಿನ ದೇಶಗಳಲ್ಲಿ ಸರ್ಕಾರಗಳು ರೈತರಿಗೆ ಧಾರಾಳವಾಗಿ ಸಬ್ಸಿಡಿ ನೀಡುತ್ತವೆ. ಎಂತಹ ಸಂಕಷ್ಟದ ಸಮಯದಲ್ಲೂ ಅದನ್ನು ನಿಲ್ಲಿಸುವುದಿಲ್ಲ. ಭಾರತದಲ್ಲೇ ಇದು ಕಡಿಮೆ ಅನ್ನಬಹುದು.

ರೈತರ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಯುಪಿಎ ಸರ್ಕಾರ ಎಂ.ಎಸ್.ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ರಾಷ್ಟ್ರೀಯ ಕೃಷಿ ಆಯೋಗವು ಎಂಎಸ್‌ಪಿಗೆ ಶಿಫಾರಸು ಮಾಡಿತ್ತು. ಎಂಎಸ್‌ಪಿಯನ್ನು ನಿಗದಿಪಡಿಸುವುದಕ್ಕೆ ಸಮಗ್ರ ಉತ್ಪಾದನಾ ವೆಚ್ಚವನ್ನು (ಸಿ2) ಅಂದರೆ ಉಳುಮೆ, ಬಿತ್ತನೆ, ಬೀಜ, ಗೊಬ್ಬರದ ವೆಚ್ಚ, ಮನೆಯವರ ದುಡಿಮೆ ಜೊತೆಗೆ ಭೂಮಿಯ ಗೇಣಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಜೊತೆಗೆ ಅದಕ್ಕೆ ಶೇಕಡ 50ರಷ್ಟನ್ನು ಸೇರಿಸಿ ಲೆಕ್ಕ ಹಾಕಬೇಕು ಅನ್ನುವುದು ಅದರ ಶಿಫಾರಸಾಗಿತ್ತು. ಆದರೆ ಸರ್ಕಾರವು ಬೆಲೆಯನ್ನು ನಿರ್ಧರಿಸುವಾಗ ಗೇಣಿಯನ್ನು ಬಿಟ್ಟುಬಿಡುತ್ತದೆ. ಆಗ ಎಂಎಸ್‌ಪಿ ಕಡಿಮೆಯಾಗಿಬಿಡುತ್ತದೆ. ಹಾಗಾಗಿಯೇ ರೈತರು ಸ್ವಾಮಿನಾಥನ್ ವರದಿಗೆ ಒತ್ತಾಯಿಸುತ್ತಿದ್ದಾರೆ. ಜೊತೆಗೆ ಕಾನೂನಿನ ಖಾತರಿ ಬೇಕು ಎನ್ನುತ್ತಿದ್ದಾರೆ. ಕಾನೂನಿನ ಬಲ ಇದ್ದರೆ ಸರ್ಕಾರವನ್ನು ಒತ್ತಾಯಿಸಬಹುದು, ಸರ್ಕಾರಕ್ಕೆ ಕಡ್ಡಾಯವೂ ಆಗುತ್ತದೆ ಅನ್ನುವುದು ಅವರ ಲೆಕ್ಕಾಚಾರ.

ಕೃಷಿಯು ಭಾರತದ ಆರ್ಥಿಕತೆಯ ಬೆನ್ನೆಲುಬು. ಅದು ಹೆಚ್ಚು ಜನರಿಗೆ ಉದ್ಯೋಗ ನೀಡುತ್ತದೆ. ದೇಶದ ಜಿಡಿಪಿಯಲ್ಲೂ ಅದರ ಪಾಲು ಗಣನೀಯವಾಗಿಯೇ ಇದೆ. ದೇಶದ ಆರ್ಥಿಕತೆಯಲ್ಲಿ ಪ್ರಗತಿಯಾಗಬೇಕಾದರೆ, ಕೃಷಿಯಲ್ಲಿ ಉತ್ಪಾದಕತೆ ಹೆಚ್ಚಬೇಕು. ರೈತರ ಬದುಕು ಸುಧಾರಿಸಬೇಕು. ಕೃಷಿ ಬೆಲೆಯಲ್ಲಿ ಸ್ಥಿರತೆ ಸಾಧ್ಯವಾಗಬೇಕು. ಬೆಲೆಯ ಸ್ಥಿರತೆಗೆ ಒಂದು ಸಾಧನವನ್ನಾಗಿಯೂ ಎಂಎಸ್‌ಪಿಯನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದೆ.

ಇಲ್ಲಿ ಎರಡು ಸಾಧ್ಯತೆಗಳಿವೆ. ಮಾರುಕಟ್ಟೆಯ ಬೆಲೆಯು ಎಂಎಸ್‌ಪಿಗಿಂತ ಹೆಚ್ಚಿರಬಹುದು ಅಥವಾ ಕಡಿಮೆ ಇರಬಹುದು. ಹೆಚ್ಚಿದ್ದಾಗ ಸರ್ಕಾರದ ನೆರವು ಬೇಕಾಗುವುದಿಲ್ಲ. ರೈತರು ಮಾರುಕಟ್ಟೆಯಲ್ಲಿ ಮಾರಿಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ಸರ್ಕಾರದ ಮಧ್ಯಪ್ರವೇಶ ಬೇಕಾಗುತ್ತದೆ. ಅವಶ್ಯಕತೆಗಿಂತ ಹೆಚ್ಚಿಗೆ ಬೆಳೆದಿದ್ದಾಗ ಹೀಗಾಗುತ್ತದೆ. ಆಗ ಎಂಎಸ್‌ಪಿ ದರದಲ್ಲಿ ರೈತರಿಂದ ಸರ್ಕಾರ ಕೊಳ್ಳಬೇಕಾಗುತ್ತದೆ. ರೈತರು ಬೆಳೆದುದೆಲ್ಲವನ್ನೂ ಸರ್ಕಾರ ಕೊಳ್ಳಬೇಕಾಗಿಲ್ಲ. ಮಾರುಕಟ್ಟೆಯ ಬೇಡಿಕೆಗಿಂತ ಹೆಚ್ಚಿಗಿರಬಹುದಾದ ದವಸಧಾನ್ಯ ಕೊಂಡರೆ ಸಾಕಾಗಬಹುದು. ಕೆಲವೊಮ್ಮೆ ಸ್ವಲ್ಪ ಹೆಚ್ಚು ಕೊಳ್ಳಬೇಕಾಗಬಹುದು. ಒಟ್ಟನಲ್ಲಿ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ದಾಸ್ತಾನು ಕಡಿಮೆ ಇರುವಂತೆ ನೋಡಿಕೊಳ್ಳಬೇಕು. ಆಗ ಬೆಲೆಗಳು ಏರುತ್ತವೆ. ರೈತರು ಮಾರುಕಟ್ಟೆಯಲ್ಲಿ ಮಾರಿಕೊಳ್ಳುತ್ತಾರೆ. ಹೀಗೆ ಎಂಎಸ್‌ಪಿ ಬಳಸಿ ಕೃಷಿಯಲ್ಲಿ ಬೆಲೆ ಸ್ಥಿರತೆಯನ್ನು ಸಾಧಿಸಬಹುದು.

ಕೆಲವೇ ಜನ ಎಂಎಸ್‌ಪಿಯ ಲಾಭ ಪಡೆದುಕೊಳ್ಳುತ್ತಿದ್ದಾರೆ. ಅದರಲ್ಲೂ ಗೋಧಿ ಮತ್ತು ಭತ್ತ ಬೆಳೆಯುವ ಕೆಲವು ರಾಜ್ಯಗಳಿಗೆ ಅನುಕೂಲವಾಗುತ್ತಿದೆ ಅನ್ನುವ ದೂರಿದೆ. ಹಾಗಾಗಲು ಕಾರಣಗಳಿವೆ. ಜನರಿಗೆ ಎಂಎಸ್‌ಪಿ ಕುರಿತು ಅರಿವಿನ ಕೊರತೆಯಿದೆ. ಸಂಗ್ರಹಣಾ ವ್ಯವಸ್ಥೆ ಸಮರ್ಪಕವಾಗಿಲ್ಲ. ಒಳ್ಳೆಯ ಬೆಂಬಲ ಬೆಲೆ ಸಿಗುತ್ತಿಲ್ಲ. ಎಂಎಸ್‌ಪಿಯನ್ನು ಇತರ ಬೆಳೆಗಳಿಗೂ ವಿಸ್ತರಿಸಿದರೆ ಹೆಚ್ಚಿನವರಿಗೆ ಈ ಸೌಲಭ್ಯ ಸಿಗುತ್ತದೆ. ಉಳಿದ ಬೆಳೆಗಳನ್ನು ಉತ್ತೇಜಿಸಿದಂತೆಯೂ ಆಗುತ್ತದೆ.

ರೈತ ಬೆಳೆದ ಬೆಳೆಗಳನ್ನೆಲ್ಲಾ ಸರ್ಕಾರ ಕೊಳ್ಳಬೇಕಾಗಿಲ್ಲ. ದೇಶದ ಹಿತದೃಷ್ಟಿಯಿಂದ ಕೆಲವನ್ನು ಉತ್ತೇಜಿಸಬೇಕಾಗುತ್ತದೆ. ಉದಾಹರಣೆಗೆ, ನಾವು ಶೇ 20ರಷ್ಟು ಬೇಳೆ ಕಾಳುಗಳನ್ನು, ಶೇಕಡ 70ಕ್ಕಿಂತ ಹೆಚ್ಚು ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಎಣ್ಣೆಕಾಳುಗಳು, ಬೇಳೆಕಾಳುಗಳನ್ನು ನಮ್ಮಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸಿದರೆ ಆಮದಿನ ಹೊರೆ ಕಡಿಮೆಯಾಗುತ್ತದೆ, ವಿದೇಶಿ ವಿನಿಮಯ ಉಳಿಯುತ್ತದೆ. ಅಷ್ಟೇ ಅಲ್ಲ ನಮ್ಮಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಮತ್ತು ಅಕ್ಕಿಯನ್ನು ಬೆಳೆಯಲಾಗುತ್ತಿದೆ. ರೈತರು ಬೇರೆ ಬೆಳೆಗಳನ್ನು ಬೆಳೆದರೆ ಈ ಸಮಸ್ಯೆಯೂ ಪರಿಹಾರವಾಗುತ್ತದೆ. ಎಂಎಸ್‌ಪಿಯ ಮೂಲಕ ರೈತರಿಗೆ ಒಳ್ಳೆಯ ಬೆಲೆ ಹಾಗೂ ಬೆಳೆದದ್ದು ಮಾರಾಟವಾಗುವ ಖಾತರಿ ಸಿಕ್ಕರೆ ಇದು ಸಾಧ್ಯವಾಗುತ್ತದೆ. ಎಂಎಸ್‌ಪಿಯಿಂದ ಇನ್ನೂ ಒಂದು ಅನುಕೂಲವಾಗುತ್ತಿದೆ. ರೈತರು ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಮತ್ತು ಭತ್ತವನ್ನು ಬೆಳೆಯುತ್ತಿರುವುದಕ್ಕೆ ಎಂಎಸ್‌ಪಿ ದೊರಕುತ್ತಿರುವುದೂ ಒಂದು ಕಾರಣ. ಅದರಿಂದಾಗಿ ನಮಗೆ ಆಹಾರ ಪದಾರ್ಥಗಳಲ್ಲಿ ಸ್ವಾವಲಂಬನೆ ಸಾಧ್ಯವಾಗಿದೆ. ಆಹಾರದ ಸುಭದ್ರತೆಗೆ ಸ್ವಾವಲಂಬನೆ ಅನಿವಾರ್ಯ. ಯಾವುದನ್ನು ಬೆಳೆಯಬೇಕು ಅನ್ನುವುದನ್ನು ಸಾಮಾಜಿಕ ಒಳಿತನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ನಿರ್ಧರಿಸಬೇಕು. ಇಂತಹ ಪ್ರಮುಖ ನಿರ್ಧಾರವನ್ನು ಮಾರುಕಟ್ಟೆಗೆ ಬಿಡುವುದು ಸರಿಯಲ್ಲ. ಆದರೆ ಕಾರ್ಪೊರೇಟ್ ಜಗತ್ತು ಸರ್ಕಾರದ ಮಧ್ಯಪ್ರವೇಶವನ್ನು ವಿರೋಧಿಸುತ್ತದೆ. ಅದಕ್ಕಾಗಿಯೇ ಅದು ಸಬ್ಸಿಡಿಯಂತಹ ನೆರವನ್ನು ಒಪ್ಪುವುದಿಲ್ಲ. ಡಬ್ಲ್ಯುಟಿಒದಂತಹ ಜಾಗತಿಕ ಸಂಸ್ಥೆಗಳೂ ರೈತರಿಂದ ಆಹಾರ ಪದಾರ್ಥಗಳನ್ನು ಬೆಂಬಲ ಬೆಲೆ ನೀಡಿ ಕೊಳ್ಳುವುದಕ್ಕೆ ಮಿತಿ ವಿಧಿಸುತ್ತವೆ. ಸರ್ಕಾರ ಇವುಗಳ ಒತ್ತಾಯಕ್ಕೆ ಮಣಿದು ಎಂಎಸ್‌ಪಿಯನ್ನು ಹಿಂತೆಗೆದುಕೊಳ್ಳಬಹುದು ಎನ್ನುವ ಆತಂಕ ರೈತರಿಗಿದೆ. ಅದೇ ಕಾರಣಕ್ಕೆ ಕೆಲವು ರೈತ ಸಂಘಟನೆಗಳು ಡಬ್ಲ್ಯುಟಿಒದಿಂದ ಹೊರಬರುವಂತೆ ಸರ್ಕಾರವನ್ನು ಒತ್ತಾಯಿಸುತ್ತಿವೆ.



ರೈತರಿಗೆ ಸರ್ಕಾರದ ಮೇಲೆ ವಿಶ್ವಾಸವಿಲ್ಲ. ಬೆಲೆಗಳು ಕುಸಿದು ರೈತರು ಸಂಕಟದಲ್ಲಿದ್ದಾಗ ಅವರ ನೆರವಿಗೆ ಬಾರದ ಸರ್ಕಾರ, ಬೆಲೆ ಸ್ವಲ್ಪ ಹೆಚ್ಚಿದ ಕೂಡಲೇ ರಫ್ತು ನಿಷೇಧಿಸಿತು. ಆಹಾರ ಉತ್ಪನ್ನಗಳನ್ನು ಆಮದು ಮಾಡಿಕೊಂಡಿತು. ಗೋದಾಮಿನಲ್ಲಿ ಸಂಗ್ರಹಿಸಿ ಇಟ್ಟಿದ್ದನ್ನು ಕಡಿಮೆ ಬೆಲೆಗೆ ಮಾರಿತು. ಬೆಲೆ ಇಳಿಸಲು ಸಕಲ ಪ್ರಯತ್ನವನ್ನೂ ಮಾಡಿತು. ಸಹಜವಾಗಿಯೇ ರೈತರಿಗೆ ಸರ್ಕಾರ ತಮ್ಮ ಹಿತವನ್ನು ಕಾಪಾಡುತ್ತದೆ ಎಂಬ ನಂಬಿಕೆಯಿಲ್ಲ. ರೈತರ ನೋವನ್ನು ಸರ್ಕಾರ ಕೇಳಿಸಿಕೊಳ್ಳಬೇಕು.

ಎಂಎಸ್‌ಪಿ ಯಾಕೆ ಅನ್ನುವುದು ಈಗ ಪ್ರಶ್ನೆಯಾಗಬಾರದು, ಹೇಗೆ ಅನ್ನುವುದಷ್ಟೇ ಪ್ರಶ್ನೆಯಾಗಬೇಕು. ಕೆಲವರ ಪ್ರಕಾರ, ಆಹಾರಧಾನ್ಯಗಳನ್ನು ರೈತರಿಂದ ಕೊಳ್ಳುವ ಬದಲು ಮಾರುಕಟ್ಟೆ ಬೆಲೆ ಹಾಗೂ ಎಂಎಸ್‌ಪಿ ನಡುವಿನ ವ್ಯತ್ಯಾಸವನ್ನು ನಗದಿನಲ್ಲಿ ರೈತರಿಗೆ ಕೊಡುವುದು ಒಳ್ಳೆಯದು. ಜೀನ್ ಡ್ರೀಜ್ ಹೇಳುವಂತೆ, ಸಲಹೆಯು ತಾರ್ಕಿಕವಾಗಿ ಸರಿಯಾಗಿಯೇ ಇರಬಹುದು. ಆದರೆ ವಾಸ್ತವದಲ್ಲಿ ಏನಾಗುತ್ತದೆ ಅನ್ನುವುದೂ ಮುಖ್ಯವಾಗುತ್ತದೆ. ಮಧ್ಯಪ್ರದೇಶದಲ್ಲಿ ಇದನ್ನು ನೋಡಿಯಾಗಿದೆ. ಮಾರುಕಟ್ಟೆ ಬೆಲೆ ಹಾಗೂ ಎಂಎಸ್‌ಪಿ ನಡುವಿನ ವ್ಯತ್ಯಾಸವನ್ನು ಹಿಗ್ಗಿಸಿ ವ್ಯಾಪಾರಿಗಳು ಲಾಭ ಮಾಡಿಕೊಂಡರು. ಹಾಗಾಗಿ, ಇದನ್ನು ಒಂದೇ ವರ್ಷದಲ್ಲಿ ನಿಲ್ಲಿಸಬೇಕಾಯಿತು. ನಗದು ರೂಪದಲ್ಲಿ ಪರಿಹಾರ ನೀಡುವುದು ಸರಳವಾದ, ಸುಲಭವಾದ ಕ್ರಮವಾಗಿ ಕಂಡರೂ ಸದ್ಯದ ಪರಿಸ್ಥಿತಿಯಲ್ಲಿ ಎಂಎಸ್‌ಪಿಯನ್ನು ಬಲಪಡಿಸುವುದು ಒಳ್ಳೆಯದು.

ರೈತರು, ಅವರ ಮಕ್ಕಳು ಚೆನ್ನಾಗಿರಬೇಕು ಅನ್ನುವುದರಲ್ಲಿ ಗ್ರಾಹಕರಾದ ನಮ್ಮ ಸ್ವಂತ ಹಿತಾಸಕ್ತಿಯೂ ಇದೆ.

ಚುರುಮುರಿ



ಕುರ್ಚಿ ಭಾಗ್ಯವನರಸಿ...

• ಸುಮಂಗಲಾ

‘ಶಿವಮೊಗ್ಗದ ಅಭಯಾರಣ್ಯದೊಳು ಕುಳಿತು ಹುಲಿಯು ಅಬ್ಬರಿಸುತಿದೆ ಕೇಳಾ’ ಬೆಕ್ಕಣ್ಣ ಯಕ್ಷಗಾನದ ಶೈಲಿಯಲ್ಲಿ ಹೇಳುತ್ತಿತ್ತು.

‘ರಾಜಾಹುಲಿ ಶಿಕಾರಿಪುರದ್ದು, ಮರಿರಾಜಾಹುಲಿ ಶಿವಮೊಗ್ಗ ನಗರದ್ದು, ಇನ್ನ ಹುಲಿಯಾ ಮೈಸೂರು ಕಡೇದು... ಇದ್ಯಾವುದಲೇ ಅಭಯಾರಣ್ಯದ ಹುಲಿ?’ ನನಗೆ ಅಚ್ಚರಿ.

‘ಇದು ಹೊಸ ಹುಲಿ. ಯಾರಿಗೂ ಹೆದರದೇ ಬೆದರದೇ ಪಕ್ಷೇತರವಾಗಿ ಸ್ಪರ್ಧಿಸಿ, ಗೆದ್ದು, ಆಮೇಲೆ ಕಮಲಕ್ಕನ ಮನೆಗೆ ಹೋಗೋ ಪ್ಲಾನು ಹಾಕಿರುವ ಹೊಸ ಹುಲಿ ನಮ್ಮ ಈಶೂ ಮಾಮ’ ಎಂದು ಬೆಕ್ಕಣ್ಣ ಮೀಸೆ ತಿರುವುತ್ತ ಹೇಳಿತು.

‘ಅಲ್ಲಲೇ... ಶಿವಮೊಗ್ಗದಾಗೆ ಕಮಲ ಬಿಟ್ಟರೆ ಬ್ಯಾರೆ ಯಾವುದಾದರೂ ಹೂ ಅರಳತೈತೆ ಅಂದುಕೊಳ್ಳದೇ ಮಹಾ ಮೂರ್ಖತನ’ ಎಂದೆ.

‘ಎನ್ನ ತೂಕಕ್ಕೆ ಸಮನಾರಿಹರು ಅಂತ ಈಶೂ ಮಾಮ ಅಬ್ಬರಿಸಿದ್ದನ್ನು ಕೇಳಿಲ್ಲೇನು?’ ಬೆಕ್ಕಣ್ಣ ಗುಡುಗಿತು.

‘ಈಶೂ ಮಾಮ ದೇಹದ ತೂಕ ಅಂತ ಹೇಳಿರಬೇಕು. ನನ್ನ ಭಾರತ, ನನ್ನ ಪರಿವಾರ ಅಂತ ಮೋದಿಮಾಮನ ಹೊಸ ವಿಡಿಯೊ ಬಂದೈತಿ. ನಾನು ಮೋದಿಯ ಪರಿವಾರ ಅಂತ ಭಾಳ ಮಂದಿ ಅದ್ರಾಗೆ ಹಾಡ್ಯಾರೆ. ಟಿಕೀಟು ಕೊಟ್ಟಿಲ್ಲ ಅಂತ ಧುಮುಧುಮುಗುಡವ್ರು, ಈಶೂ ಮಾಮನ ಹಂಗೆ ಪಕ್ಷೇತರವಾಗಿ ನಿಂತು ಗೆಲ್ಲತೀವಂತ ಅಬ್ಬರಿಸೋರು ಈ ಪದ ಹಾಡಂಗಿಲ್ಲೇನು?’

‘ಸೆಟಗಂಡವ್ರು ಹಾಡದಿದ್ದರೆ ಏನಾತು, ಹೊಸದಾಗಿ ಬಂದವ್ರು ಹಾಡ್ತಾರೆ. ಇಲ್ಲಿ ನಮ್ ಕುಮಾರಣ್ಣ, ಬಿಹಾರದಾಗೆ ನಿತೀಶಂಕಲ್ಲು ನಾವೇ ಮೋದಿಯ ಪರಿವಾರ ಅಂತ ಹಾಡ್ತಿದಾರೆ. ನೋಡ್ತಿರು... ಇನ್ನೊಂದೆರಡು ವಾರದಾಗೆ ಇನ್ನೆಷ್ಟು ತೆಲಿಗಳು ನಾ ಮೋದಿಯ ಪರಿವಾರ ಹಾಡು ಹಾಡತಾವೆ ಅಂತ’.

‘ಪಾಪ... ಕಮಲಕ್ಕನ ಪರಿವಾರದವರು ಹೇಳಿದ್ದಕ್ಕೆಲ್ಲ ತಲೆಯಾಡಿಸ್ತಾ ಕುಮಾರಣ್ಣಂಗೆ ಕತ್ತು ನೋವು ಬಂದಿರಬಕು’.

‘ಏನಿಲ್ಲೇಳು... ಮಣಭಾರದ ರಾಗಿ ತೆನಿ ಹೊತ್ತು ಕತ್ತು ಉಳುಕಿತ್ತಂತೆ. ಈಗ ತೆನಿ ಬಿಟ್ಟಾಕಿ, ಹತ್ತಿ ಹಗುರಿನ ಕಮಲ ಹಿಡಿದ ಮುಖದಾಗೆ ಎಷ್ಟ್ ನಗು ಐತಿ! ನಾ ಕಮಲ ಪರಿವಾರ ಅಂದವರಿಗೇ ಕುರ್ಚಿಯ ಸೌಭಾಗ್ಯ ಅನ್ನೂದು ಎಲ್ಲಾರಿಗೂ ಮನದಟ್ಟಾಗೈತಿ’ ಬೆಕ್ಕಣ್ಣ ಹ್ಹೆಹ್ಹೆಗುಟ್ಟಿತು.

ಸಂಗತ

ಹದಿಹರೆಯ: ಬೇಕಿದೆ ಸಹಾಯ

ಹದಿಹರೆಯದ ಮಕ್ಕಳ ವಯೋಸಹಜ ವರ್ತನೆಗಳ ಹಿಂದಿನ ಕಾರಣಗಳನ್ನು ಅರಿತು ಶಿಕ್ಷಕರು ಹಾಗೂ ಪೋಷಕರು ಅದಕ್ಕೆ ತಕ್ಕಂತೆ ಸ್ಪಂದಿಸಬೇಕು

• ಎಚ್.ಬಿ.ಚಂದ್ರಶೇಖರ್

ಕೆಲ ದಿನಗಳ ಹಿಂದೆ ಪ್ರೌಢಶಾಲೆಯೊಂದಕ್ಕೆ ಭೇಟಿ ನೀಡಿದ್ದಾಗ ಗಮನಿಸಿದ ಅಂಶ ನನ್ನನ್ನು ಚಿಂತನೆಗೆ ಹಚ್ಚಿತು. ಕೆಲ ಶಿಕ್ಷಕರು ಆಯ್ದ ಕೆಲ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಲಘು ಶಿಕ್ಷೆ ನೀಡುತ್ತಿದ್ದುದನ್ನು ಗಮನಿಸಿದೆ. ಈ ಬಗ್ಗೆ ಪ್ರಸ್ತಾಪಿಸದೇ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುತ್ತಾ ಹೋದಂತೆ ವಿಷಯದ ಅರಿವಾಯಿತು. ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಹೊಂದಿರುವ ಬಿಗಿ ಧೋರಣೆಯ ಪರಿಣಾಮ, ಶಿಕ್ಷಕರು ಹಾಗೂ ಕೆಲ ವಿದ್ಯಾರ್ಥಿಗಳ ನಡುವೆ ಕಂದಕ ಸೃಷ್ಟಿಯಾಗಿದೆ. ವಿದ್ಯಾರ್ಥಿಗಳನ್ನು ಶಿಸ್ತಿಗೆ ಒಳಪಡಿಸುವ ಪ್ರಯತ್ನಗಳು ಫಲ ಕೊಡದೇ ತಿರುಗುಬಾಣವಾಗಿ ಕೆಲಸ ಮಾಡಿವೆ. ವಿದ್ಯಾರ್ಥಿಗಳು ಶಾಲೆಯ ಡೆಸ್ಕ್, ತರಗತಿ ಕೋಣೆಯ ಸ್ವಿಚ್, ಪ್ರೊಜೆಕ್ಟರ್ ಸಂಪರ್ಕಿಸುವ ವೈರ್‌ಗಳನ್ನು ಹಾಳು ಮಾಡುವಂತಹ ಹಾನಿಕಾರಕ ಚಟುವಟಿಕೆಗಳನ್ನು ಮಾಡುತ್ತಿರುವ ಬಗ್ಗೆ ತಿಳಿಯಿತು.

ಶಾಲೆಯ ತರಗತಿ ಕೋಣೆಗಳಲ್ಲಿ ಶುಚಿತ್ವ ಕಾಪಾಡುವ ವಿಷಯದಲ್ಲಿ ಶಿಕ್ಷಕರಿಗೆ ಸಹಕಾರ ನೀಡದೆ ಪೇಪರ್, ಚಾಕೊಲೇಟ್ ಹಾಳೆ, ಪೆನ್ಸಿಲ್ ಚೂಪು ಮಾಡಿದಾಗ ಬರುವ ಚೂರುಗಳನ್ನು ಎಲ್ಲೆಡೆ ಬಿಸಾಕುತ್ತಾರೆ. ಇದನ್ನು ಹತ್ತನೇ ತರಗತಿಯೊಂದರಲ್ಲಿ ನಾನು ಪ್ರಸ್ತಾಪಿಸುತ್ತಾ, ‘ನಿಮ್ಮ ತರಗತಿ ದೇವಾಲಯವಿದ್ದಂತೆ. ದೇವಸ್ಥಾನ, ಚರ್ಚ್, ಮಸೀದಿಯಲ್ಲಿ ನಾವು ಸ್ವಚ್ಛತೆ ಕಾಣುತ್ತೇವೆ ಅಲ್ಲವೇ? ನಿಮ್ಮ ಮನೆಯ ಪೂಜಾಗೃಹವೂ ಸ್ವಚ್ಛವಾಗಿರುತ್ತದೆ. ವಿದ್ಯೆಯನ್ನು ಪಡೆಯುವ ಈ ಜಾಗವೂ ಪವಿತ್ರವಾದ ದೇವಾಲಯದಂತೆ. ಇದನ್ನು ನಾವು ಸ್ವಇಚ್ಛೆಯಿಂದ ಶುಚಿಯಾಗಿ ಇಟ್ಟುಕೊಳ್ಳಬೇಕಲ್ಲವೇ?’ ಎಂದು ಕೇಳಿದೆ. ಅವರೊಂದಿಗೆ ಸಂವಾದಿಸುತ್ತಾ ಒಂದಷ್ಟು ಪ್ರೀತಿ, ಆತ್ಮೀಯತೆಯಿಂದ ತಿಳಿಹೇಳಿದೆ. ಮುಖ್ಯ ಶಿಕ್ಷಕರು ಹಾಗೂ ತರಗತಿ ಶಿಕ್ಷಕರ ಗಮನವನ್ನೂ ಸ್ವಚ್ಛತೆಯ ಪ್ರಾಮುಖ್ಯತೆಯತ್ತ ಸೆಳೆದೆ. ಶಾಲೆಯ ಭೇಟಿ ಮುಗಿಸಿ ಹೊರಡುವ ವೇಳೆ ಒಬ್ಬ ವಿದ್ಯಾರ್ಥಿ ನನ್ನ ಬಳಿ ಬಂದು ‘ಸರ್, ಈಗ ನಮ್ಮ ತರಗತಿ ನೋಡಬನ್ನಿ’ ಎಂದ. ನಾನು ತರಗತಿ ಕೋಣೆಯ ಶುಚಿತ್ವ ನೋಡಿ ಬೆರಗಾದೆ. ‘ಸರ್, ಶಾಲೆಯ ಸ್ವಚ್ಛತಾ ಕೆಲಸಗಾರರ ಜೊತೆ ನಾವೂ ಕೈಜೋಡಿಸಿ ಶುಚಿ ಮಾಡಿದ್ದೇವೆ. ಇನ್ನು ಮುಂದೆ ಕಸವನ್ನು ಎಲ್ಲೆಂದರಲ್ಲಿ ಎಸೆಯುವುದಿಲ್ಲ, ಸ್ವಚ್ಛತೆ ಕಾಪಾಡುತ್ತೇವೆ’ ಎಂದ.

ಸಾಮಾನ್ಯವಾಗಿ ಪ್ರೌಢಶಾಲೆಗಳಲ್ಲಿ ಸ್ವಲ್ಪ ಹಿರಿಯ ವಿದ್ಯಾರ್ಥಿಗಳೊಂದಿಗೆ ಒಡನಾಡುವಾಗ ಶಿಕ್ಷಕರು ಸೂಕ್ಷ್ಮವಾಗಿ ವರ್ತಿಸದೇ ಇರುವುದು ಕಂಡುಬರುತ್ತದೆ. ಬಿ.ಇಡಿಯಲ್ಲಿ ಸೈದ್ಧಾಂತಿಕವಾಗಿ ಕಲಿತ ಶೈಕ್ಷಣಿಕ ಮನೋವಿಜ್ಞಾನದ ಪಾಠವನ್ನು ಶಿಕ್ಷಕರಾದ ಮೇಲೆ ಪ್ರಾಯೋಗಿಕವಾಗಿ ಅನುಸರಿಸಲು ಕೆಲವರು ಮುಂದಾಗುವುದಿಲ್ಲ. ಆಗ ಶಿಕ್ಷಕ-ವಿದ್ಯಾರ್ಥಿಗಳ ಗುಂಪುಗಳು ‘ನಾನೊಂದು ತೀರ, ನೀನೊಂದು ತೀರ’ ಎಂಬಂತಾಗಿಬಿಡುವ ಅಪಾಯ ಇರುತ್ತದೆ.

ಪ್ರಾಥಮಿಕ ಶಾಲೆಯಲ್ಲಿ ನಲಿ-ಕಲಿ ಪದ್ಧತಿಯಡಿ ಆಪ್ತವಾಗಿ ಮಕ್ಕಳೊಂದಿಗೆ ಒಡನಾಡುತ್ತಾ ಕಲಿಸುವ ಶಿಕ್ಷಕರು, ಮಕ್ಕಳು ಬೆಳೆಯುತ್ತಾ ಹೋದಂತೆ ಅವರಲ್ಲಿ ಮೊಳೆಯುವ ಸ್ವಂತಿಕೆ, ಸ್ವಾಭಿಮಾನದ ಗುಣಗಳಿಗೆ ಮನ್ನಣೆ ನೀಡುವುದನ್ನು ಕಲಿಯದಿದ್ದಾಗ ಸಮಸ್ಯೆ ಸೃಷ್ಟಿಯಾಗುತ್ತದೆ. ಅದರಲ್ಲೂ ಮಕ್ಕಳು 9 ಅಥವಾ 10ನೇ ತರಗತಿ ತಲುಪಿದಾಗ ಅವರಲ್ಲುಂಟಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳಿಗೆ ತಕ್ಕಂತೆ ಒಡನಾಡಬೇಕಾದ ಸೂಕ್ಷ್ಮ ಮನೋಭಾವ, ಸಂವೇದನೆಗಳನ್ನು ಶಿಕ್ಷಕರು ಹೊಂದುವುದು ಅನಿವಾರ್ಯವಾಗುತ್ತದೆ. ಈ ಹಂತದಲ್ಲಿ ಮಕ್ಕಳೊಂದಿಗೆ ಸ್ನೇಹ, ಪ್ರೀತಿಯಿಂದ ವರ್ತಿಸಿದಷ್ಟೂ ಅವರು ಶಿಕ್ಷಕರಿಗೆ ಹತ್ತಿರವಾಗುತ್ತಾರೆ. ಹದಿಹರೆಯದ ಮಕ್ಕಳು ವಯೋಸಹಜವಾಗಿ ತೋರುವ ವರ್ತನೆಗಳಿಗೆ ತಕ್ಕಂತೆ ಶಿಕ್ಷಕರು ಹಾಗೂ ಪೋಷಕರು ಸ್ಪಂದಿಸಬೇಕಾದ ವಿಧಾನ, ಕೌಶಲಗಳನ್ನು ಅರಿಯಬೇಕು. ಇಲ್ಲದೇ ಹೋದಲ್ಲಿ ಪೋಷಕರು ಹಾಗೂ ಶಿಕ್ಷಕರಿಂದ ಮಕ್ಕಳು ದೂರ ಸರಿಯುತ್ತಾ ಹೋಗುತ್ತಾರೆ. ಇದರಿಂದ ಮಕ್ಕಳ ಭವಿಷ್ಯ ಮಸುಕಾಗುವ ಅಪಾಯ ಇರುತ್ತದೆ.



ಭಾವನೆಗಳ ನಿರ್ವಹಣೆ, ಪ್ರತಿರೋಧಗಳ ಸ್ವನಿಯಂತ್ರಣ, ನಿರ್ಧಾರ ಕೈಗೊಳ್ಳುವಂತಹ ಕಾರ್ಯಗಳಿಗೆ ನೆರವಾಗುವ ಮೆದುಳಿನ ಭಾಗ ಹದಿಹರೆಯದವರಲ್ಲಿ ಪೂರ್ಣವಾಗಿ ಬೆಳವಣಿಗೆಯಾಗದ ಕಾರಣ ಅವರು ವಿಭಿನ್ನವಾಗಿ ವರ್ತಿಸುತ್ತಾರೆ. ಇದರಿಂದ ಪರಿಣಾಮಗಳ ಅರಿವಿಲ್ಲದೆ ಪೋಷಕರು ಹಾಗೂ ಶಿಕ್ಷಕರಿಗೆ ಎದುರು ಮಾತನಾಡುವುದು, ಅವಿಧೇಯವಾಗಿ ವರ್ತಿಸುವುದನ್ನು ಮಾಡುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ತಮ್ಮ ಅಹಂಗೆ ಗಾಸಿಯಾದ ವಯಸ್ಕರೂ ಕೆರಳಿ ನಿಂತರೆ ಪರಿಸ್ಥಿತಿ ಹದಗೆಡುತ್ತದೆ. ಶಿಕ್ಷಕರು ಹಾಗೂ ಪೋಷಕರಿಗಿರುವ ಅಧಿಕಾರಸ್ಥ ಸ್ಥಾನದ ಕಾರಣ ಅವರು ವಿಧಿಸುವ ನಿಯಮವನ್ನು ತೋರಿಕೆಗಾಗಿ ಪಾಲಿಸಿದಂತೆ ಕಾಣುತ್ತದೆ. ಶಿಕ್ಷಕರು, ಪೋಷಕರ ಅನುಪಸ್ಥಿತಿಯಲ್ಲಿ ವಸ್ತುಗಳನ್ನು ಹಾಳು ಮಾಡುವುದು ಅಥವಾ ಸ್ನೇಹಿತರೊಂದಿಗೆ ಗುಂಪು ಸೇರಿಕೊಂಡು ಅಶಿಸ್ತಿನಿಂದ ವರ್ತಿಸುವುದು ಮಾಡುತ್ತಾರೆ.

ಹದಿಹರೆಯದವರ ವರ್ತನೆಗೆ ನಮ್ಮ ಕಟುಮಾತು, ವರ್ತನೆಯಿಂದ ಪ್ರತಿಕ್ರಿಯಿಸದೆ ತಾಳ್ಮೆ ವಹಿಸುವುದನ್ನು ಕಲಿಯಬೇಕು. ಶಾಂತ ಪರಿಸ್ಥಿತಿಯಲ್ಲಿ ಅವರೊಂದಿಗೆ ಸಂವಹನ ಮಾಡಬೇಕು. ಅವರಲ್ಲಿರುವ ಉತ್ತಮ ವರ್ತನೆಗಳನ್ನು ಗುರುತಿಸಿ, ಪ್ರಶಂಸಿಸಬೇಕು. ಗುಂಪಿನಲ್ಲಿ ತೀವ್ರ ಅಶಿಸ್ತು ತೋರುವ ವಿದ್ಯಾರ್ಥಿಯೊಡನೆ ವೈಯಕ್ತಿಕವಾಗಿ ಆತ್ಮೀಯತೆಯಿಂದ ಸಮಾಲೋಚಿಸಬೇಕು. ಸಂದಿಗ್ಧ, ಉದ್ವೇಗ, ಆತಂಕದ ಗೂಡಿನಂತಿರುವ ಹದಿಹರೆಯದವರಿಗೆ ಸಹಾಯ ಬೇಕಿರುತ್ತದೆಯೇ ವಿನಾ ಶಿಕ್ಷೆಯಲ್ಲ ಎಂಬುದನ್ನು ಮನಗಾಣಬೇಕು.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಮಾರಕವೇ ಪ್ರೇರಕವಾಗುವ ಈ ಬಗೆ!

ಲೋಕಸಭಾ ಚುನಾವಣೆ ವೇಳಾಪಟ್ಟಿ ಹೊರಬಿದ್ದಿದೆ. ಚುನಾವಣೆಗಳು ಪ್ರಜಾಪ್ರಭುತ್ವದ ಹಬ್ಬ. ಅತಿ ಹೆಚ್ಚು ಮತದಾನ ಆದಾಗ ಅದು ಪ್ರಜಾಪ್ರಭುತ್ವದ ಯಶಸ್ಸಿನ ಸೂಚನೆ ಎಂದು ಮಾಧ್ಯಮಗಳು ಬಣ್ಣಿಸುತ್ತವೆ. ಹಣ, ಮದ್ಯ, ಜಾತಿಪ್ರೇಮ ಪ್ರಜಾಪ್ರಭುತ್ವಕ್ಕೆ ಮಾರಕ ಎಂಬ ಸಿದ್ಧಾಂತವನ್ನು ಎಲ್ಲರೂ ಪ್ರತಿಪಾದಿಸುತ್ತೇವೆ. ಆದರೆ ವಾಸ್ತವ ಇದಕ್ಕೆ ತದ್ವಿರುದ್ಧವಾಗಿದೆ.

ಅತಿಹೆಚ್ಚು ಹಣ, ಮದ್ಯದ ಹೊಳೆ ಹರಿಯುವ ಕ್ಷೇತ್ರಗಳಲ್ಲಿ ಶೇಕಡಾವಾರು ಅತಿ ಹೆಚ್ಚು ಮತದಾನವಾಗುವುದು ಸರ್ವವಿದಿತ. ಅಂದರೆ ಯಾವುದನ್ನು ನಾವು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಕರೆಯುತ್ತೇವೆಯೋ ಅದೇ ಹಣ, ಮದ್ಯ, ಜಾತಿಪ್ರೇಮವು ಜನಸಾಮಾನ್ಯರು ಚುನಾವಣೆಗಳಲ್ಲಿ ಉತ್ಸಾಹದಿಂದ ಭಾಗವಹಿಸಲು ಮುಖ್ಯ ಪ್ರೇರಣೆ ಆಗಿ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗಿರುವುದು ವಿಪರ್ಯಾಸದ ಸಂಗತಿ.

ಟಿ.ಜಯರಾಂ, ಕೋಲಾರ

ಅಕಾಡೆಮಿಗಳು ದಕ್ಷತೆಯಿಂದ ಕೆಲಸ ಮಾಡಲಿ

ಸರ್ಕಾರ ಕಡೆಗೂ ವಿವಿಧ ಅಕಾಡೆಮಿಗಳಿಗೆ ಪದಾಧಿಕಾರಿಗಳನ್ನು ನೇಮಿಸಿದೆ (ಪ್ರ.ವಾ., ಮಾರ್ಚ್ 17). ಕರ್ನಾಟಕ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವ ಹಾಗೂ ನಮ್ಮ ಎಲ್ಲ ಪ್ರಕಾರದ ಕಲೆಗಳು ಮತ್ತು ಕಲಾವಿದರನ್ನು ಉತ್ತೇಜಿಸುವ ಗುರುತರವಾದ ಹೊಣೆ ಅಕಾಡೆಮಿಗಳಿಗೆ ಇರುತ್ತದೆ. ಈ ಅಕಾಡೆಮಿಗಳು ರಾಜಕಾರಣಿಗಳ ಕೈಗೊಂಬೆಗಳಂತಾಗದೆ, ತಮ್ಮ ಕಾರ್ಯನಿರ್ವಹಣೆಯಲ್ಲಿ ರಾಜಕೀಯ ಬೆರೆಸದೆ, ನಮ್ಮ ಭಾಷೆ, ಸಂಸ್ಕೃತಿಯನ್ನು ಪೋಷಿಸುವ ಕಾರ್ಯ ಮಾಡಬೇಕಿದೆ. ಈ ಅಕಾಡೆಮಿಗಳು ಮನಸ್ಸು ಮಾಡಿದಲ್ಲಿ ಕರ್ನಾಟಕ ಹಾಗೂ ಕನ್ನಡ ಸಂಸ್ಕೃತಿಯನ್ನು ರಾಜ್ಯದಲ್ಲಿ ಮಾತ್ರವಲ್ಲದೆ ದೇಶದ ಮೂಲೆ ಮೂಲೆಗೂ ಹಬ್ಬಿಸಬಹುದಾದ ಕಾರ್ಯ ಮಾಡುವುದು ಕಷ್ಟವೇನಲ್ಲ. ಇವು ಈ ದಿಸೆಯಲ್ಲಿ ಕೆಲಸ ಮಾಡಲಿ.

ಕಡೂರು ಫಣಿಶಂಕರ್, ಬೆಂಗಳೂರು

ಜನಾನುರಾಗಿಗಳು ತರಲಿ ಸುಧಾರಣೆ

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಹೃದ್ರೋಗ ತಜ್ಞ ಡಾ. ಸಿ.ಎನ್.ಮಂಜುನಾಥ್ ಅವರು ಈ ಬಾರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸುತ್ತಿರುವುದಕ್ಕೆ, ಈ ಇಬ್ಬರೂ ರಾಜಕೀಯಕ್ಕೆ ಬರದೆ ‘ಮಾದರಿ ಪ್ರಜೆಗಳಾಗೇ ಇರಲಿ’ ಎಂದು ಶ್ರೀಕಂಠ ಎಂಬುವರು ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಮಾರ್ಚ್ 15). ‘ಇಂದು ರಾಜಕೀಯ ಕ್ಷೇತ್ರ ಹೊಲಸಾಗಿದೆ, ಎಲ್ಲರೂ ಭ್ರಷ್ಟರೆ, ಈ ಕ್ಷೇತ್ರಕ್ಕೆ ಅರ್ಹರು, ಪ್ರಜ್ಞಾವಂತರು, ಪ್ರಾಮಾಣಿಕರು ಬರಬೇಕು’ ಎಂಬ ಮಾತನ್ನು ನಾವು ಕೇಳುತ್ತಲೇ ಬರುತ್ತಿದ್ದೇವೆ. ಈ ದೃಷ್ಟಿಯಿಂದ, ಸಮಾಜದಲ್ಲಿ ಉತ್ತಮ ಕೆಲಸ ಮಾಡಿ ಜನಾನುರಾಗಿಯಾಗಿರುವ ಮತ್ತು ಗೌರವ ಸಂಪಾದಿಸಿರುವ ಮಹನೀಯರು ಚುನಾವಣಾ ಕಣಕ್ಕೆ ಇಳಿಯುವುದರಲ್ಲಿ ತಪ್ಪೇನೂ ಇಲ್ಲ. ಇಂತಹವರು ಗೆದ್ದು ಬಂದರೆ, ಹೊಲಸಾಗಿರುವ ಕ್ಷೇತ್ರ ಸ್ವಲ್ಪವಾದರೂ ಸುಧಾರಿಸಬಹುದೇನೊ?

ಎಚ್.ವಿ.ಶ್ರೀಧರ್, ಬೆಂಗಳೂರು

ಹೆಚ್ಚಬೇಕು ಬೋಗಿ ಜನಹಿತಕ್ಕಾಗಿ

ಕಲಬುರಗಿ– ಬೆಂಗಳೂರು ನಡುವೆ ‘ವಂದೇಭಾರತ್’ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭವಾಗಿದೆ. ಈ ರೈಲಿನ ಬದಲು, ದಶಕದ ಕೂಗಾದ, ಈಗಾಗಲೇ ಇರುವ ಉದ್ಯಾನ್ ಎಕ್ಸ್‌ಪ್ರೆಸ್, ಸೋಲಾಪುರ ಎಕ್ಸ್‌ಪ್ರೆಸ್‌ನಂತಹ ರೈಲುಗಳಿಗೆ ಸಾಮಾನ್ಯ ದರ್ಜೆ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಆದ್ಯತೆ ನೀಡಿದ್ದಲ್ಲಿ ಅನುಕೂಲವಾಗುತ್ತಿತ್ತು.

ವಂದೇಭಾರತ್ ಯಾರ ಹಿತಕ್ಕಾಗಿ? ಸಾಮಾನ್ಯ ಜನರು ಈ ಸೇವೆಯನ್ನು ದಕ್ಕಿಸಿಕೊಳ್ಳಬಹುದೇ? ದಿನನಿತ್ಯ ಜನರಲ್ ಬೋಗಿಯಲ್ಲಿ ಕುಳಿತುಕೊಳ್ಳಲು ಆಸನ ಸಿಗದೇ ಹೊಡೆದಾಡುವ ವೈರಲ್ ವಿಡಿಯೊಗಳು, ಪಾಯಿಖಾನೆಗಳ ಎದುರು ಮಲಗಿ ಪ್ರಯಾಣ ಮಾಡುವವರ ಫೋಟೊಸಹಿತ ಸುದ್ದಿಗಳು ನಿಮ್ಮ ಕಣ್ಣಿಗೆ ಕಾಣಿಸುತ್ತಿಲ್ಲವೇ? ಬಹುಸಂಖ್ಯಾತರ ಹಿತಕ್ಕಾಗಿ ಬೋಗಿಗಳನ್ನು ಹೆಚ್ಚಿಸಿ ಜನರ ಹಿತ ಕಾಪಾಡಿ.

ರೇಣುಕಾ ಹನ್ನೂರ್, ಕಲಬುರಗಿ

₹ 10ರ ನಾಣ್ಯ: ಮೌಢ್ಯವೊಂದೇ ಸಮಸ್ಯೆಯಲ್ಲ

‘₹ 10ರ ನಾಣ್ಯ ಹೇಳುವುದೇನು?’ ಎಂಬ ಎಚ್.ಕೆ.ಶರತ್ ಅವರ ಲೇಖನದಲ್ಲಿ (ಸಂಗತ, ಮಾರ್ಚ್ 13), ಅಂಗಡಿಯವರು ಕೊಟ್ಟಿದ್ದ ₹ 10ರ ನಾಣ್ಯವನ್ನು ಹುಡುಗ ವಾಪಸ್ ತಂದುಕೊಟ್ಟ ಉದಾಹರಣೆ ನೀಡಲಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಒಂದು ಅಂಗಡಿಯವರು ಕೊಟ್ಟದ್ದನ್ನು ಇನ್ನೊಂದು ಅಂಗಡಿಯವರು ತಿರಸ್ಕರಿಸಿದ್ದು. ಇದರಿಂದ ಜನಸಾಮಾನ್ಯರು ₹ 10ರ ನಾಣ್ಯವನ್ನು ಪಡೆಯಲು ಹಿಂಜರಿಯುತ್ತಿರುವುದು, ₹ 10ರ ನಾಣ್ಯ ಅವರಲ್ಲಿ ಒಂದು ರೀತಿ ಆಧುನಿಕ ಮೌಢ್ಯವನ್ನು ಸೃಷ್ಟಿಸಿರುವುದು ತಿಳಿಯುತ್ತದೆ.

ಅದೇನೇ ಇರಲಿ, ₹ 10ರ ನಾಣ್ಯದೊಂದಿಗೆ ವ್ಯವಹರಿಸುವುದು ಸ್ವಲ್ಪಮಟ್ಟಿಗೆ ಕಷ್ಟಕರ ಎಂಬುದೂ ನಿಜ. ನಾವು 10 ರೂಪಾಯಿಯ ಯಾವುದಾದರೂ ವಸ್ತುವನ್ನು ಕೊಳ್ಳಲು ಅಥವಾ 10 ರೂಪಾಯಿಯ ಬಸ್ ಟಿಕೆಟ್ ಕೊಳ್ಳಲು ₹ 50ರ ನೋಟನ್ನು ನೀಡಿದಾಗ ಅವರು ಮರಳಿ 40 ರೂಪಾಯಿ ಚಿಲ್ಲರೆಗೆ ₹ 10ರ ನಾಲ್ಕು ನಾಣ್ಯಗಳನ್ನು ಕೊಟ್ಟರೆ, ಅವನ್ನು ಶರ್ಟ್ ಅಥವಾ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ₹ 10 ಕೊಟ್ಟು ₹ 5ರ ವಸ್ತುವೊಂದನ್ನು ಕೊಂಡಾಗ ದೊರೆಯುವ ಒಂದು, ಎರಡು ಅಥವಾ ಐದು ರೂಪಾಯಿಯ ನಾಣ್ಯಗಳನ್ನು ಇಟ್ಟುಕೊಳ್ಳುವುದು ಅಷ್ಟು ಕಷ್ಟ ಎನಿಸಲಾರದು. ಹಾಗೆಯೇ ₹ 100 ಕೊಟ್ಟು ₹ 20ಕ್ಕೆ ತರಕಾರಿ ಕೊಂಡಾಗ ಆತ 80 ರೂಪಾಯಿ ಚಿಲ್ಲರೆಗೆ 10 ರೂಪಾಯಿಯ ಎಂಟು ನಾಣ್ಯಗಳನ್ನು ನೀಡಿದರಂತೂ ಇಟ್ಟುಕೊಳ್ಳಲು ಜೇಬು ಭಾರ ಎನಿಸುತ್ತದೆ. ಆದ್ದರಿಂದ, 1, 2 ಹಾಗೂ 5 ರೂಪಾಯಿಗಿಂತ ಹೆಚ್ಚಿನ ಮುಖಬೆಲೆಯ ನಾಣ್ಯಗಳನ್ನು ಆರ್‌ಬಿಐ ಚಲಾವಣೆಗೆ ತರದಿರುವುದೇ ಕ್ಷೇಮ.

ಪ್ರತಿದಿನ ಹಾಲು, ಮೊಸರು, ಕಿರಾಣಿ ಅಂಗಡಿಯಲ್ಲಿ ಕೊಳ್ಳುವ ವಸ್ತುಗಳಿಗೆ ಹಾಗೂ ಇನ್ನೂ ಮುಖ್ಯವಾಗಿ ಬಸ್ಸುಗಳಲ್ಲಿ ಸಂಚರಿಸಲು, ತರಕಾರಿ ಖರೀದಿಸಲು, ಹೋಟೆಲ್‌ಗಳಲ್ಲಿ ಕೂಡ ₹ 5 ಹಾಗೂ 10ರ ನೋಟುಗಳು ತೀರಾ ಅತ್ಯವಶ್ಯವಾಗಿವೆ. ಆದ್ದರಿಂದ ಆರ್‌ಬಿಐ, ವೆಚ್ಚ ಹೆಚ್ಚಾದರೂ ಗಣನೆಗೆ ತೆಗೆದುಕೊಳ್ಳದೆ 5, 10ರ ನೋಟುಗಳನ್ನು ಮುದ್ರಿಸಿ ಜನರ ನಿತ್ಯದ ವಹಿವಾಟು ಸುಗಮವಾಗಿ ನಡೆಯಲು ಸಹಕರಿಸಲಿ.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಫ್ಯೂಚರ್ ಗೇಮಿಂಗ್ ನೀಡಿದ ದೇಣಿಗೆ

ಉತ್ತರಕ್ಕಿಂತ ಪ್ರಶ್ನೆಗಳೇ ಹೆಚ್ಚು

ಚುನಾವಣಾ ಬಾಂಡ್



ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಅತಿಹೆಚ್ಚು ದೇಣಿಗೆ ನೀಡಿದ್ದು 'ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್' ಕಂಪನಿ. ತಮಿಳುನಾಡಿನ ಈ ಕಂಪನಿ 2020ರ ಅಕ್ಟೋಬರ್‌ನಿಂದ 2024ರ ಜನವರಿವರೆಗೆ ಒಟ್ಟು 1,368 ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ. ತಲಾ ₹1 ಕೋಟಿ ಮೊತ್ತದ ಈ ಬಾಂಡ್‌ಗಳ ಮೂಲಕ ಒಟ್ಟು ₹1,368 ಕೋಟಿ ದೇಣಿಗೆಯನ್ನು ಕಂಪನಿ ನೀಡಿದೆ. ಈ ಕಂಪನಿ ಮತ್ತು ಕಂಪನಿಯ ಪ್ರವರ್ತಕರ ವಿರುದ್ಧ 40ಕ್ಕೂ ಹೆಚ್ಚು ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳು ಇವೆ. ಆ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ಕ್ರಮ ತೆಗೆದುಕೊಂಡಾಗಲೆಲ್ಲಾ ಈ ಕಂಪನಿ ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ ಎಂದು ತಜ್ಞರು, ವಿರೋಧ ಪಕ್ಷಗಳ ಮುಖಂಡರು ಆರೋಪಿಸಿದ್ದಾರೆ. ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಎಸ್‌ಬಿಐನ ಚುನಾವಣಾ ಬಾಂಡ್ ವಿವರಗಳೂ ಇದನ್ನು ದೃಢಪಡಿಸುತ್ತವೆ. ಇಷ್ಟು ಮಾತ್ರವಲ್ಲ, ಕಂಪನಿಯ ವಿರುದ್ಧ 10 ವರ್ಷಗಳ ಹಿಂದೆ ದಾಖಲಾದ ಪ್ರಕರಣಗಳು ಇನ್ನೂ ತನಿಖೆ ಹಂತದಲ್ಲೇ ಇವೆ. ಅವು ಇನ್ನೊಂದು ಕತೆಯನ್ನು ಹೇಳುತ್ತವೆ

• ಜಯಸಿಂಹ ಆರ್.

ಸಿಕ್ಕಿಂ ಮತ್ತು ನಾಗಾಲ್ಯಾಂಡ್ ಸರ್ಕಾರಗಳ ಲಾಟರಿಗಳನ್ನು ಖರೀದಿಸಿ ಅದನ್ನು ಜನರಿಗೆ ಮಾರಾಟ ಮಾಡುವ ಕೆಲಸ 'ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್'ನದ್ದು. ತಮಿಳುನಾಡಿನ ಸ್ಯಾಂಟಿಯಾಗೊ ಮಾರ್ಟಿನ್ ಈ ಕಂಪನಿಯ ನಿರ್ದೇಶಕ. ಈ ಲಾಟರಿಗಳನ್ನು ದೇಶದ ಬೇರೆ-ಬೇರೆ ರಾಜ್ಯಗಳಲ್ಲಿ ಮಾರಾಟ ಮಾಡಿ ಬಂದ ಹಣವನ್ನು ಕಂಪನಿ ಸಿಕ್ಕಿಂ ಮತ್ತು ನಾಗಾಲ್ಯಾಂಡ್ ಸರ್ಕಾರಗಳಿಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿಯೇ ಇರಲಿಲ್ಲ. ಜತೆಗೆ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡದೆ, ಅವುಗಳಿಗೆ ಬಂದ ಹಣವನ್ನು ಕಂಪನಿಯೇ ಪಡೆದುಕೊಂಡಿತ್ತು ಎಂಬ ಆರೋಪದಲ್ಲಿ ಅದರ ವಿರುದ್ಧ 2011ರಲ್ಲಿ ಸಿಬಿಐ ಪ್ರಕರಣ ದಾಖಲಿಸಿತ್ತು. 2014ರ ಅಂತ್ಯದ ವೇಳೆಗೆ ಆರೋಪ ಪಟ್ಟಿ ಸಲ್ಲಿಸಿದ್ದ ಸಿಬಿಐ ಒಟ್ಟು ₹4,800 ಕೋಟಿ ಮೊತ್ತದಷ್ಟು ಹಗರಣ ನಡೆದಿದೆ ಎಂದು ಆರೋಪಿಸಿತ್ತು. ಆದರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಬಂಧನ ನಡೆದಿರಲಿಲ್ಲ.

ಆದರೆ ಆರೋಪ ಪಟ್ಟಿ ಸಲ್ಲಿಕೆಯಾದ ಕೆಲವೇ ತಿಂಗಳಲ್ಲಿ, ಅಂದರೆ 2015ರಲ್ಲಿ ಮಾರ್ಟಿನ್ ಅವರ ಮಗ ದೆಹಲಿಯಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಕಾರ್ಯಕ್ರಮದಲ್ಲಿ ಬಿಜೆಪಿ ಸೇರಿದ್ದರು. ಅಷ್ಟರಲ್ಲೇ ಲಾಟರಿ ವಂಚನೆಗೆ ಸಂಬಂಧಿಸಿದಂತೆ ಕೋಲ್ಕತ್ತಾ ಪೊಲೀಸರು ಕಂಪನಿಯ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆನಂತರ ಎಲೆಕ್ಟೋರಲ್ ಟ್ರಸ್ಟ್‌ಗಳ ಮೂಲಕ ಈ ಕಂಪನಿಯು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಾ ಬಂದಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ ಕಂಪನಿಯ ಜಾಲತಾಣವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿರುವ ಕಾರಣ ಮತ್ತು ಅದರ ಅಧೀನ ಕಂಪನಿಗಳ ಜಾಲತಾಣಗಳನ್ನೂ ಬ್ಲಾಕ್ ಮಾಡಿರುವ ಕಾರಣ ಅವುಗಳ ವಾರ್ಷಿಕ ವರದಿಯನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ.

ಕಂಪನಿಯ ವಾರ್ಷಿಕ ಲಾಭಕ್ಕಿಂತ ನೂರಾರು ಪಟ್ಟು ಹೆಚ್ಚು ಮೊತ್ತದ ದೇಣಿಗೆಯನ್ನು ಅದು ಚುನಾವಣಾ ಬಾಂಡ್ ಮೂಲಕ ನೀಡಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿದೆ. ಆದರೆ, ಕಂಪನಿಯ ವಾರ್ಷಿಕ ವರದಿ ಲಭ್ಯವಿಲ್ಲದೇ ಇರುವ ಕಾರಣ ಆ ಮಾಹಿತಿ ಪರಿಶೀಲಿಸಲು ಸಾಧ್ಯವಾಗಿಲ್ಲ.

ಆದರೆ ಮೇಲೆ ಹೇಳಲಾದ ಎರಡೂ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯವು 2019ರಲ್ಲಿ ತನಿಖೆ ಆರಂಭಿಸಿದ ನಂತರ ಕಂಪನಿಯು ರಾಜಕೀಯ ಪಕ್ಷಗಳಿಗೆ ನೂರಾರು ಕೋಟಿ ರೂಪಾಯಿ ದೇಣಿಗೆ ನೀಡಿದೆ. 2019ರಲ್ಲಿ ಜಾರಿ ನಿರ್ದೇಶನಾಲಯವು ಕಂಪನಿ ಮತ್ತು ಅದರ ಪ್ರವರ್ತಕರ ಮನೆಗಳಲ್ಲಿ ಶೋಧಕಾರ್ಯ ನಡೆಸಿತ್ತು. ಅದೇ ವರ್ಷ ಕಂಪನಿಯು ಪ್ರುಡೆಂಟ್ ಎಲೆಕ್ಟೋರಲ್ ಟ್ರಸ್ಟ್ ಮೂಲಕ ರಾಜಕೀಯ ಪಕ್ಷಗಳಿಗೆ ₹210 ಕೋಟಿ ದೇಣಿಗೆ ನೀಡಿತ್ತು. 2019–2021ರ ಏಪ್ರಿಲ್ ನಡುವೆ ಜಾರಿ ನಿರ್ದೇಶನಾಲಯವು ಕಂಪನಿಗೆ ಸೇರಿದ ಸ್ವತ್ತುಗಳನ್ನು ಮೂರು ಬಾರಿ ಮುಟ್ಟುಗೋಲು ಹಾಕಿಕೊಂಡಿತ್ತು. ಈ ಅವಧಿಯಲ್ಲಿ ಚುನಾವಣಾ ಬಾಂಡ್ ಮೂಲಕವೇ ಕಂಪನಿಯು ₹110 ಕೋಟಿ ಮೊತ್ತದ ದೇಣಿಗೆಯನ್ನು ಪಕ್ಷಗಳಿಗೆ ನೀಡಿತ್ತು. ನಂತರದ ವರ್ಷಗಳಲ್ಲಿ ಕಂಪನಿಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡ ಒಂದೆರಡು ದಿನಗಳಲ್ಲೇ ಕಂಪನಿ ಹತ್ತಾರು ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ. ಚುನಾವಣಾ ಬಾಂಡ್‌ಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಎಸ್‌ಬಿಐ ಬಹಿರಂಗಪಡಿಸದೇ ಇರುವ ಕಾರಣ, ಈ ಕಂಪನಿಯು ಯಾರಿಗೆ ದೇಣಿಗೆ ನೀಡಿದೆ ಎಂಬುದು ಖಚಿತವಾಗಿಲ್ಲ. ಆ ಮಾಹಿತಿಯನ್ನೂ ಒದಗಿಸುವಂತೆ ಸುಪ್ರೀಂ ಕೋರ್ಟ್ ಎಸ್‌ಬಿಐಗೆ ತಾಕೀತು ಮಾಡಿದೆ. ಆ ಮಾಹಿತಿ ಬಹಿರಂಗವಾದ ನಂತರ ಈ ಕಂಪನಿ ಯಾವೆಲ್ಲಾ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದೆ ಎಂಬುದು ಮತ್ತು ತನಿಖಾ ಸಂಸ್ಥೆಗಳ ಶೋಧ ಕಾರ್ಯ–ಚುನಾವಣಾ ಬಾಂಡ್ ಖರೀದಿ ನಡುವೆ ಸಂಬಂಧವಿದೆಯೇ ಎಂಬುದು ಪತ್ತೆಯಾಗಲಿದೆ. ❖

₹700 ಕೋಟಿ
ಜಾರಿ ನಿರ್ದೇಶನಾಲಯ, ಸಿಬಿಐ ಶೋಧ ಕಾರ್ಯ–ಕ್ರಮದ ನಂತರ ಈ ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಒಟ್ಟು ಮೊತ್ತ

ದಾಳಿ ಮತ್ತು ದೇಣಿಗೆ ಮಧ್ಯೆ ನಂಟಿದೆಯೇ?

2019–2021ರ ಏಪ್ರಿಲ್
ಸಿಬಿಐ ದಾಖಲಿಸಿದ್ದ ಲಾಟರಿ ಹಗರಣದಲ್ಲಿ ತನಿಖೆ ಆರಂಭಿಸಿದ ಜಾರಿ ನಿರ್ದೇಶನಾಲಯ
→ **₹210 ಕೋಟಿ** ಚುನಾವಣಾ ಬಾಂಡ್‌ಗೂ ಮುನ್ನ ಪ್ರುಡೆಂಟ್ ಎಲೆಕ್ಟೋರಲ್ ಟ್ರಸ್ಟ್ ಮೂಲಕ ರಾಜಕೀಯ ಪಕ್ಷಗಳಿಗೆ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್ ನೀಡಿದ ದೇಣಿಗೆ
₹60 ಕೋಟಿ 2020ರ ಅಕ್ಟೋಬರ್‌ನಲ್ಲಿ ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ
₹50 ಕೋಟಿ 2021ರ ಏಪ್ರಿಲ್‌ನಲ್ಲಿ ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

23 ಡಿಸೆಂಬರ್ 2021
ಸಿಬಿಐ ದಾಖಲಿಸಿದ್ದ ಲಾಟರಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಕಂಪನಿಯ ₹19.59 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು
→ **₹220 ಕೋಟಿ** 2022ರ ಜನವರಿ 5–6ರಲ್ಲಿ ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

2ನೇ ಏಪ್ರಿಲ್ 2022
ಕೋಲ್ಕತ್ತ ಪೊಲೀಸರು ದಾಖಲಿಸಿದ್ದ ಲಾಟರಿ ವಂಚನೆ ಪ್ರಕರಣದಲ್ಲಿ ಕಂಪನಿಯ ₹409.92 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡ ಜಾರಿ ನಿರ್ದೇಶನಾಲಯ
→ **₹100 ಕೋಟಿ** 2022ರ ಏಪ್ರಿಲ್ 7ರಂದು ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

2ನೇ ಜುಲೈ 2022
ಸಿಬಿಐ ದಾಖಲಿಸಿದ್ದ ಲಾಟರಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಕಂಪನಿಯ ₹73.48 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು
→ **₹75 ಕೋಟಿ** 2022ರ ಜುಲೈ 6ರಂದು ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

11–12ಮೇ 2023
ಮಾರ್ಟಿನ್ ಮತ್ತು ಅವರ ಕುಟುಂಬದ ಸದಸ್ಯರ ಹಲವು ಮನೆ ಮತ್ತು ಕಚೇರಿಗಳಲ್ಲಿ ಶೋಧ ಕಾರ್ಯ ನಡೆಸಿದ ಸಿಬಿಐ
→ **₹63 ಕೋಟಿ** 2023ರ ಜುಲೈನಲ್ಲಿ ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

22ನೇ ಸೆಪ್ಟೆಂಬರ್ 2023
ಕೋಲ್ಕತ್ತ ಪೊಲೀಸರು ದಾಖಲಿಸಿದ್ದ ಲಾಟರಿ ವಂಚನೆ ಪ್ರಕರಣದಲ್ಲಿ ಫ್ಯೂಚರ್ ಗೇಮಿಂಗ್ ಕಂಪನಿಯ ವಿರುದ್ಧ ಹಣ ಅಕ್ರಮ ವರ್ಗಾವಣೆ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿದ ಜಾರಿ ನಿರ್ದೇಶನಾಲಯ

1–13 ಅಕ್ಟೋಬರ್ 2023
ಲಾಟರಿ ವಂಚನೆ ಪ್ರಕರಣ ಮತ್ತು ಲಾಟರಿ ಹಗರಣದಲ್ಲಿ ಮಾರ್ಟಿನ್ ಮತ್ತು ಅವರ ಕುಟುಂಬದ ಸದಸ್ಯರ ಹಲವು ಮನೆ ಮತ್ತು ಕಚೇರಿಗಳಲ್ಲಿ ಶೋಧ ಕಾರ್ಯ ನಡೆಸಿದ ಜಾರಿ ನಿರ್ದೇಶನಾಲಯ
→ **₹65 ಕೋಟಿ** 2023ರ ಅಕ್ಟೋಬರ್ 5ರಂದು ಕಂಪನಿ ಖರೀದಿಸಿ ಚುನಾವಣಾ ಬಾಂಡ್‌ಗಳ ಮೊತ್ತ
₹5 ಕೋಟಿ 2023ರ ನವೆಂಬರ್ 8ರಂದು ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ
₹62 ಕೋಟಿ 2024ರ ಜನವರಿ 9ರಂದು ಕಂಪನಿ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

ಆಧಾರ: ಚುನಾವಣಾ ಆಯೋಗದ ಚುನಾವಣಾ ಬಾಂಡ್ ವಿವರ, ಜಾರಿ ನಿರ್ದೇಶನಾಲಯದ ಪತ್ರಿಕಾ ಪ್ರಕಟಣೆಗಳು, ಸಿಕ್ಕಿಂ ಹೈಕೋರ್ಟ್‌ನ ತೀರ್ಪು, ಪಿಟಿಐ, ರಾಯಿಟರ್ಸ್ ಮತ್ತು ಫಾರ್ಚೂನ್ ವರದಿಗಳು

ಕೇಂದ್ರ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಗೆದ್ದಿದ್ದ ಕಂಪನಿ

ಫ್ಯೂಚರ್ ಗೇಮಿಂಗ್ ಕಂಪನಿಯು ಕೇಂದ್ರ ಸರ್ಕಾರದ ವಿರುದ್ಧ 2015ರಲ್ಲಿ ಸಿಕ್ಕಿಂ ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿ, ಗೆದ್ದಿತ್ತು. ಆ ಪ್ರಕರಣದ ನಂತರವೇ ಕಂಪನಿಯ ವಿರುದ್ಧ ಕೇಂದ್ರದ ತನಿಖಾ ಸಂಸ್ಥೆಗಳ ಕ್ರಮ ಹೆಚ್ಚಾಯಿತು ಎಂಬುದರತ್ತ ದಾಖಲೆಗಳು ಬೊಟ್ಟು ಮಾಡುತ್ತವೆ.

2015ರಲ್ಲಿ ಕೇಂದ್ರ ಸರ್ಕಾರವು ಫೈನಾನ್ಸ್ ಕಾಯ್ದೆಗೆ ತಿದ್ದುಪಡಿ ತಂದಿತ್ತು. ರಾಜ್ಯ ಸರ್ಕಾರಗಳ ಲಾಟರಿ ಯೋಜನೆಗಳಿಗೆ ಸೇವೆ ಒದಗಿಸುವ ಕಂಪನಿಗಳು ಸೇವಾ ತೆರಿಗೆ ಪಾವತಿಸಬೇಕು ಎಂದು ಆದೇಶ ಹೊರಡಿಸಿತ್ತು. ಸಿಕ್ಕಿಂ ಮತ್ತು ನಾಗಾಲ್ಯಾಂಡ್ ರಾಜ್ಯ ಸರ್ಕಾರಗಳಿಂದ ಲಾಟರಿ ಟಿಕೆಟ್‌ಗಳನ್ನು ಸಗಟು ಖರೀದಿ ಮಾಡಿ ದೇಶದಾದ್ಯಂತ (ಲಾಟರಿ ನಿಷೇಧವಿರುವ ರಾಜ್ಯಗಳನ್ನು ಹೊರತುಪಡಿಸಿ) ಎಲ್ಲಾ ರಾಜ್ಯಗಳಲ್ಲಿ ಫ್ಯೂಚರ್ ಗೇಮಿಂಗ್ ಮಾರಾಟ ಮಾಡುತ್ತಿತ್ತು. ಹೀಗಾಗಿ ಸೇವಾ ತೆರಿಗೆ ಪಾವತಿಸಬೇಕು ಎಂದು ಕೇಂದ್ರ ಹಣಕಾಸು ಸಚಿವಾಲಯವು ಈ ಕಂಪನಿಗೆ ನೋಟಿಸ್ ನೀಡಿತ್ತು.

ಆಗ ಕೇಂದ್ರ ಸರ್ಕಾರದ ವಿರುದ್ಧ ಕಂಪನಿಯು ಸಿಕ್ಕಿಂ ಹೈಕೋರ್ಟ್ ಮೊರೆ ಹೋಗಿತ್ತು. 'ಲಾಟರಿ/ಜೂಜು ರಾಜ್ಯಪಟ್ಟಿಯಲ್ಲಿ ಬರುವ ವಿಚಾರ.



ಹೀಗಾಗಿ ಲಾಟರಿಯ ಮೇಲೆ ತೆರಿಗೆ ವಿಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ. ಜತೆಗೆ ಲಾಟರಿ ಸೇವೆ ಎಂದು ಕೇಂದ್ರ ಸರ್ಕಾರ ವ್ಯಾಖ್ಯಾನಿಸಿರುವಂತಹ ಯಾವುದೇ ಸೇವೆಯನ್ನು ಕಂಪನಿ ಒದಗಿಸುತ್ತಿಲ್ಲ. ಈ ಕಾರಣದಿಂದ ಕೇಂದ್ರ ಸರ್ಕಾರದ ನೋಟಿಸ್‌ಗಳನ್ನು ರದ್ದು ಮಾಡುತ್ತಿದ್ದೇವೆ' ಎಂದು 2015ರ ಅಕ್ಟೋಬರ್ 15ರಂದು ಹೈಕೋರ್ಟ್ ತೀರ್ಪು ನೀಡಿತ್ತು. ಆನಂತರವೇ ಕಂಪನಿಯ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಕರಣಗಳನ್ನು ದಾಖಲಿಸಿದ್ದು.

ಸಿನಿ ಬಿಟ್ಸ್


ದಿಗಂತ್, ಸಂಗೀತಾ

ಏ.5ಕ್ಕೆ 'ಮಾರಿಗೋಲ್ಡ್' ತೆರೆಗೆ

ದಿಗಂತ್, ಸಂಗೀತಾ ಶೃಂಗೇರಿ ಜೋಡಿಯಾಗಿ ನಟಿಸಿರುವ 'ಮಾರಿಗೋಲ್ಡ್' ಚಿತ್ರ ಏ.5ರಂದು ತೆರೆಗೆ ಬರುತ್ತಿದೆ. 'ಗುಣವಂತ' ಚಿತ್ರದ ನಿರ್ದೇಶಕ ರಘುವರ್ಧನ್ ಆರ್.ವಿ. ಕ್ರಿಯೇಶನ್ಸ್ ಮೂಲಕ ಬಂಡವಾಳ ಹೂಡಿದ್ದಾರೆ. ರಾಘವೇಂದ್ರ ಎಂ.ನಾಯ್ಕ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಚಿತ್ರದ 'ಸಿಹಿ ಜೇನ ಮಳೆ ಶುರುವಾಗಿಹುದು' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಾಡಿಗೆ ವೀರ್ ಸಮರ್ಥ್ ಸಂಗೀತ ಸಂಯೋಜಿಸಿದ್ದು, ಯೋಗರಾಜ್ ಭಟ್ ಸಾಹಿತ್ಯವಿದೆ.

'ಈವರೆಗೆ ರೊಮ್ಯಾಂಟಿಕ್ ಕಾಮಿಡಿ ಚಿತ್ರಗಳಲ್ಲೇ ಹೆಚ್ಚು ಕಾಣಿಸಿ-ಕೊಳ್ಳುತ್ತಿದ್ದ ನಟ ದಿಗಂತ್ ಇಲ್ಲಿ ಮಾಸ್ ಹೀರೋ ಆಗಿ ಕಾಣಿಸಿಕೊಂ-ಡಿದ್ದಾರೆ. ಗೋಲ್ಡ್ ಬಿಸ್ಕೆಟ್ ಮಾರಲು ಹೊರಟ ನಾಲ್ವರು ಹುಡುಗರ ಕಥೆ ಇದಾಗಿದ್ದು, ಚಿತ್ರದುರ್ಗ, ಬೆಂಗಳೂರು ಸಕಲೇಶಪುರ ಸುತ್ತಮುತ್ತ ಚಿತ್ರಿಕರಣ ಮಾಡಲಾಗಿದೆ. ಕೋವಿಡ್ ನಂತರದ ಬೆಳವಣಿಗೆಗಳು ಚಿತ್ರ ವಿಳಂಬಕ್ಕೆ ಕಾರಣವಾಯಿತು' ಎಂದರು ನಿರ್ದೇಶಕರು.

ಕೆ.ಎಸ್.ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ, ರಘು ನಿಡವಳ್ಳಿ ಸಂಭಾಷಣೆ ಈ ಚಿತ್ರಕ್ಕಿದೆ. ಸಂಪತ್ ಮೈತ್ರೇಯ, ಯಶ್ ಶೆಟ್ಟಿ , ಕಾಕ್ರೋಚ್ ಸುಧೀ, ವಜ್ರಾಂಗ್ ಶೆಟ್ಟಿ, ಬಲರಾಜವಾಡಿ ಮುಂತಾದವರು ತಾರಾಗಣದಲ್ಲಿದ್ದಾರೆ. ❖


ರಿತ್ವಿಕ್, ರೂಪಾರಾವ್, ಸಹದೇವ್

ಕೆಂಡದ 'ತಾಜಾ ತಾಜಾ ಸುದ್ದಿ'

'ಗಂಟುಮೂಟೆ' ಖ್ಯಾತಿಯ ರೂಪಾರಾವ್ ನಿರ್ಮಿಸಿ, ಸಹದೇವ್ ಕೆಲವಡಿ ನಿರ್ದೇಶಿಸಿರುವ 'ಕೆಂಡ' ಚಿತ್ರದ 'ತಾಜಾ ತಾಜಾ ಸುದ್ದಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜಯಂತ್ ಕಾಯ್ಕಿಣಿ ಸಾಹಿತ್ಯವಿರುವ ಈ ಹಾಡನ್ನು ಯೋಗರಾಜ ಭಟ್, ವಿ.ಹರಿಕೃಷ್ಣ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಜಯಂತ್ ಕಾಯ್ಕಿಣಿ ಪುತ್ರ ರಿತ್ವಿಕ್ ಕಾಯ್ಕಿಣಿ ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕನಾಗಿ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ. 'ಸದ್ಯದ ಪರಿಸ್ಥಿತಿಯಲ್ಲಿ ಹಾಡು ಇಲ್ಲದೆ ಸಿನಿಮಾ ಬಿಡುಗಡೆ ಮಾಡಿದರೆ ಎರಡು ರೀತಿ ಅಪಾಯ ಎದುರಾಗುತ್ತದೆ. ಒಂದು, ಬೆಳಿಗ್ಗೆ ಸ್ನಾನದ ಮನೆಯಲ್ಲಿ ಇರುವಾಗ ನನ್ನ ಹಾಡನ್ನು ಇಡೀ ಪ್ರಪಂಚ ತಿರುಗಿ ನೋಡುತ್ತದೆ ಎಂಬ ಕನಸು ಕಾಣುವುದು. ಎರಡು, ಹೊರಗೆ ಬಂದಾಗ ನಮ್ಮ ಹಾಡು ಯಾರಿಗೂ ಗೊತ್ತಿಲ್ಲವೆಂಬ ದುಗುಡ. ಇದನ್ನೆಲ್ಲ ದಾಟಿ ರಿತ್ವಿಕ್‌ಗೆ ಯಶಸ್ಸು ಸಿಗಲಿ' ಎಂದರು ಯೋಗರಾಜ ಭಟ್.

ಬೆಂಗಳೂರಿನಂಥ ಮಹಾನಗರಿಯಲ್ಲಿ ನಿರಾಸೆಗೊಳಗಾದ ಯುವ ಸಮೂಹದ ಕುರಿತಾದ ಕಥೆ, ರಾಜಕೀಯ, ಅಪರಾಧ ಸೇರಿದಂತೆ ಒಂದಷ್ಟು ಸಾಮಾಜಿಕ ಅಂಶಗಳು ಚಿತ್ರದಲ್ಲಿದೆ ಎನ್ನುತ್ತಿದೆ ಚಿತ್ರತಂಡ.

ಬಿ.ವಿ.ಭರತ್, ಪ್ರಣವ್‌ಶ್ರೀಧರ್, ವಿನೋದ್‌ರವೀಂದ್ರನ್, ಗೋಪಾಲ್ ಕೃಷ್ಣ ದೇಶಪಾಂಡೆ ಮೊದಲಾದವರು ತಾರಾಗಣದಲ್ಲಿದ್ದಾರೆ. ಬೆಂಗಳೂರು, ಕೋಲಾರದಲ್ಲಿ ಚಿತ್ರೀಕರಣಗೊಂಡಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **'ಚುನಾವಣಾ ಬಾಂಡ್'** ಮೂಲಕ ಅತಿಹೆಚ್ಚು ದೇಣಿಗೆ ನೀಡಿರುವ ಫ್ಯೂಚರ್ ಗೇಮಿಂಗ್ ಕಂಪನಿಯ ಕಚೇರಿ ಇದು. ಇಂತಹ ಸಣ್ಣ ಕಚೇರಿಯಲ್ಲಿ ಇರುವ ಕಂಪನಿ ಸಾವಿರಾರು ಕೋಟಿ ಮೊತ್ತದ ದೇಣಿಗೆಯನ್ನು ನೀಡುತ್ತಿದೆ ಎಂದರೆ ನಂಬಲಾಗದು' ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಆ ಚಿತ್ರದಲ್ಲಿ ಇರುವುದು ಫ್ಯೂಚರ್ ಗೇಮಿಂಗ್ ಕಂಪನಿಯ ಕಚೇರಿ ಅಲ್ಲ.



✓ **ಇದೇ** ಕಚೇರಿಯ ಚಿತ್ರ ಈ ಹಿಂದೆಯೂ ಹಲವು ಬಾರಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅದಾನಿ ಸಮೂಹ ಸಂಸ್ಥೆಗಳ ಲೆಕ್ಕಪರಿಶೋಧನೆ ನಡೆಸಿದ ಕಂಪನಿಯ ಕಚೇರಿ ಇದು ಎಂದು ಈ ಹಿಂದೆ ಮಾಹಿತಿ ಹಂಚಿಕೊಳ್ಳಲಾಗಿತ್ತು. ಆದರೆ ಅದು ಎಸ್‌ಬಿಐನ ಎಟಿಎಂ ಘಟಕ ಒಂದರ ಚಿತ್ರ. ಈಗ ಅದೇ ಚಿತ್ರದಲ್ಲಿನ ನಾಮಫಲಕವನ್ನು ತಿರುಚಿ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವಿಸಸ್ ಲಿಮಿಟೆಡ್‌ನ ಕಚೇರಿಯ ಚಿತ್ರ ಎಂದು ಸುಳ್ಳು ಮಾಹಿತಿ ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ



ಮೌಲ್ಯವೆಂಬ ಅಮೃತಧಾರೆ

ನುಡಿ ಬೆಳಗು


ಎಚ್.ಎಸ್.ನವೀನಕುಮಾರ್ ಹೊಸದುರ್ಗ

2012ನೇ ಇಸವಿಯಲ್ಲಿ ಸ್ಪೇನ್ ದೇಶದ ನವ್ವಾ ಪ್ರಾವಿನ್ಸ್‌ನಲ್ಲಿರುವ ಬುರ್ಲಾಡಾ ಎಂಬಲ್ಲಿ ನಡೆಯುತ್ತಿದ್ದ ಗುಡ್ಡಗಾಡು ಓಟದ ಸ್ಪರ್ಧೆಯೊಂದರ ಕೊನೆಯಲ್ಲಿ ಒಂದು ವಿಶಿಷ್ಟ ಘಟನೆ ಸಂಭವಿಸಿತು. ಈ ಸ್ಪರ್ಧೆಯಲ್ಲಿ ಎಲ್ಲರಿಗಿಂತಲೂ ದೊಡ್ಡ ಅಂತರದಲ್ಲಿ ಮುಂದಿದ್ದು, ಮೊದಲ ಸ್ಥಾನ ಗಳಿಸುವ ಎಲ್ಲ ಸಾಧ್ಯತೆಗಳಿದ್ದ ಲಂಡನ್ ಒಲಿಂಪಿಕ್ಸ್‌ನ 3000 ಮೀಟರ್ ಸ್ಪರ್ಧೆಯ ಕಂಚಿನ ಪದಕ ವಿಜೇತ ಕೀನ್ಯಾ ದೇಶದ ಏಬಲ್ ಮ್ಯೂಟಾಯ್, ಓಟದ ಕೊನೆಯ ಹಂತದಲ್ಲಿ ಗೊಂದಲಕ್ಕೆ ಒಳಗಾಗಿ ಅಂತಿಮ ಗೆರೆ ತಲುಪುವ ಮೊದಲೇ ತಾನು ಗೆದ್ದಿದ್ದೇನೆ ಎಂದು ಸುಮ್ಮನೆ ನಿಂತುಬಿಡುತ್ತಾರೆ. ಅವರ ಹಿಂದೆಯೇ ಎರಡನೇ ಸ್ಥಾನದಲ್ಲಿ ಇದ್ದ ಸ್ಪೇನ್ ದೇಶದ ಇವಾನ್ ಫರ್ನಾಂಡಿಸ್ ಅನಾಯ, ಹಿಂದಿನಿಂದ 'ಅಂತಿಮಗೆರೆ ಇನ್ನೂ ಬಂದಿಲ್ಲ ಓಡು ಓಡು' ಎಂದು ಸ್ಪ್ಯಾನಿಷ್ ಭಾಷೆಯಲ್ಲಿ ಕೂಗಿ ಹೇಳುತ್ತಾರೆ. ಆದರೆ ಸ್ಪ್ಯಾನಿಷ್ ಭಾಷೆ ಅರಿಯದ ಮ್ಯೂಟಾಯ್‌ಗೆ ಇದು ಅರ್ಥವಾಗದೆ ಅಲ್ಲಿಯೇ ನಿಲ್ಲುತ್ತಾರೆ. ಆದರೆ ಇವಾನ್ ಫರ್ನಾಂಡಿಸ್ ಅವರನ್ನು ಮುಂದಕ್ಕೆ ತಳ್ಳಿ ಗೆಲುವಿನ ಗೆರೆ ದಾಟಿಸಿ ಮ್ಯೂಟಾಯ್‌ಗೆ ಚಿನ್ನದ ಪದಕ ಸಿಗುವಂತೆ ಮಾಡುತ್ತಾರೆ. ಹಾಗೂ ತಾನು ಬೆಳ್ಳಿ ಪದಕಕ್ಕೆ ತೃಪ್ತರಾಗುತ್ತಾರೆ.

ಸ್ಪರ್ಧೆ ಮುಗಿದ ನಂತರ ಪತ್ರಿಕಾ ವರದಿಗಾರರು ಇವಾನ್ ಫರ್ನಾಂಡಿಸ್ ಅನಾಯ ಅವರನ್ನು 'ನೀವೇಕೆ ಚಿನ್ನದ ಪದಕ ಗೆಲ್ಲುವ ಅವಕಾಶವನ್ನು ಬಿಟ್ಟುಕೊಟ್ಟಿರಿ' ಎಂದು ಪ್ರಶ್ನಿಸಿದಾಗ, 'ಈ ಓಟದ ಸ್ಪರ್ಧೆಯಲ್ಲಿ ಮ್ಯೂಟಾಯ್ ಮೊದಲಿಂದಲೂ ಬಹಳ ಮುನ್ನಡೆಯಲ್ಲಿದ್ದರು. ಹೀಗಾಗಿ ಚಿನ್ನದ ಪದಕ ಗೆಲ್ಲಲು ಅವರೇ ಅರ್ಹರಾಗಿದ್ದರು' ಎಂದು ಉತ್ತರಿಸುತ್ತಾರೆ. 'ಆದರೂ ನೀವು ನಿಯಮದ ಅನುಸಾರವಾಗಿಯೇ ವಿಜೇತರಾಗಬಹುದಿತ್ತು. ಕೈಯಲ್ಲಿದ್ದ ಗೆಲುವನ್ನು ನೀವೇಕೆ ಬಿಟ್ಟುಕೊಟ್ಟಿರಿ' ಎಂದು ಪ್ರಶ್ನಿಸಿದ ವರದಿಗಾರರಿಗೆ ಇವಾನ್ ಫರ್ನಾಂಡಿಸ್ ಕೊಟ್ಟ ಉತ್ತರ ಬದುಕಿನಲ್ಲಿ ಮೌಲ್ಯದ ಮಹತ್ವ ಎಷ್ಟು ಎಂಬುದನ್ನು ಎತ್ತಿ ಹಿಡಿಯುತ್ತದೆ. 'ಹೌದು ನಾನೇ ಗೆಲ್ಲಬಹುದಿತ್ತು. ಆದರೆ ಅದು ಅರ್ಹ ಗೆಲುವಾಗುತ್ತಿತ್ತೇ? ಮುನ್ನಡೆಯಲ್ಲಿದ್ದ ವ್ಯಕ್ತಿ ತನಗೆ ಅರಿವಿಲ್ಲದೇ ಗೊಂದಲದಲ್ಲಿರುವಾಗ ಅವನನ್ನು ದಾಟಿ ಮುನ್ನುಗ್ಗಿ ಗೆಲ್ಲುವುದು ನಿಜವಾದ ಗೆಲುವಲ್ಲ. ಹಾಗೆ ಗೆದ್ದಿದ್ದರೆ ನನ್ನ ಅಮ್ಮ ಏನೆಂದುಕೊಳ್ಳುತ್ತಿದ್ದಳು? ಇದು ಅವಳು ಹೇಳಿಕೊಟ್ಟ ಮೌಲ್ಯಗಳಿಗೆ ವಿರುದ್ಧವಲ್ಲವೇ?'

ಎಷ್ಟು ವಿಶೇಷವಾಗಿದೆಯಲ್ಲ ಈ ಚಿಂತನೆ, ಈ ಕ್ರೀಡಾ ಸ್ಫೂರ್ತಿ? ಇಂದು ಹೇಗಾದರೂ ಸರಿ ನಾವೇ ಗೆಲ್ಲಬೇಕು ಎಂಬ ಮನಃಸ್ಥಿತಿಯವರೇ ಎಲ್ಲೆಡೆಯೂ ಕಾಣಿಸುತ್ತಾರೆ. ತಮ್ಮ ಮಕ್ಕಳು ಹೇಗಾದರೂ ಸರಿ ಮೊದಲ ಸ್ಥಾನ ಗಳಿಸಲೇಬೇಕು ಎಂದು ಹಪಾಹಪಿಸುವ ಪೋಷಕರು ಅದಕ್ಕಾಗಿ ತಮ್ಮ ಮಕ್ಕಳ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಾರೆ. ತಾನು ಗೆಲ್ಲುವುದರ ಜೊತೆಗೆ ಇನ್ನೊಬ್ಬರನ್ನೂ ಗೆಲ್ಲಿಸುವ ಯೋಚನೆ ನಮ್ಮಲ್ಲಿರಬೇಕು. ಇದಕ್ಕೆ win-win situation ಎನ್ನುತ್ತಾರೆ. 'ಸ್ಪರ್ಧೆಯಿಂದ ನಾವು ಗುರಿ ತಲುಪಬಹುದು. ಆದರೆ ಅಲ್ಲಿಂದ ಮುಂದೆ ಪ್ರಗತಿ ಸಾಧಿಸಲು ಸಹಕಾರವೇ ಬೇಕು' ಎನ್ನುತ್ತಾರೆ ಫ್ರಾಂಕ್ ರೂಸ್ವೆಲ್ಟ್. ತಂಡವು ಯಶಸ್ಸು ಪಡೆಯಬೇಕಾದರೆ ಎಲ್ಲರೂ ಗೆಲ್ಲಬೇಕೆಂಬ ಸಹಕಾರಿ ಮನೋಭಾವವೇ ಅತ್ಯಗತ್ಯ. ಹಾಗೆಯೇ ನಮ್ಮ ಸಾಮರ್ಥ್ಯ ನಮ್ಮ ಗೆಲುವಿನ ಮೂಲವಾಗಬೇಕೇ ವಿನಃ ಬೇರೆಯವರ ದೌರ್ಬಲ್ಯವಲ್ಲ ಎಂಬ ಮೌಲ್ಯವನ್ನು ಇವಾನ್ ಫರ್ನಾಂಡಿಸ್‌ನ ತಾಯಿ ಅವನ ಬಾಲ್ಯದಿಂದಲೇ ಅವನಲ್ಲಿ ತುಂಬಿದ್ದಳು.

ಇಂತಹ ಮೌಲ್ಯ, ಮಾನವೀಯತೆಗಳನ್ನು ಸರಿಯಾಗಿ ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 18, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ನವಮಿ ಗಂ. 22-50 ನಕ್ಷತ್ರ: ಆರ್ದ್ರಾ ಗಂ. 18-11 ಯೋಗ: ಸೌಭಾಗ್ಯ ಗಂ. 16-36 ಕರಣ: ಬಾಲವ ಗಂ. 10-17, ಮೀನ ಮಾಸದ 04 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 1.
ರಾಹುಕಾಲ: ಬೆಳಿಗ್ಗೆ 07-30 - 09-00
ಸೂರ್ಯೋದಯ : 06-38 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 07 ರಂಜಾನ್
ಅದೃಷ್ಟ ಸಂಖ್ಯೆ : 3, 8

ಮೇಷ: ಅಪೇಕ್ಷಿಸಿದ ಪ್ರಗತಿಯನ್ನು ಸಾಧಿಸುವಿರಿ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುವುದು. ಕೋಪದ ಮೇಲೆ ನಿಯಂತ್ರಣವಿರಲಿ. ವಾದ-ವಿವಾದಗಳಿಂದ ದೂರವಿರಿ.

ವೃಷಭ: ಜವಳಿ ವ್ಯಾಪಾರಿಗಳು ಪ್ರಚಾರದಿಂದಾಗಿ ಉತ್ತಮ ವ್ಯಾಪಾರವನ್ನು ನಡೆಸಬಹುದು. ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರದಲ್ಲಿ ಮಹತ್ತರ ಅಭಿವೃದ್ಧಿಯನ್ನು ಕಾಣುವಿರಿ. ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿವೆ.

ಮಿಥುನ: ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಸಹಭಾಗಿಗೆ ಅಥವಾ ಮಕ್ಕಳಿಗೆ ಸಮಯವನ್ನು ಸ್ವಲ್ಪವಾದರೂ ಮೀಸಲಿಡಿ. ದಿಢೀರ್ ಪ್ರಯಾಣದ ಸಂಭವವಿದೆ.

ಕರ್ಕಾಟಕ: ಪ್ರಿಯವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವಿರಿ. ಖರ್ಚು ಅಧಿಕವಾದರೂ ಆದಾಯ ಉತ್ತಮವಾಗಿರುವುದು. ಸಂಸ್ಥೆಯ ಆಂತರಿಕ ವಿಷಯಗಳಿಗೆ ಗಮನ ಕೊಡದಿರುವುದು ಒಳ್ಳೆಯದು.

ಸಿಂಹ: ಸಾಮಾಜಿಕ ಸಮಾರಂಭಗಳಲ್ಲಿ ಅತ್ಯುತ್ತಮ ನಾಯಕತ್ವವನ್ನು ವಹಿಸಿಕೊಳ್ಳುವಿರಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಅವಕಾಶಗಳು ಅರಸಿ ಬರಲಿವೆ. ನಿರಾತಂಕವಾಗಿ ಕೊಟ್ಟ ಕೆಲಸ ಮಾಡಿಮುಗಿಸುವಿರಿ.

ಕನ್ಯಾ: ಸಹಚರರಲ್ಲಿ, ಸಹೋದ್ಯೋಗಿಗಳಲ್ಲಿ ಇಂದಿನ ನಿಮ್ಮ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಹಾಗೂ ಸಂತೋಷವೆನಿಸುವುದು. ಮನೆಯ ನಿರ್ಮಾಣ ಕೆಲಸಗಳು ಸರಾಗವಾಗಿ ಸಾಗಲಿದೆ. ಮನೆಯೇ ಸೌಖ್ಯ ಎನಿಸಲಿದೆ.

ತುಲಾ: ದೈನಂದಿನದ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವಿರಿ. ಕೃಷಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಆತಂಕ, ಭಯ ಉಂಟಾಗಬಹುದು. ಪತ್ನಿಯ ಆರೋಗ್ಯ ಸುಧಾರಿಸಲಿದೆ.

ವೃಶ್ಚಿಕ: ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮವೇ. ಕೈಗೆ ಸಿಗದ ಅಂಶಗಳ ಬಗ್ಗೆ ಯೋಚಿಸುವುದು ಸಮಯವ್ಯರ್ಥಕ್ಕೆ ಕಾರಣವಾಗಲಿದೆ. ಉನ್ನತ ಶ್ರೇಣಿಯ ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆ ಸಂಭವವಿದೆ.

ಧನು: ಮಗಳ ಮದುವೆ ವಿಚಾರವಾಗಿ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ರಾಜಕೀಯ ವಲಯದಲ್ಲಿ ವರಿಷ್ಠರೊಂದಿಗೆ ಮಾತುಕತೆ ಇರುವುದು. ತಾಳ್ಮೆ ಕಳೆದುಕೊಂಡಲ್ಲಿ ಅನವಶ್ಯಕ ಕಲಹ ಉಂಟಾದೀತು.

ಮಕರ: ಕಠಿಣ ಶ್ರಮದ ಜತೆಯಲ್ಲಿ ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ. ನಂತರ ಗುರಿ ಸಾಧಿಸಬೇಕಿದ್ದಲ್ಲಿ ಅನುಭವಸ್ಥರ ಅಥವಾ ಅಕ್ಕಪಕ್ಕದವರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳಿ.

ಕುಂಭ: ದಿನದ ಮೊದಲ ಭಾಗ ಶ್ರಮಭರಿತವಾಗಿದ್ದರೂ ನಂತರ ಬಹಳ ವಿರಾಮ ದೊರೆಯುವುದು. ದೈನಂದಿನ ಬದುಕಿನಲ್ಲಿ ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವವು ಕೂಡ ಹೆಚ್ಚುವುದು.


ಮೀನ: ಹೊಸ ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಗೃಹೋಪಯೋಗಿ ವಸ್ತುಗಳ ಮಾರಾಟಗಾರರು ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ.

ಪದಬಂಧ 5624

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ದಾಹ ತೀರಿಸಿಕೊಂಡವವನು ನೀಡಿರುವ ದೃಷ್ಟಾಂತ (5)
3. ಲಗ್ನಕ್ಕೊಂದು ಪರ್ಯಾಯ ಪದ (3)
5. ಕೈ ಮುಂದು ಮಾಡಿ ಬಾರಿಸಿರುವ ಚಪ್ಪಾಳೆ (5)
7. ಈತ ಗ್ರೀಸ್ ದೇಶದವನು (3)
9. ಪುನಃ ಪುನಃ ತೋರುತ್ತಿರುವ ವೈಯ್ಯಾರ (3)
11. ಪಾಪಿಗಳ ಲೋಕ (3)
13. ನೆತ್ತರಿನಿಂದ ಇರಿಸಿರುವ ಬೊಟ್ಟು (5)
15. ಕಡ ಕೇಳುತ್ತಿರುವ ಖದೀಮ! (3)
16. ಈತ ಅಡುಗೆ ಮಾಡುವುದರಲ್ಲಿ ನಿಸ್ಸೀಮ (5)

ಮೇಲಿಂದ ಕೆಳಕ್ಕೆ
1. ಅಧ್ಯಾಯ ತೋರಿಸುತ್ತಿರುವ ಅಧ್ಯಾಪಕ (4)
2. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
4. ದುಃಖದೊಡನೆ ಬರುವ ಜೋಡು ನುಡಿ (3)
6. ತಾರೀಕು ನೋಡುತ್ತಾ ವ್ಯಕ್ತಪಡಿಸಿರುವ ಮೆಚ್ಚಿಗೆ (3)
8. ಬಿಡಬೇಕಾದುದು ಇದು (2)
9. ಒಡನೆಯೇ ಕಾಣಿಸಿಕೊಂಡಿರುವ ಯಜಮಾನತಿ (3)
10. ಉದಾರತೆಯಿಂದ ನೀಡಿದ ನೂಲು (2)
12. ಕಣದಲ್ಲಿ ಹಾಕಿದ ಅಂಕೆ (4)
13. ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
14. ಈತ ಪ್ರಾಣಿಗಳನ್ನು ಕಡಿಯುವವನು (3)



5623ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮನೋರೋಗ
5.ಯಾಚಕ 6.ದಿನಕರ
8.ರತ್ನಾಕರ 10.ಕಬಳಿಸು
12.ಅಗಣಿತ 14.ದಡಿಯ
15.ವರ್ಧಮಾನ
16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗಡಿಯಾರ
3.ಮಧುಕರ 4.ಗತ್ಯಂತರ 7.ನವಾಬ
9.ಕಲ್ಯಾಣಿ 10.ಕಲರವ
11.ಸುದರ್ಶನ 12.ಅಯಸ್ಕಾಂತ
13.ತಲೋದರಿ

ಸುಡೊಕು 6009

		3	1			4		
6				5				8
	4		8				6	
4			5		9	2		1
	2			4			5	
3		5	2		8		4	6
5	7					8		9
		1	4	8	5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6008 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಈಕ್ವಿಟಿ ಎಂ.ಎಫ್: ತೆರಿಗೆ ಲೆಕ್ಕಾಚಾರ ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೊದಲು ತೆರಿಗೆ ಅಂದಾಜು ಅರಿಯುವುದು ಅತಿಮುಖ್ಯ. ತೆರಿಗೆಯ ಮಾನದಂಡ ಗೊತ್ತಿದ್ದರೆ ಮಾತ್ರ ಇಂತಹ ಹೂಡಿಕೆಗಳಿಂದ ಗರಿಷ್ಠ ಲಾಭ ಪಡೆದುಕೊಳ್ಳಲು ಸಾಧ್ಯ. ಬನ್ನಿ, ಈಕ್ವಿಟಿ ಆಧಾರಿತ ಮ್ಯೂಚುಯಲ್ ಫಂಡ್‌ಗಳಲ್ಲಿ ತೆರಿಗೆ ಲೆಕ್ಕಾಚಾರ ಹೇಗಾಗುತ್ತದೆ ಎಂಬುದನ್ನು ವಿವರವಾಗಿ ತಿಳಿಯೋಣ.

ಹೀಗಿರುತ್ತೆ ತೆರಿಗೆ ಲೆಕ್ಕಾಚಾರ: ಷೇರು ಮಾರುಕಟ್ಟೆಯಲ್ಲಿ ಶೇ65ರಷ್ಟು ಹಣ ಹೂಡಿಕೆ ಮಾಡುವ ಫಂಡ್‌ಗಳನ್ನು ಈಕ್ವಿಟಿ ಆಧಾರಿತ ಎಂದು ಪರಿಗಣಿಸಲಾಗುತ್ತದೆ. ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ತೊಡಗಿಸಿದಾಗ ಹೂಡಿಕೆದಾರ, ಬಂಡವಾಳದ ಮೇಲಿನ ಗಳಿಕೆ ಅಂದರೆ ಮ್ಯೂಚುಯಲ್ ಫಂಡ್ ಮಾರಾಟದಿಂದ ಲಾಭ ಪಡೆದುಕೊಳ್ಳುತ್ತಾನೆ. ಉದಾಹರಣೆಗೆ ಯಾವುದೋ ಒಂದು ಮ್ಯೂಚುಯಲ್ ಫಂಡ್ ಅನ್ನು ₹20ಕ್ಕೆ ಖರೀದಿಸಲಾಗಿದೆ ಎಂದುಕೊಳ್ಳಿ. ಆ ಮ್ಯೂಚುಯಲ್ ಫಂಡ್ ಅನ್ನು ₹50ಕ್ಕೆ ಮಾರಾಟ ಮಾಡಿದಾಗ ₹30 ಲಾಭ ಬರುತ್ತದೆ. ಈ ₹30 ಅನ್ನು ಬಂಡವಾಳದ ಮೇಲಿನ ಗಳಿಕೆ ಎಂದು ಕರೆಯಲಾಗುತ್ತದೆ. ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ಎಷ್ಟು ಕಾಲ ಹೂಡಿಕೆ ಮಾಡಿದ್ದೀರಿ ಎನ್ನುವುದನ್ನು ಆಧಾರವಾಗಿಟ್ಟುಕೊಂಡು ತೆರಿಗೆ ನಿಗದಿ ಮಾಡಲಾಗುತ್ತದೆ. ಈಕ್ವಿಟಿ ಮ್ಯೂಚುಯಲ್ ಫಂಡ್ ಹೂಡಿಕೆಯನ್ನು ಅಲ್ಪಾವಧಿಯಲ್ಲಿ ನಗದೀಕರಣ ಮಾಡಿಕೊಂಡರೆ ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ (ಎಸ್‌ಟಿಸಿಜಿ) ಅನ್ವಯಿಸುತ್ತದೆ. ದೀರ್ಘಾವಧಿಯಲ್ಲಿ ನಗದೀಕರಣ ಮಾಡಿಕೊಂಡರೆ ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯು (ಎಲ್‌ಟಿಸಿಜಿ) ಅನ್ವಯಿಸುತ್ತದೆ.

ಏನಿದು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ?: ಈಕ್ವಿಟಿ ಮ್ಯೂಚುಯಲ್ ಫಂಡ್ ಹೂಡಿಕೆಯನ್ನು ಒಂದು ವರ್ಷದ ಒಳಗೆ ನಗದೀಕರಣ ಮಾಡಿಕೊಂಡರೆ ಶೇ 15ರಷ್ಟು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ ಅನ್ವಯಿಸುತ್ತದೆ. ಉದಾಹರಣೆಗೆ ಹೂಡಿಕೆ ಮೊತ್ತದ ಮೇಲೆ ₹1.20 ಲಕ್ಷ ಗಳಿಕೆಯಾಗಿದ್ದು ಅದನ್ನು ಒಂದು ವರ್ಷದ ಒಳಗೆ ನಗದೀಕರಣ ಮಾಡಿಕೊಂಡರೆ ಶೇ 15ರ ತೆರಿಗೆ ಲೆಕ್ಕಾಚಾರದಲ್ಲಿ ₹1.20 ಲಕ್ಷ ಗಳಿಕೆಗೆ ₹18 ಸಾವಿರ ತೆರಿಗೆ ಪಾವತಿಸಬೇಕಾಗುತ್ತದೆ.

ಏನಿದು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ?: ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ನಗದೀಕರಣ ಮಾಡಿಕೊಂಡರೆ ಶೇ 10ರಷ್ಟು ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ ಅನ್ವಯಿಸುತ್ತದೆ. ಆದರೆ, ಒಂದು ವರ್ಷದಲ್ಲಿ ₹1 ಲಕ್ಷಕ್ಕಿಂತ ಹೆಚ್ಚಿನ ಗಳಿಕೆಗೆ ಮಾತ್ರ ತೆರಿಗೆ ಅನ್ವಯಿಸುತ್ತದೆ. ₹1 ಲಕ್ಷದವರೆಗಿನ ಗಳಿಕೆಗೆ ಯಾವುದೇ ತೆರಿಗೆ ಇರುವುದಿಲ್ಲ.

ಉದಾಹರಣೆಗೆ ಹೂಡಿಕೆ ಮೊತ್ತದ ಮೇಲೆ ₹1.20 ಲಕ್ಷ ಗಳಿಕೆಯಾಗಿದ್ದು, ಅದನ್ನು ಒಂದು ವರ್ಷದ ಬಳಿಕ ನಗದೀಕರಣ ಮಾಡಿಕೊಂಡರೆ ಮೊದಲ ₹1 ಲಕ್ಷಕ್ಕೆ ಯಾವುದೇ ತೆರಿಗೆ ಇರುವುದಿಲ್ಲ. ₹20 ಸಾವಿರ ಗಳಿಕೆಗೆ ಮಾತ್ರ ಶೇ 10ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಭಾರೀ ಕುಸಿತ ಕಂಡ ಷೇರುಪೇಟೆ

ಷೇರುಪೇಟೆ

ಸತತ ನಾಲ್ಕು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಈಗ ಕುಸಿತದ ಹಾದಿ ತುಳಿದಿವೆ.

ಮಾರ್ಚ್ 15ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ದಾಖಲಿಸಿವೆ. 72,643 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.99ರಷ್ಟು ಇಳಿಕೆಯಾಗಿದೆ. 22,023 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.09ರಷ್ಟು ತಗ್ಗಿದೆ.ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಷೇರುಗಳಲ್ಲಿ ಮಾರಾಟದ ಒತ್ತಡ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ನಕಾರಾತ್ಮಕತೆ, ವಿದೇಶಿ ಹೂಡಿಕೆದಾರರಿಂದ ಷೇರುಗಳ ಮಾರಾಟ ಸೇರಿ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 9.4ರಷ್ಟು ಕುಸಿದಿದೆ. ನಿಫ್ಟಿ ಮಾಧ್ಯಮ ಶೇ 8.3, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 8, ನಿಫ್ಟಿ ಲೋಹ ಸೂಚ್ಯಂಕ ಶೇ 6.8ರಷ್ಟು ತಗ್ಗಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1ರಷ್ಟು ಗಳಿಸಿಕೊಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹816.91 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹14,147.5 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಮಾರುಕಟ್ಟೆ ಮೌಲ್ಯದ ಲೆಕ್ಕಾಚಾರಕ್ಕೆ ಬಂದರೆ ರಿಲಯನ್ಸ್ ಇಂಡಸ್ಟ್ರೀಸ್, ಎಸ್‌ಬಿಐ, ಎನ್‌ಟಿಪಿಸಿ ಅತಿಹೆಚ್ಚು ಮಾರುಕಟ್ಟೆ ಮೌಲ್ಯ ಕಳೆದುಕೊಂಡಿವೆ. ಏರ್‌ಟೆಲ್, ಐಟಿಸಿ ಅತಿಹೆಚ್ಚು ಮಾರುಕಟ್ಟೆ ಮೌಲ್ಯ ಗಳಿಸಿಕೊಂಡಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್, ಟಾಟಾ ಪವರ್ ಕಂಪನಿ, ಡಿಎಲ್‌ಎಫ್, ಎನ್‌ಟಿಪಿಸಿ, ಟಾಟಾ ಸ್ಟೀಲ್, ಬ್ಯಾಂಕ್ ಆಫ್ ಬರೋಡಾ, ಎಲ್‌ಐಸಿ, ಕೋಲ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಟಾಟಾ ಮೋಟರ್ಸ್ ಡಿವಿಆರ್, ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಕುಸಿದಿವೆ.

ಮುನ್ನೋಟ: ಅಮೆರಿಕ ಫೆಡರಲ್ ಬ್ಯಾಂಕ್‌ನ ಬಡ್ಡಿದರ ನಿರ್ಧಾರ ಈ ವಾರ ಹೊರಬೀಳಲಿದೆ. ಬಡ್ಡಿದರದ ಬಗ್ಗೆ ಅಮೆರಿಕ ಫೆಡರಲ್ ಬ್ಯಾಂಕ್ ಯಾವ ನಿರ್ಣಯ ಕೈಗೊಳ್ಳಲಿದೆ ಎನ್ನುವುದು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿದೆ. ಉಳಿದಂತೆ ಲೋಕಸಭಾ ಚುನಾವಣೆ, ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಕರ್ನಾಟಕದಲ್ಲಿ ₹125 ಕೋಟಿ ಹೂಡಿಕೆ: ಮದರ್ ಡೇರಿ

ಹಣ್ಣು ಸಂಸ್ಕರಣಾ ಘಟಕ ಸ್ಥಾಪನೆ

ನವದೆಹಲಿ (ಪಿಟಿಐ): ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ತನ್ನ ವ್ಯಾಪಾರದ ನೆಲೆಯ ವಿಸ್ತರಣೆಗೆ ಮುಂದಾಗಿರುವ ಮದರ್ ಡೇರಿಯು, ₹650 ಕೋಟಿ ಬಂಡವಾಳ ಹೂಡಿಕೆಗೆ ನಿರ್ಧರಿಸಿದೆ.

ಮಹಾರಾಷ್ಟ್ರದ ನಾಗ್ಪುರದಲ್ಲಿ ₹525 ಕೋಟಿ ವೆಚ್ಚದಡಿ ಹೊಸದಾಗಿ ಹಾಲು ಸಂಸ್ಕರಣಾ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಘಟಕದಲ್ಲಿ ಪ್ರತಿದಿನ 6 ಲಕ್ಷ ಲೀಟರ್ ಹಾಲು ಸಂಸ್ಕರಿಸುವ ಗುರಿ ಹೊಂದಲಾಗಿದೆ. ಅಲ್ಲದೆ, 10 ಲಕ್ಷ ಲೀಟರ್‌ಗೂ ವಿಸ್ತರಿಸುವ ನಿಟ್ಟಿನಲ್ಲಿ ಘಟಕ ನಿರ್ಮಿಸಲಾಗುತ್ತದೆ ಎಂದು ಮದರ್ ಡೇರಿಯ ಹಣ್ಣುಗಳು ಮತ್ತು ತರಕಾರಿಗಳ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಬಂದ್ಲಿಷ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ₹125 ಕೋಟಿ ವೆಚ್ಚದಲ್ಲಿ ಹಣ್ಣಿನ ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು. 'ಸಫಲ್ ಬ್ರ್ಯಾಂಡ್' ಹೆಸರಿನಡಿ ಇದನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇನ್ನು ಎರಡು ವರ್ಷಗಳಲ್ಲಿ ಈ ಘಟಕಗಳ ನಿರ್ಮಾಣ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ನವದೆಹಲಿಯಲ್ಲಿ ಹಾಲು ಪೂರೈಕೆಯಲ್ಲಿ ಮದರ್ ಡೇರಿಯು ಮುಂಚೂಣಿಯಲ್ಲಿದೆ. ಅಲ್ಲಿ ಸಂಸ್ಕರಣಾ ಘಟಕಗಳ ಸಾಮರ್ಥ್ಯ ಹೆಚ್ಚಿಸಲು ₹100 ಕೋಟಿ ಹೂಡಿಕೆಗೆ ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ಡೇರಿ ವ್ಯಾಪ್ತಿಯಲ್ಲಿ ಒಂಬತ್ತು ಹಾಲು ಸಂಸ್ಕರಣಾ ಘಟಕಗಳಿದ್ದು, ಪ್ರತಿದಿನ 50 ಲಕ್ಷ ಲೀಟರ್ ಹಾಲು ಉತ್ಪಾದಿಸಲಾಗುತ್ತಿದೆ.

ಹಣ್ಣು ಮತ್ತು ತರಕಾರಿ ಸಂಸ್ಕರಣೆಯ ನಾಲ್ಕು ಘಟಕಗಳಿವೆ. ಖಾದ್ಯ ತೈಲ ಉತ್ಪಾದನೆಗೆ 15 ಘಟಕಗಳನ್ನು ಹೊಂದಿದೆ. 2022–23ರಲ್ಲಿ ಡೇರಿಯು ₹14,500 ಕೋಟಿ ವಹಿವಾಟು ನಡೆಸಿದೆ.

ತಗ್ಗಿದ ಸೀಮೆಎಣ್ಣೆ ಬಳಕೆ



ನವದೆಹಲಿ (ಪಿಟಿಐ): ದೇಶದಲ್ಲಿ ಸೀಮೆಎಣ್ಣೆ ಬಳಕೆ ಪ್ರಮಾಣವು 2013–14ರಿಂದ 2022–23ರ ನಡುವೆ ಶೇ 26ರಷ್ಟು ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ತಿಳಿಸಿದೆ.

ಕೇಂದ್ರ ಸರ್ಕಾರವು ನವೀಕರಿಸಬಹುದಾದ ಇಂಧನ ನೀತಿಗೆ ಒತ್ತು ನೀಡಿದೆ. ಹಾಗಾಗಿ, ಈ ಅವಧಿಯಲ್ಲಿ ಸೀಮೆಎಣ್ಣೆ ಬಳಕೆ ಕುರಿತಾದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಇಳಿಕೆಯಾಗಿದೆ ಎಂದು ಎನ್‌ಎಸ್‌ಒ ಇತ್ತೀಚೆಗೆ ಪ್ರಕಟಿಸಿರುವ 'ಭಾರತದ ಇಂಧನದ ಅಂಕಿ–ಅಂಶ 2024' ವರದಿ ತಿಳಿಸಿದೆ.

2022–23ರಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಪೈಕಿ ಹೈ ಸ್ಪೀಡ್ ಡೀಸೆಲ್ ಆಯಿಲ್ (ಎಚ್‌ಎಸ್‌ಡಿಒ–ಡೀಸೆಲ್) ಬಳಕೆ ಪ್ರಮಾಣ ಹೆಚ್ಚಿದೆ (ಶೇ 38.52). 2021–22ನೇ ಸಾಲಿಗೆ ಹೋಲಿಸಿದರೆ ಬಳಕೆ ಪ್ರಮಾಣದಲ್ಲಿ ಶೇ 12.05ರಷ್ಟು ಏರಿಕೆ ಆಗಿದೆ.

ಪೆಟ್ರೋಲ್ ಬಳಕೆಯು ಶೇ 13.38 ರಷ್ಟು ಇದ್ದರೆ, ಕಲ್ಲಿದ್ದಲಿಗೆ ಪರ್ಯಾಯವಾಗಿ ಬಳಕೆಯಾಗುವ ಪೆಟ್ರೋಲಿಯಂ ಕೋಕ್ ಬಳಕೆಯು ಶೇ 28.68ರಷ್ಟಿದೆ. ಹೈ ಸ್ಪೀಡ್ ಡೀಸೆಲ್ (ಎಚ್‌ಎಸ್‌ಡಿ–ಡೀಸೆಲ್) ಬಳಕೆಯು ಶೇ 12.05ರಷ್ಟು ಹೆಚ್ಚಳವಾಗಿದೆ ಎಂದು ವರದಿ ತಿಳಿಸಿದೆ.

ಫ್ಲಿಪ್‌ಕಾರ್ಟ್ ಮಾರುಕಟ್ಟೆ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಕಳೆದ ಎರಡು ವರ್ಷಗಳಲ್ಲಿ ಇ-ಕಾಮರ್ಸ್ ಸಂಸ್ಥೆಯಾದ ಫ್ಲಿಪ್‌ಕಾರ್ಟ್‌ನ ಮಾರುಕಟ್ಟೆ ಮೌಲ್ಯವು ₹41 ಸಾವಿರ ಕೋಟಿ ಇಳಿಕೆಯಾಗಿದೆ ಎಂದು ಕಂಪನಿಯ ಮಾತೃಸಂಸ್ಥೆಯಾದ ವಾಲ್‌ಮಾರ್ಟ್ ಹೇಳಿದೆ.

2022ರ ಜನವರಿ ಅಂತ್ಯದಲ್ಲಿ ಫ್ಲಿಪ್‌ಕಾರ್ಟ್‌ನ ಮಾರುಕಟ್ಟೆ ಮೌಲ್ಯ ₹3.31 ಲಕ್ಷ ಕೋಟಿ ಇತ್ತು. ಪ್ರಸಕ್ತ ವರ್ಷದ ಜನವರಿ ಅಂತ್ಯಕ್ಕೆ ₹2.90 ಲಕ್ಷ ಕೋಟಿಗೆ ಕುಸಿದಿದೆ. ಫೋನ್ ಪೇ ವಿಭಜನೆಗೊಂಡು ಸ್ವತಂತ್ರ ಕಂಪನಿಯಾಗಿದೆ. ಇದೇ ಫ್ಲಿಪ್‌ಕಾರ್ಟ್‌ನ ಮಾರುಕಟ್ಟೆ ಮೌಲ್ಯದ ಕುಸಿತಕ್ಕೆ ಕಾರಣವಾಗಿದೆ ಎಂದು ಹೇಳಿದೆ.

ರಷ್ಯಾದಲ್ಲಿ ಮತ್ತೆ ಪುಟಿನ್ ಆಡಳಿತ?

ಮಾಸ್ಕೊ (ಎಎಫ್‌ಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಇನ್ನೂ 6 ವರ್ಷಗಳ ಕಾಲ ದೇಶದಲ್ಲಿ ತಮ್ಮ ಆಡಳಿತ ನಡೆಸಲು ಹಾದಿ ಸುಗಮ ಮಾಡಿಕೊಂಡಿದ್ದು, ಭಾನುವಾರ ಪೂರ್ಣಗೊಂಡ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಪುನರಾಯ್ಕೆಯಾಗುವ ನಿರೀಕ್ಷೆಯಲ್ಲಿದ್ದಾರೆ.

ಶುಕ್ರವಾರ ಪ್ರಾರಂಭವಾದ ಮೂರು ದಿನಗಳ ಚುನಾವಣೆಯು ಬಿಗಿ ಭದ್ರತೆಯ ನಡುವೆ ನಡೆದಿದೆ. ಈ ಚುನಾವಣೆಯಲ್ಲಿ 71 ವರ್ಷದ ಪುಟಿನ್ ತಮ್ಮೊಂದಿಗೆ ಸ್ನೇಹ ಹೊಂದಿರುವ ಪಕ್ಷಗಳ ಮೂವರು ಪ್ರತಿಸ್ಪರ್ಧಿಗಳನ್ನು ಎದುರಿಸುತ್ತಿದ್ದಾರೆ. ಪುಟಿನ್ ಅವರ ರಾಜಕೀಯ ಕಡು ವೈರಿ, ವಿಪಕ್ಷ ನಾಯಕ ಅಲೆಕ್ಸ್ ನವಾಲ್ನಿ ಅವರು ಕಳೆದ ತಿಂಗಳು ಆರ್ಕ್ಟಿಕ್ ಜೈಲಿನಲ್ಲಿ ನಿಧನ ಹೊಂದಿದ್ದು, ಪುಟಿನ್ ಅವರಿಗೆ ಚುನಾವಣೆಯಲ್ಲಿ ಪ್ರಬಲ ಪ್ರತಿಸ್ಪರ್ಧಿಗಳೇ ಇಲ್ಲದಂತಾಗಿದೆ. ಈ ಚುನಾವಣೆಯನ್ನು ಪಾಶ್ಚಿಮಾತ್ಯ ದೇಶಗಳ ನಾಯಕರು 'ಪ್ರಜಾಪ್ರಭುತ್ವದ ಅಣಕ' ಎಂದು ವ್ಯಂಗ್ಯವಾಡಿದ್ದಾರೆ.

ವಿಶಾಲ ದೇಶದ 11 ವಲಯಗಳಾದ್ಯಂತ ಮತದಾನ ಕೇಂದ್ರಗಳಲ್ಲಿ, ಉಕ್ರೇನ್‌ನಿಂದ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡ ಪ್ರದೇಶಗಳಲ್ಲಿ ಮತ್ತು ಆನ್‌ಲೈನ್‌ನಲ್ಲಿ ಮತದಾನ ನಡೆಯಿತು. ಅರ್ಹ ಮತದಾರರಲ್ಲಿ ಶೇ 60ಕ್ಕೂ ಹೆಚ್ಚು ಮಂದಿ ಭಾನುವಾರ ಮತ ಚಲಾಯಿಸಿದರು.

ಬಿಗಿ ಭದ್ರತೆಯ ಹೊರತಾಗಿಯೂ, ಹಲವು ಕಡೆ ಮತದಾನ ಕೇಂದ್ರಗಳಲ್ಲಿ ಅನೇಕ ಹಿಂಸಾಚಾರದ ಪ್ರಕರಣಗಳು ವರದಿಯಾಗಿವೆ.

ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಮಹಿಳೆಯೊಬ್ಬರು ಮತದಾನ ಕೇಂದ್ರದ ಪ್ರವೇಶದ್ವಾರದಲ್ಲಿ ಫೈರ್‌ಬಾಂಬ್ ಎಸೆದಿದ್ದು, ನಂತರ ಆಕೆಯನ್ನು ಬಂಧಿಸಲಾಯಿತು. ಮತಪೆಟ್ಟಿಗೆಗಳಿಗೆ ಸ್ಯಾನಿಟೈಸರ್, ಶಾಯಿ ಎಸೆದಿದ್ದಕ್ಕಾಗಿ ದೇಶಾದ್ಯಂತ ಹಲವು ಮಂದಿಯನ್ನು ಬಂಧಿಸಲಾಗಿದೆ. ಪುಟಿನ್ ಅಥವಾ ಯುದ್ಧದ ಬಗ್ಗೆ ಅಸಮಾಧಾನ ಹೊಂದಿರುವವರು ಭಾನುವಾರ ಮಧ್ಯಾಹ್ನ ಮತದಾನಕ್ಕೆ ಬರುವ ಮೂಲಕ ತಮ್ಮ ಪ್ರತಿಭಟನೆ ವ್ಯಕ್ತಪಡಿಸುವಂತೆ ರಷ್ಯಾದ ಕೆಲ ವಿರೋಧ ಪಕ್ಷಗಳು ಒತ್ತಾಯಿಸಿದ್ದವು.

ಎಂ–ಕ್ಯಾಪ್: ₹2.23 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ ಐದು ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ಕಳೆದ ವಾರ ₹2.23 ಲಕ್ಷ ಕೋಟಿಯಷ್ಟು ಕರಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಎಂ–ಕ್ಯಾಪ್ ಹೆಚ್ಚು ಇಳಿಕೆ ಕಂಡಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹81,763 ಕೋಟಿ, ಎಲ್‌ಐಸಿ ₹63,629 ಕೋಟಿ, ಎಸ್‌ಬಿಐ ₹50,111 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹21,792 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯವು ₹6,363 ಕೋಟಿ ಇಳಿಕೆಯಾಗಿದೆ. ಟಿಸಿಎಸ್ ₹38,858 ಕೋಟಿ, ಭಾರ್ತಿ ಏರ್‌ಟೆಲ್ ₹11,976 ಕೋಟಿ, ಐಟಿಸಿ ₹7,738 ಕೋಟಿ, ಇನ್ಫೊಸಿಸ್ ₹7,450 ಕೋಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ₹4,443 ಕೋಟಿ ಗಳಿಸಿವೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹215-427
ದ್ವಿತಳಿ (ಬಿ.ವಿ)	₹275-550

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹460
12 ಕ್ಕೆ	₹62
ಮೈಸೂರು 100ಕ್ಕೆ	₹462

ಉತ್ತಮ ಇಳುವರಿ ನಿರೀಕ್ಷೆ: ರೈತರ ಮೊಗದಲ್ಲಿ ಮಂದಹಾಸ

ಬರದ ನಡುವೆ ಜೋಳ ಭರಪೂರ

● ಸಂತೋಷ ಈ. ಚಿನಗುಡಿ

ಬೆಳಗಾವಿ: ರಾಜ್ಯದಲ್ಲಿ ಈ ಬಾರಿ ಬರದ ಛಾಯೆ ಆವರಿಸಿದ್ದರೂ ಹಿಂಗಾರು ಹಂಗಾಮಿನಡಿ ಬಿತ್ತಿದ್ದ ಜೋಳದ ಫಸಲು ಹುಲುಸಾಗಿ ಬೆಳೆದಿದೆ. ಹಾಗಾಗಿ, ಪ್ರತಿ ಎಕರೆವಾರು ಇಳುವರಿ ಹೆಚ್ಚಳವಾಗಲಿದೆ ಎಂದು ಕೃಷಿ ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಅತಿಹೆಚ್ಚು 1.06 ಲಕ್ಷ ಹೆಕ್ಟೇರ್‌ನಲ್ಲಿ ಜೋಳ ಬಿತ್ತನೆಯಾಗಿದೆ. ಎರಡನೇ ಸ್ಥಾನದಲ್ಲಿ ಕಲಬುರಗಿ ಜಿಲ್ಲೆ ಇದ್ದು, 87.66 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ 63.33 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ. ಕೋಲಾರದಲ್ಲಿ ಮೂರು ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಉಳಿದಂತೆ, ಮಣ್ಣಿನ ಗುಣಧರ್ಮದ ಕಾರಣ 10 ಜಿಲ್ಲೆಗಳಲ್ಲಿ ದಶಕದಿಂದಲೂ ಜೋಳ ಬಿತ್ತಿಲ್ಲ.

'ಸಾಮಾನ್ಯವಾಗಿ ಎಕರೆಗೆ 10ರಿಂದ 12 ಕ್ವಿಂಟಲ್ ಜೋಳದ ಇಳುವರಿ ಬರುತ್ತದೆ. ಈ ಬಾರಿ ಹಿಂಗಾರಿ ಜೋಳದ ಕಾಳು ದಪ್ಪವಾಗಿದ್ದು, ತೆನೆಗಳೂ ಹುಲುಸಾಗಿವೆ. ಹೀಗಾಗಿ, 14 ರಿಂದ 15 ಕ್ವಿಂಟಲ್ ಇಳುವರಿ ಬರಲಿದೆ' ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

'ಅಕ್ಟೋಬರ್ ಕೊನೆಯ ವಾರದಲ್ಲಿ ಸುರಿದ ಮಳೆಗೆ ಕೆಲವು ಜಿಲ್ಲೆಗಳಲ್ಲಿ ರೈತರು ಜೋಳ ಬಿತ್ತಿದ್ದಾರೆ. ಬಿತ್ತನೆ ವೇಳೆ ಅಗತ್ಯ ತೇವಾಂಶ ಸಿಗದ ಕಾರಣ ಕಾಳುಗಳು ಸಣ್ಣದಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿವೆ. ಇಳುವರಿ ಕಡಿಮೆ ಆಗಿಲ್ಲ. ನವೆಂಬರ್ ಮೊದಲ ವಾರದಲ್ಲಿ ಸುರಿದ ಮಳೆಗೆ ಕಾಳುಗಳು ದಪ್ಪವಾಗಿವೆ' ಎಂಬುದು ಅವರ ಮಾಹಿತಿ.

ವೈಜ್ಞಾನಿಕ ಕಾರಣ ಏನು?: 'ಮಳೆ ಕೊರತೆ ಕಂಡುಬಂದರೂ ಜೋಳದ ಫಸಲು ಉತ್ತಮವಾಗಿ ಬರಲು ಮಣ್ಣಿನ ತೇವಾಂಶದ ಹೊರಚಿಮ್ಮುವಿಕೆ ಕಾರಣವಾಗಿದೆ. ವೈಜ್ಞಾನಿಕ ಭಾಷೆಯಲ್ಲಿ ಇದಕ್ಕೆ 'ಕ್ಯಾಪಿಲರಿ ರೈಸ್' ಎಂದು ಹೇಳುತ್ತೇವೆ. ಈ ಕ್ರಿಯೆಯು ಕಪ್ಪು ಮಣ್ಣಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಸಂಭವಿಸುತ್ತದೆ. ಕಪ್ಪು ಮಣ್ಣಿನಲ್ಲಿ ರಂಧ್ರಗಳು ತುಸು ಅಗಲ ಇರುತ್ತವೆ. ಅದರ ಮೂಲಕ ಗಾಳಿ ಮಣ್ಣಿನ ಒಡಲು ಸೇರಿ ತೇವಾಂಶವನ್ನು ಮೇಲಕ್ಕೆ ಚಿಮ್ಮಿಸುತ್ತದೆ. ಇದು ಸಸಿಯ ಬೇರುಗಳನ್ನು ಪೋಷಣೆ ಮಾಡಿ ಇಳುವರಿ ಹೆಚ್ಚಿಸುತ್ತದೆ' ಎಂದು ಸಹಾಯಕ ಕೃಷಿ ನಿರ್ದೇಶಕ ಸಿ.ಐ. ಹೂಗಾರ ಮಾಹಿತಿ ನೀಡಿದರು.



ಬೆಳಗಾವಿ ಜಿಲ್ಲೆಯ ಯರಗಟ್ಟಿ ಗ್ರಾಮದ ರೈತರೊಬ್ಬರ ಹೊಲದಲ್ಲಿ ಹುಲುಸಾಗಿ ಬೆಳೆದಿರುವ ಜೋಳ –ಪ್ರಜಾವಾಣಿ ಚಿತ್ರ

ಜಿಲ್ಲಾವಾರು ಜೋಳ ಬಿತ್ತನೆ

ಜಿಲ್ಲೆ	ನೀರಾವರಿ	ಮಳೆಯಾಶ್ರಿತ	ಒಟ್ಟು
	(ಹೆಕ್ಟೇರ್‌ಗಳಲ್ಲಿ)		
ಬೆಳಗಾವಿ	6,580	1,00,202	1,06,782
ಕಲಬುರಗಿ	1,265	86,355	87,620
ವಿಜಯಪುರ	2,689	60,645	63,334
ಬಾಗಲಕೋಟೆ	8,718	50,158	58,876
ರಾಯಚೂರು	30,098	22,292	52,390
ಗದಗ	2,535	42,461	44,996
ಹಾವೇರಿ	3,754	30,018	33,772
ಧಾರವಾಡ	385	25,626	26,011
ಕೊಪ್ಪಳ	00	21,480	21,480
ಬಳ್ಳಾರಿ	13,332	2,315	15,647

ಮುಂಗಾರಿನಲ್ಲಿ ಸೋಯಾಬಿನ್ ಬೆಳೆದಿದ್ದೆ. ಅದು ಕೈಕೊಟ್ಟಿತು. ಅದನ್ನು ತೆಗೆದು ಹಿಂಗಾರಿ ಬಿಳಿಜೋಳ ಬೆಳೆದೆ. ಉತ್ತಮ ಫಸಲು ಬಂದಿದೆ
ಶ್ರೀಮಂತಪ್ಪ ಖಾರಿ, ರೈತ, ಯರಗಟ್ಟಿ

ಹದವಾದ ಮಳೆ ಸುರಿದ ವೇಳೆ ಜೋಳ ಬಿತ್ತನೆ ಮಾಡಲು ರೈತರಿಗೆ ಮಾರ್ಗದರ್ಶನ ಮಾಡಿದ್ದೆವು. ಉತ್ತಮ ಇಳುವರಿ ಬಂದಿದೆ
ಶಿವನಗೌಡ ಪಾಟೀಲ, ಜಂಟಿ ಕೃಷಿ ನಿರ್ದೇಶಕ, ಬೆಳಗಾವಿ

ನೆಲಕಚ್ಚಿದ ಧಾರಣೆ

ದೀಪಾವಳಿ ಸಂದರ್ಭದಲ್ಲಿ ಒಂದು ಕ್ವಿಂಟಲ್‌ಗೆ ₹7,300 ಇದ್ದ ಬಿಳಿಜೋಳದ ದರ ಈಗ ₹3,500ಕ್ಕೆ ಕುಸಿದಿದೆ. ಹಾಗಾಗಿ, ರೈತರು ಕಂಗಾಲಾಗಿದ್ದಾರೆ.

'ಈ ಬಾರಿ ಹಳೆ ಜೋಳದ ದರ ಹೆಚ್ಚಾಗುತ್ತದೆ ಎಂಬ ನಿರೀಕ್ಷೆ ಇತ್ತು. ಆದರೆ, ಈಗ ಪರಿಸ್ಥಿತಿ ತದ್ವಿರುದ್ಧವಾಗಿದೆ. ಹೈಬ್ರೀಡ್ ತಳಿಯ ಇಳುವರಿ ಉತ್ತಮವಾಗಿ ಬಂದಿರುವುದರಿಂದ ಮಾರುಕಟ್ಟೆಗೆ ಆವಕ ಹೆಚ್ಚಾಗಿದೆ. ಇದರಿಂದ ದರ ಕುಸಿತವಾಗಿದೆ' ಎನ್ನುತ್ತಾರೆ ರೈತ ಮುಖಂಡ ಸಿದಗೌಡ ಮೋದಗಿ.

'ಮಹಾರಾಷ್ಟ್ರದ ಸಗಟು ಮಾರುಕಟ್ಟೆಯಲ್ಲಿಯೂ ದರ ಕುಸಿದಿದೆ. ಇದು ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ ಜಿಲ್ಲೆಯಲ್ಲಿನ ಜೋಳದ ದರದ ಮೇಲೆ ಪರಿಣಾಮ ಬೀರುತ್ತದೆ' ಎನ್ನುವುದು ಎಪಿಎಂಸಿ ಅಧಿಕಾರಿಗಳ ವಿವರಣೆ.

ಚುನಾವಣಾ ಬಾಂಡ್ ಪ್ರಾಯೋಗಿಕ: ಹೊಸಬಾಳೆ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆ ಒಂದು 'ಪ್ರಯೋಗ' ಆಗಿದ್ದು, ಅದು ಎಷ್ಟು ಪರಿಣಾಮಕಾರಿ ಎಂಬುದು ಮುಂದಿನ ದಿನಗಳಲ್ಲಿ ತಿಳಿಯಲಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಚುನಾವಣಾ ಬಾಂಡ್‌ಗೆ ಸಂಬಂಧಿಸಿ ವ್ಯಕ್ತವಾಗಿರುವ ಕಳವಳಗಳ ಬಗ್ಗೆ ಕೇಳಿದಾಗ ಹೊಸಬಾಳೆ, 'ಯೋಜನೆಯು ಪ್ರಾಯೋಗಿಕ ಹಂತದಲ್ಲಿರುವುದರಿಂದ ಸಂಘವು ಅದರ ಬಗ್ಗೆ ಇನ್ನೂ ಚರ್ಚಿಸಿಲ್ಲ' ಎಂದು ಉತ್ತರಿಸಿದರು.

'ಚುನಾವಣಾ ಬಾಂಡ್ ಅನ್ನು ಇದ್ದಕ್ಕಿದ್ದಂತೆ ಪರಿಚಯಿಸಲಾಗಿಲ್ಲ. ಅಂತಹದೇ ಯೋಜನೆಯನ್ನು ಈ ಹಿಂದೆಯೂ ಜಾರಿಗೆ ತರಲಾಗಿತ್ತು. ಒಂದು ವ್ಯವಸ್ಥೆಯಲ್ಲಿ ಬದಲಾವಣೆ ತಂದಾಗ, ಪ್ರಶ್ನೆಗಳನ್ನು ಎತ್ತಲಾಗುತ್ತದೆ. ಇವಿಎಂಗಳನ್ನು (ವಿದ್ಯುನ್ಮಾನ ಮತಯಂತ್ರಗಳು) ಪರಿಚಯಿಸಿದಾಗಲೂ ಪ್ರಶ್ನೆಗಳು ಎದ್ದಿದ್ದವು' ಎಂದು ಇನ್ನೊಂದು ಅವಧಿಗೆ ಸಂಘದ ಸರಕಾರ್ಯವಾಹ ಆಗಿ ಭಾನುವಾರ ಪುನರಾಯ್ಕೆಯಾದ ಅವರು ತಿಳಿಸಿದರು.

ಕೇಜ್ರಿವಾಲ್‌ಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿ ಜಲ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿದೆ.

ದೆಹಲಿಯಲ್ಲಿರುವ ಇ.ಡಿ ಕಚೇರಿಗೆ ಮಾರ್ಚ್ 18ರಂದು ವಿಚಾರಣೆಗೆ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಸೂಚಿಸಲಾಗಿದೆ. ಈ ವೇಳೆ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯ ಅಬಕಾರಿ ನೀತಿ ಹಗರಣ ಪ್ರಕರಣ ಸಂಬಂಧ ಕೇಜ್ರಿವಾಲ್ ಅವರಿಗೆ ಇ.ಡಿ ಎಂಟು ಸಮನ್ಸ್ ನೀಡಿದೆ. ಆದರೆ, ವಿಚಾರಣೆಗೆ ಹಾಜರಾಗಿಲ್ಲ.

ಚುನಾವಣಾ ರ‍್ಯಾಲಿಯಲ್ಲಿ ಡೊನಾಲ್ಡ್ ಟ್ರಂಪ್ ಬೆದರಿಕೆ

'ಅಧ್ಯಕ್ಷನಾಗಿ ಆಯ್ಕೆ ಮಾಡದಿದ್ದರೆ ರಕ್ತಪಾತ'



ಡೊನಾಲ್ಡ್ ಟ್ರಂಪ್

ವಂಡಾಲಿಯಾ (ಅಮೆರಿಕ) (ಎಎಫ್‌ಪಿ): 'ಅಮೆರಿಕ ಅಧ್ಯಕ್ಷರಾಗಿ ನನ್ನನ್ನು ಆಯ್ಕೆ ಮಾಡದಿದ್ದರೆ ರಾಷ್ಟ್ರದಲ್ಲಿ ರಕ್ತಪಾತವಾಗಲಿದೆ' ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ.

ರಿಪಬ್ಲಿಕನ್ ಅಭ್ಯರ್ಥಿಯಾಗಿ ತಮ್ಮ ಸ್ಥಾನ ಭದ್ರಪಡಿಸಿಕೊಂಡ ಕೆಲವು ದಿನಗಳ ನಂತರ, ಶನಿವಾರ ಓಹಿಯೋದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಅವರು ಮಾತನಾಡಿದರು.

'ಮೆಕ್ಸಿಕೊದಲ್ಲಿ ಕಾರುಗಳನ್ನು ತಯಾರಿಸಿ ಅವುಗಳನ್ನು ಅಮೆರಿಕನ್ನರಿಗೆ ಮಾರಾಟ ಮಾಡುವುದು ಚೀನಿಯರ ಯೋಜನೆಗಳಾಗಿವೆ. ನಾನು ಅಧ್ಯಕ್ಷನಾಗಿ ಆಯ್ಕೆಯಾದರೆ, ಚೀನಾದ ಆಮದು ಕಾರಿಗೆ ಶೇ 100 ತೆರಿಗೆ ವಿಧಿಸುವೆ. ಆಗ ಒಂದೇ ಒಂದು ಕಾರು ಮಾರಾಟ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ' ಎಂದು ಗುಡುಗಿದರು.

'ಈಗ ನಾನು ಚುನಾಯಿತನಾಗದಿದ್ದರೆ ಅದು ರಕ್ತಪಾತಕ್ಕೆ ಕಾರಣವಾಗುತ್ತದೆ. ಆಗ ಇಡೀ ರಾಷ್ಟ್ರದಲ್ಲಿ ರಕ್ತದೋಕುಳಿಯಾಗಲಿದೆ. ಅದು ಕನಿಷ್ಠವಾಗಿರಬಹುದು. ಆದರೆ, ಆಗ ಅವರು ಆ ಕಾರುಗಳನ್ನು ಮಾರಾಟ ಮಾಡಲು ಹೋಗುವುದಿಲ್ಲ' ಎಂದರು.

'ನವೆಂಬರ್ 5ರ ದಿನಾಂಕ ನೆನಪಿಟ್ಟುಕೊಳ್ಳಿ, ಅಂದು ನಡೆಯಲಿರುವ ಅಧ್ಯಕ್ಷೀಯ ಚುನಾವಣೆ ಅಮೆರಿಕ ಇತಿಹಾಸದಲ್ಲಿಯೇ ಅತ್ಯಂತ ಪ್ರಮುಖ ದಿನ. ತಾನು ನಡೆಸುತ್ತಿರುವ ಪ್ರಚಾರವು ದೇಶಕ್ಕೆ ಒಂದು ಮಹತ್ವದ ತಿರುವು ನೀಡಲಿದೆ' ಎಂದು ಬಣ್ಣಿಸಿದರು. ತಮ್ಮ ಎದುರಾಳಿ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಜೋ ಬೈಡನ್ ಅವರ ವಿರುದ್ಧ ಹರಿಹಾಯ್ದ ಟ್ರಂಪ್, ಬೈಡನ್ ದೇಶದ ಅತ್ಯಂತ ಕೆಟ್ಟ ಅಧ್ಯಕ್ಷ ಎಂದು ಟೀಕಿಸಿದರು.

ಟ್ರಂಪ್ ಮಾನಸಿಕ ಅಸ್ವಸ್ಥ: ಬೈಡನ್



ಜೋ ಬೈಡನ್

ವಾಷಿಂಗ್ಟನ್ (ಎಪಿ): 'ಇಬ್ಬರು ಅಭ್ಯರ್ಥಿಗಳು ತಮ್ಮ ಪಕ್ಷಗಳ ಅಧ್ಯಕ್ಷೀಯ ನಾಮನಿರ್ದೇಶನವನ್ನು ಗೆದ್ದಿದ್ದಾರೆ. ಅದರಲ್ಲಿ ಒಬ್ಬರಿಗೆ ತುಂಬಾ ವಯಸ್ಸಾಗಿದ್ದು, ಮಾನಸಿಕವಾಗಿ ಕೆಲಸ ಮಾಡಲು ಅನರ್ಹರಾಗಿದ್ದರೆ, ಮತ್ತೊಬ್ಬ ನಾನಾಗಿದ್ದೇನೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ವ್ಯಂಗ್ಯವಾಡಿದರು.

ಗ್ರಿಡಿರಾನ್ ಕ್ಲಬ್ ಮತ್ತು ಫೌಂಡೇಷನ್ ಆಯೋಜಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಿದ್ದ ಬೈಡನ್ ಅವರು ಟ್ರಂಪ್ ವಿರುದ್ಧ ವಾಗ್ದಾಳಿ ಮುಂದುವರಿಸಿದರು. 'ಟ್ರಂಪ್ (77 ವರ್ಷ) ಅವರ ನೆನಪಿನ ಶಕ್ತಿ ಕುಸಿದಿದ್ದು, ಅವರು ಗೊಂದಲಕ್ಕೆ ಒಳಗಾಗಿದ್ದಾರೆ ಎಂಬ ಟೀಕೆಗಳನ್ನು ಎದುರಿಸುತ್ತಿದ್ದಾರೆ' ಎಂದು 81 ವರ್ಷದ ಬೈಡನ್ ಹೇಳಿದರು. 'ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವು ಅಕ್ಷರಶಃ ಆಕ್ರಮಣಕ್ಕೆ ಒಳಗಾಗುತ್ತಿದೆ. ಒಂದೆಡೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಯುರೋಪ್‌ನಲ್ಲಿ ಮೆರೆಯುತ್ತಿದ್ದಾರೆ. ಆದರೆ, ನಮ್ಮ ಹಿಂದಿನ ಅಧ್ಯಕ್ಷರು ಪುಟಿನ್ ಎದುರು ತಲೆಬಾಗಿಸುತ್ತಾರೆ ಮತ್ತು ಅವರಿಗೆ ನೀವು ಏನು ಬೇಕಾದರೂ ಮಾಡಿ ಎಂದು ಹೇಳುತ್ತಾರೆ' ಎಂದು ಬೈಡನ್ ಹೇಳಿದರು. ಬಳಿಕ ಉಕ್ರೇನ್‌ನ ರಾಯಭಾರಿ ಒಕ್ಸಾನಾ ಮಾರ್ಕರೋವಾ ಮತ್ತು ಎಸ್ಟೋನಿಯದ ಪ್ರಧಾನಿ ಕಾಜಾ ಕಲ್ಲಾಸ್ ಅವರನ್ನು ಪರಿಚಯಿಸಿದ ಟ್ರಂಪ್, 'ಅವರಾಗಲಿ, ನಾವಾಗಲಿ ತಲೆಬಾಗುವುದಿಲ್ಲ' ಎಂದರು.

ಡಬ್ಲ್ಯುಪಿಎಲ್ • ಸ್ಮೃತಿ ಮಂದಾನ ಬಳಗದ ಸಾಧನೆ • ಕನ್ನಡತಿ ಶ್ರೇಯಾಂಕ ಪಾಟೀಲ ಸ್ಪಿನ್ ಮೋಡಿ • ಸೋಫಿ ಮ್ಯಾಜಿಕ್ ಓವರ್ • ಡೆಲ್ಲಿ ಕ್ಯಾಪಿಟಲ್ಸ್‌ಗೆ ನಿರಾಸೆ

ಆರ್‌ಸಿಬಿ ಕನಸು ನನಸಾಗಿಸಿದ ವನಿತೆಯರು

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳೆಯರ ತಂಡವು ಭಾನುವಾರ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಪ್ರಶಸ್ತಿ ಗೆದ್ದಿತು. ಆರ್‌ಸಿಬಿ ತಂಡದ ಅಭಿಮಾನಿಗಳ 'ಕನಸು' ಈಡೇರಿತು.

ಆರ್‌ಸಿಬಿ ಪುರುಷರ ತಂಡವು 16 ವರ್ಷಗಳಿಂದ ಪ್ರಶಸ್ತಿ ಜಯಿಸುವ ಕನಸು ಈಡೇರಿಲ್ಲ. ಆದರೆ ಇದೀಗ ಸ್ಮೃತಿ ಮಂದಾನ ನಾಯಕತ್ವದ ಮಹಿಳಾ ತಂಡವು ಡಬ್ಲ್ಯುಪಿಎಲ್‌ನ ಎರಡನೇ ಆವೃತ್ತಿಯಲ್ಲಿಯೇ ಪ್ರಶಸ್ತಿ ಜಯಿಸಿತು. ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ 8 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಭೇರಿ ಬಾರಿಸಿತು.

ಮುಖ್ಯಾಂಶಗಳು

- ಪ್ರಶಸ್ತಿ ಗೆದ್ದ ಆರ್‌ಸಿಬಿ ತಂಡಕ್ಕೆ ₹6 ಕೋಟಿ ಬಹುಮಾನ
- ರನ್ನರ್ಸ್ ಅಪ್ ಡೆಲ್ಲಿ ಕ್ಯಾಪಿಟಲ್ಸ್‌ಗೆ ₹3 ಕೋಟಿ ಬಹುಮಾನ
- ಶ್ರೇಯಾಂಕ ಪಾಟೀಲಗೆ ಪರ್ಪಲ್ ಕ್ಯಾಪ್, ಎಲಿಸ್ ಪೆರಿಗೆ ಆರೇಂಜ್ ಕ್ಯಾಪ್

ಆರ್‌ಸಿಬಿ ತಂಡದ ಸೋಫಿ ಮಾಲಿನೊ ಅವರ 'ಮ್ಯಾಜಿಕ್ ಓವರ್' ಮತ್ತು ಕನ್ನಡತಿ ಶ್ರೇಯಾಂಕ ಪಾಟೀಲ ಸ್ಪಿನ್ ಮೋಡಿಯಿಂದಾಗಿ ಬೆಂಗಳೂರು ತಂಡವು ಜಯಭೇರಿ ಬಾರಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಡೆಲ್ಲಿ ತಂಡವು 18.3 ಓವರ್‌ಗಳಲ್ಲಿ 113 ರನ್ ಗಳಿಸಿತು. ಈ ಸಾಧಾರಣ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ಜಯ ಸುಲಭವಾಗಿ ಒಲಿಯಲಿಲ್ಲ. ಡೆಲ್ಲಿ ಬೌಲರ್‌ಗಳ ತಂತ್ರಗಾರಿಕೆಯನ್ನು ಎಚ್ಚರಿಕೆಯಿಂದ ಎದುರಿಸುವ ಸವಾಲನ್ನು ಆರ್‌ಸಿಬಿ ಎದುರಿಸಿತು. ಇದರಿಂದಾಗಿ ಫಲಿತಾಂಶವು ಕೊನೆಯ ಓವರ್‌ನಲ್ಲಿ ನಿರ್ಧಾರವಾಯಿತು. ಕೊನೆಯ ಓವರ್‌ನ ನಾಲ್ಕು ಎಸೆತಗಳಲ್ಲಿ ತಂಡದ ಗೆಲುವಿಗೆ ಮೂರು ರನ್‌ಗಳು ಬೇಕಿದ್ದವು. ಆಗ ರಿಚಾ ಘೋಷ್ ಗಳಿಸಿದ ವಿಜಯ ಬೌಂಡರಿಯೊಂದಿಗೆ ಆರ್‌ಸಿಬಿ ಸಂಭ್ರಮ ಗರಿಗೆದರಿತು. ಡೆಲ್ಲಿ ತಂಡವು ಸತತ ಎರಡನೇ ವರ್ಷವೂ ರನ್ನರ್ಸ್ ಅಪ್ ಆಯಿತು.

ಸೋಫಿ–ಶ್ರೇಯಾಂಕ ಮೋಡಿ: ಮೆಗ್ ಲ್ಯಾನಿಂಗ್ (23; 23ಎ, 4X3) ಮತ್ತು ಶಫಾಲಿ ವರ್ಮಾ (44; 27ಎ, 4X2, 6X3) ಅವರಿಬ್ಬರೂ ಡೆಲ್ಲಿ ತಂಡಕ್ಕೆ ಅಮೋಘ ಆರಂಭ ನೀಡಿದರು. ಅದರಿಂದಾಗಿ ಕೇವಲ ಏಳು ಓವರ್‌ಗಳಲ್ಲಿ ತಂಡವು ವಿಕೆಟ್ ನಷ್ಟವಿಲ್ಲದೇ 64 ರನ್ ಸೇರಿಸಿತ್ತು. ಆದರೆ ನಂತರದ 49 ರನ್‌ಗಳ ಅಂತರದಲ್ಲಿ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು.

ಎಂಟನೇ ಓವರ್‌ನಲ್ಲಿ ಮೂರು ವಿಕೆಟ್ ಕಿತ್ತು ತಮ್ಮ ಖಾತೆಗೆ ಸೇರಿಸಿಕೊಂಡ ಆಸ್ಟ್ರೇಲಿಯಾದ ಎಡಗೈ ಸ್ಪಿನ್ನರ್ ಸೋಫಿ (20ಕ್ಕೆ3) ಡೆಲ್ಲಿ ತಂಡಕ್ಕೆ ದೊಡ್ಡ ಆಘಾತ ನೀಡಿದರು.

ಸೋಫಿ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಶಫಾಲಿ ಅವರು ಜಾರ್ಜಿಯಾ ವೆರ್ಹಾಮ್‌ಗೆ ಕ್ಯಾಚಿತ್ತರು. ಡೆಲ್ಲಿ ತಂಡದ ಭರವಸೆಯ ಬ್ಯಾಟರ್ ಜೆಮಿಮಾ ರಾಡ್ರಿಗಸ್ ತಾವೆದುರಿಸಿದ ಎರಡನೇ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ನಂತರದ ಎಸೆತದಲ್ಲಿ ಅಲೈಸ್ ಕ್ಯಾಪ್ಸಿಯನ್ನೂ ಬೌಲ್ಡ್ ಮಾಡಿದ ಸೋಫಿ ಸಂಭ್ರಮಿಸಿದರು. ಇಬ್ಬರೂ ಪ್ರಮುಖ ಬ್ಯಾಟರ್‌ಗಳು ಖಾತೆ ತೆರೆಯದೇ ಮರಳಿದ್ದು ದೊಡ್ಡ ನಷ್ಟವಾಯಿತು.

ತಂಡದ ಮೊತ್ತ ಹೆಚ್ಚಿಸಲು ಪ್ರಯತ್ನಿಸಿದ ರಾಧಾ ಯಾದವ್ (12; 9ಎ) ಅವರನ್ನು ತಮ್ಮ ಚುರುಕಾದ ಫೀಲ್ಡಿಂಗ್ ಮತ್ತು ನೇರ ಥ್ರೋ ಮೂಲಕ ರನೌಟ್ ಮಾಡಿದ ಸೋಫಿ ಮಾಲಿನೊ ಆರ್‌ಸಿಬಿಗೆ ಮತ್ತೊಂದು ಕಾಣಿಕೆ ನೀಡಿದರು. ಸೋಫಿ ಮಾಡಿದ ಗಾಯಕ್ಕೆ ಕರ್ನಾಟಕದ ಆಫ್‌ಸ್ಪಿನ್ನರ್ ಶ್ರೇಯಾಂಕ (3.3–0–12–4) ಉಪ್ಪು ಸವರಿದರು.

ಆರಂಭಿಕ ಬ್ಯಾಟರ್ ಮೆಗ್ ಲ್ಯಾನಿಂಗ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. 15ನೇ ಓವರ್‌ನಲ್ಲಿ ಮಿನು ಮಣಿಗೂ ಡಗ್‌ಔಟ್ ಹಾದಿ ತೋರಿಸಿದರು.

19ನೇ ಓವರ್‌ನಲ್ಲಿ ಅರುಂಧತಿ ರೆಡ್ಡಿಯನ್ನು ಕ್ಲೀನ್ ಬೌಲ್ಡ್ ಮಾಡಿದರು. ಅದೇ ಓವರ್‌ನಲ್ಲಿ ತಾನಿಯಾ ಭಾಟಿಯಾ ಅವರು ವಿಕೆಟ್‌ಕೀಪರ್ ರಿಚಾಗೆ ಕ್ಯಾಚ್ ಆದರು. ಲೆಗ್ ಸ್ಪಿನ್ನರ್ ಆಶಾ ಶೋಭನಾ (14ಕ್ಕೆ2) ಡೆಲ್ಲಿ ತಂಡದ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ತಮ್ಮ ಒಂದೇ ಓವರ್‌ನಲ್ಲಿ ಮರಿಝಾನ್ ಕ್ಯಾಪ್ ಮತ್ತು ಜೆಸ್ ಯಾನ್ಸೆನ್ ವಿಕೆಟ್‌ಗಳನ್ನು ಉರುಳಿಸಿದರು.



ಪ್ರಶಸ್ತಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮ —ಎಎಫ್‌ಪಿ ಚಿತ್ರ



ರಾಯಲ್ ಚಾಲೆಂಜರ್ಸ್ ತಂಡದ ಸಹ ಆಟಗಾರ್ತಿಯನ್ನು ತಪ್ಪಿಕೊಂಡು ಸಂಭ್ರಮಿಸಿದ ಕನ್ನಡತಿ ಶ್ರೇಯಾಂಕ ಪಾಟೀಲ –ಪಿಟಿಐ ಚಿತ್ರ

ಹೆಣ್ಮಕ್ಕಳೇ ಸ್ಟ್ರಾಂಗು ಗುರು ..

ಆರ್‌ಸಿಬಿ ಮಹಿಳಾ ತಂಡವು ಜಯಿಸುತ್ತಿದ್ದಂತೆ ಸಾಮಾಜಿಕ ಜಾಲತಾಣಗಳಲ್ಲಿ ಮೆಚ್ಚುಗೆಯ ಮಹಾಪೂರವೇ ಹರಿಯಿತು. ಹೆಣ್ಮಕ್ಕಳೇ ಸ್ಟ್ರಾಂಗು ಗುರು ಎಂಬ ಸಂದೇಶಗಳು ಹರಿದಾಡಿದವು. ಕೆಲವು ಅಭಿಮಾನಿಗಳು ಪುನೀತ್ ರಾಜಕುಮಾರ್ ಅಭಿನಯದ ಜಾಕಿ ಚಿತ್ರದ ಈ ಹಾಡು (ಹೆಣ್ಮಕ್ಕಳೇ ಸ್ಟ್ರಾಂಗು ಗುರು ..) ಎಂದು ನೆನಪಿಸಿಕೊಂಡರು. ಅಲ್ಲದೇ ಪುನೀತ್ ಜನ್ಮದಿನದಂದೇ (ಮಾರ್ಚ್ 17) ಮಹಿಳಾ ತಂಡದ ಸಾಧನೆ ಮೂಡಿಬಂದಿದ್ದು ವಿಶೇಷ ಎಂಬ ಸಂದೇಶಗಳನ್ನೂ ಪೋಸ್ಟ್ ಮಾಡಿದರು.

ಅಭಿಮಾನಿಗಳಿಗೆ ಅರ್ಪಣೆ

'ಈ ಸಲ ಕಪ್ ನಮ್ದೆ ಎಂದು ಅವರು (ಪುರುಷರ ತಂಡ) ಹೇಳುತ್ತಲೇ ಇದ್ದರು. ನಾವು ಈಗ ಗೆದ್ದೆವು. ಇದು ಅಭಿಮಾನಿಗಳಿಗೆ ಸಮರ್ಪಣೆ' ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ್ತಿ ಶ್ರೇಯಾಂಕ ಪಾಟೀಲ ಫೈನಲ್ ಪಂದ್ಯದ ನಂತರ ಸುದ್ದಿಗಾರರೊಂದಿಗೆ ತಿಳಿಸಿದರು.

ಬೆಂಗಳೂರಿನಲ್ಲಿ ಸಂಭ್ರಮ

ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಡಬ್ಲ್ಯುಪಿಎಲ್ ಟ್ರೋಫಿ ಜಯಿಸುತ್ತಿದ್ದಂತೆ ಉದ್ಯಾನನಗರಿಯ ಬೀದಿಗಳಲ್ಲಿ ಸಂಭ್ರಮ ಗರಿಗೆದರಿತು. ಮಹಾತ್ಮಾ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಮಲ್ಲೇಶ್ವರಂ ಮತ್ತಿತರ ಪ್ರದೇಶಗಳಲ್ಲಿ ಆರ್‌ಸಿಬಿ..ಆರ್‌ಸಿಬಿ.. ಎಂಬ ಕೂಗು ಪ್ರತಿಧ್ವನಿಸಿತು.

ಟೂರ್ನಿಯಲ್ಲಿ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳು

ಬೌಲರ್	ತಂಡ	ವಿಕೆಟ್
ಶ್ರೇಯಾಂಕ ಪಾಟೀಲ	ಆರ್‌ಸಿಬಿ	13
ಆಶಾ ಶೋಭನಾ	ಆರ್‌ಸಿಬಿ	12
ಸೋಫಿ ಮಾಲಿನೊ	ಆರ್‌ಸಿಬಿ	12
ಮರಿಝಾನ್ ಕ್ಯಾಪ್	ಡೆಲ್ಲಿ ಕ್ಯಾಪಿಟಲ್ಸ್	11
ಸೋಫಿ ಎಕ್ಲೆಸ್ಟೋನ್	ಯುಪಿ ವಾರಿಯರ್ಸ್	11
ಜೆಸ್ ಯಾನ್ಸೆನ್	ಡೆಲ್ಲಿ ಕ್ಯಾಪಿಟಲ್ಸ್	11

ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು

ಬ್ಯಾಟರ್	ತಂಡ	ರನ್
ಎಲಿಸ್ ಪೆರಿ	ಆರ್‌ಸಿಬಿ	347
ಮೆಗ್ ಲ್ಯಾನಿಂಗ್	ಡೆಲ್ಲಿ ಕ್ಯಾಪಿಟಲ್ಸ್	331
ಸ್ಮೃತಿ ಮಂದಾನ	ಆರ್‌ಸಿಬಿ	300
ದೀಪ್ತಿ ಶರ್ಮಾ	ಯುಪಿ ವಾರಿಯರ್ಸ್	295
ಬೆತ್ ಮೂನಿ	ಗುಜರಾತ್ ಜೈಂಟ್ಸ್	285

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 113 (18.3 ಓವರ್‌ಗಳಲ್ಲಿ)
ಲ್ಯಾನಿಂಗ್ ಎಲ್‌ಬಿಡಬ್ಲ್ಯು ಬಿ ಶ್ರೇಯಾಂಕ 23 (23ಎ, 4X3)
ಶಫಾಲಿ ಸಿ ವೆರ್ಹಾಮ್ ಬಿ ಸೋಫಿ 44 (27ಎ, 4X2, 6X3)
ಜೆಮಿಮಾ ಬಿ ಸೋಫಿ 0 (2ಎ)
ಅಲೈಸ್ ಕ್ಯಾಪ್ಸಿ ಬಿ ಸೋಫಿ 0 (1ಎ)
ಮರಿಝಾನ್ ಸಿ ಡಿವೈನ್ ಬಿ ಆಶಾ 8 (16ಎ)
ಜೆಸ್ ಸಿ ಸ್ಮೃತಿ ಬಿ ಆಶಾ 3 (11ಎ)
ರಾಧಾ ರನ್‌ಔಟ್ (ಸೋಫಿ) 12 (9ಎ, 4X2)
ಮಿನು ಎಲ್‌ಬಿಡಬ್ಲ್ಯು ಬಿ ಶ್ರೇಯಾಂಕ 5 (3ಎ, 4X1)
ಅರುಂಧತಿ ಸಿ ಶ್ರೇಯಾಂಕ 10 (13ಎ)
ಶಿಖಾ ಔಟಾಗದೆ 5 (5ಎ)
ತಾನ್ಯಾ ಸಿ ರಿಚಾ ಬಿ ಶ್ರೇಯಾಂಕ 0 (1ಎ)
ಇತರೆ: 3 (ವೈಡ್ 3)
ವಿಕೆಟ್ ಪತನ: 1–64 (ಶಫಾಲಿ ವರ್ಮಾ 7.1), 2–64 (ಜೆಮಿಮಾ ರಾಡ್ರಿಗಸ್; 7.3), 3–64 (ಅಲೈಸ್ ಕ್ಯಾಪ್ಸಿ; 7.4), 4–74 (ಮೆಗ್ ಲ್ಯಾನಿಂಗ್; 10.4), 5–80 (ಮರಿಝಾನ್ ಕ್ಯಾಪ್; 13.1), 6–81 (ಜೆಸ್ ಯಾನ್ಸೆನ್; 13.3), 7–87 (ಮಿನು ಮಣಿ; 14.1), 8–101 (ರಾಧಾ ಯಾದವ್; 16.2), 9–113 (ಅರುಂಧತಿ ರೆಡ್ಡಿ; 18.2), 10–113 (ತಾನಿಯಾ ಭಾಟಿಯಾ; 18.3)
ಬೌಲಿಂಗ್: ರೇಣುಕಾ ಸಿಂಗ್ 2–0–28–0, ಸೋಫಿ ಮಾಲಿನೊ 4–0–20–3, ಎಲಿಸ್ ಪೆರಿ 2–0–14–0, ಸೋಫಿ ಡಿವೈನ್ 1–0–9–0, ಜಾರ್ಜಿಯಾ ವೆರ್ಹಾಮ್ 3–0–16–0, ಶ್ರೇಯಾಂಕ ಪಾಟೀಲ 3.3–0–12–4, ಆಶಾ ಶೋಭನಾ 3–0–14–2

ರಾಯಲ್ ಚಾಲೆಂಜರ್ಸ್ ಬೆಂಗಳೂರು 19.3 ಓವರ್‌ಗಳಲ್ಲಿ 115
ಮಂದಾನ ಸಿ ರೆಡ್ಡಿ ಬಿ ಮಣಿ 31 (39ಎ, 4x3)
ಸೋಫಿ ಎಲ್‌ಬಿಡಬ್ಲ್ಯು ಬಿ ಪಾಂಡೆ 32 (27ಎ, 4x5, 6x1)
ಎಲ್ಲಿಸ್ ಔಟಾಗದೆ 35 (37ಎ, 4x4)
ರಿಚಾ ಔಟಾಗದೆ 17 (14ಎ, 4x2)
ವಿಕೆಟ್ ಪತನ: 1-49 (ಸೋಫಿ ಡಿವೈನ್;8.1), 2-82 (ಸ್ಮೃತಿ ಮಂದಾನ;14.6)
ಬೌಲಿಂಗ್: ಮರಿಝಾನ್ ಕ್ಯಾಪ್ 4-0-20-0, ಅಲೈಸ್ ಕ್ಯಾಪ್ಸಿ 3-0-13-0, ಶಿಖಾ ಪಾಂಡೆ 4-0-11-1, ರಾಧಾ ಯಾದವ್ 1-0-18-0, ಅರುಂಧತಿ ರೆಡ್ಡಿ 3.3-0-26-0, ಜೆಸ್ ಯಾನ್ಸೆನ್ 2-0-15-0, ಮಿನು ಮಣಿ 2-0-12-1
ಪಂದ್ಯದ ಆಟಗಾರ್ತಿ: ಸೋಫಿ ಮಾಲಿನೊ, **ಸರಣಿಯ ಆಟಗಾರ್ತಿ:** ದೀಪ್ತಿ ಶರ್ಮಾ (ಯುಪಿ ವಾರಿಯರ್ಸ್)

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 8 ವಿಕೆಟ್ ಜಯ, ಪ್ರಶಸ್ತಿ

ಆಂಧ್ರದಲ್ಲಿ ನಡೆದ ಎನ್‌ಡಿಎ ರ್‍ಯಾಲಿಯಲ್ಲಿ ಮೋದಿ ಟೀಕೆ

'ಮಿತ್ರಪಕ್ಷಗಳ ಬಳಸಿ ಬಿಸಾಡುವ ಕಾಂಗ್ರೆಸ್'

ಅಮರಾವತಿ (ಪಿಟಿಐ): 'ಎನ್‌ಡಿಎ ಮೈತ್ರಿಕೂಟದಲ್ಲಿ ಎಲ್ಲಾ ಸದಸ್ಯಪಕ್ಷಗಳನ್ನು ಬಿಜೆಪಿಯು ತನ್ನೊಟ್ಟಿಗೆ ಕರೆದೊಯ್ಯುತ್ತದೆ. ಆದರೆ, ತನ್ನ ಮಿತ್ರಪಕ್ಷಗಳನ್ನು ಬಳಸಿಕೊಂಡು ಬಿಸಾಡುವುದು ಕಾಂಗ್ರೆಸ್‌ನ ಕಾರ್ಯಸೂಚಿ'

– ಹೀಗೆಂದು ಪ್ರಧಾನಿ ನರೇಂದ್ರ ಮೋದಿ ಅವರು ಆಂಧ್ರಪ್ರದೇಶದ ಪಲ್ನಾಡು ಜಿಲ್ಲೆಯ ಬೊಪ್ಪುಡಿ ಗ್ರಾಮದಲ್ಲಿ ಭಾನುವಾರ ಹೇಳಿದರು.



ಆಂಧ್ರಪ್ರದೇಶದ ಪಲ್ನಾಡುವಿನಲ್ಲಿ ನಡೆದ ಎನ್‌ಡಿಎ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ತನ್ನ ಮಿತ್ರಪಕ್ಷಗಳಾದ ಟಿಡಿಪಿ ಮತ್ತು ಜನಸೇನಾ ಜೊತೆ ಸೇರಿ ಬಿಜೆಪಿ ಇಲ್ಲಿ ನಡೆಸಿದ ಚುನಾವಣಾ ರ್‍ಯಾಲಿಯಲ್ಲಿ ಅವರು ಭಾಗಿಯಾಗಿದ್ದರು. ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರೂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯದ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ ಮತ್ತು ಕಾಂಗ್ರೆಸ್ ಎರಡೂ ಒಂದೇ ಹಾಗೂ ಕುಟುಂಬ ಸದಸ್ಯರಿಂದ ಮುನ್ನಡೆಸಲ್ಪಟ್ಟಿರುವ ಪಕ್ಷಗಳು ಎಂದು ಅವರು ಟೀಕಿಸಿದರು.

'ಇಂಡಿಯಾ' ಮೈತ್ರಿಕೂಟದ ಕುರಿತು ವಾಗ್ದಾಳಿ ನಡೆಸಿದ ಅವರು, 'ಪರಿಸ್ಥಿತಿಯ ಕಾರಣಕ್ಕಾಗಿ 'ಇಂಡಿಯಾ' ಮೈತ್ರಿಕೂಟವನ್ನು ಕಾಂಗ್ರೆಸ್ ರಚಿಸಿದೆ. ಮಿತ್ರಪಕ್ಷಗಳನ್ನು ಬಳಸಿಕೊಳ್ಳುವುದಷ್ಟೇ ಅದರ ಉದ್ದೇಶ' ಎಂದರು.

'ಕೇರಳದಲ್ಲಿ ಕಾಂಗ್ರೆಸ್ ಮತ್ತು ಎಡ ಪಕ್ಷವು ಪರಸ್ಪರ ಕೆಸರು ಎರಚಿಕೊಳ್ಳುತ್ತವೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಎಡಪಕ್ಷಗಳು ಪರಸ್ಪರ ವಾಗ್ವಾದ ಕ್ಕಿಳಿಯುತ್ತವೆ. ಪಂಜಾಬ್‌ನಲ್ಲಿ ಎಎಪಿ ಮತ್ತು ಕಾಂಗ್ರೆಸ್ ನಡುವೆ ಎಲ್ಲವೂ ಸರಿಯಿಲ್ಲ. ಚುನಾವಣೆ ಮುನ್ನವೇ ಹೀಗೆ ಕಿತ್ತಾಡುವ ಪಕ್ಷಗಳು ಚುನಾವಣೆ ಬಳಿಕ ಹೇಗೆ ವರ್ತಿಸುತ್ತವೆ ಎಂಬುದನ್ನು ನೀವೇ ಊಹಿಸಿ' ಎಂದು ಹೇಳಿದರು.

ಜಗನ್‌ಮೋಹನ್ ರೆಡ್ಡಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಭ್ರಷ್ಟಾಚಾರ ನಡೆಸಲು ರೆಡ್ಡಿ ಸಂಪುಟದ ಸಚಿವರ ಮಧ್ಯೆ ಸ್ಪರ್ಧೆ ಇದೆ' ಎಂದರು. ಆಂಧ್ರಪ್ರದೇಶದಲ್ಲಿ ವೈಎಸ್‌ಆರ್‌ಸಿಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಬೇರೆಬೇರೆ ಎಂದು ಭಾವಿಸುವ ತಪ್ಪು ಮಾಡಬೇಡಿ ಎಂದು ಜನರಿಗೆ ಮನವಿ ಮಾಡಿದರು.

'ಸಂವಿಧಾನ ಬದಲಿಸುವ ಧೈರ್ಯ ಇಲ್ಲ'

ನ್ಯಾಯ ಯಾತ್ರೆ ಸಮಾರೋಪದಲ್ಲಿ ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬೈ (ಪಿಟಿಐ): 'ಆರ್‌ಎಸ್‌ಎಸ್ ಮತ್ತು ಬಿಜೆಪಿಗೆ ಸಂವಿಧಾನ ಬದಲಿಸುವ ಧೈರ್ಯವಿಲ್ಲ. ಹಾಗಾಗಿ ಭಯಪಡುವ ಅಗತ್ಯವಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಮುಂಬೈನ ಕಾಂಗ್ರೆಸ್ ಹುಟ್ಟಿದ ಸ್ಥಳದಲ್ಲಿ ಹತ್ತು ಸಾವಿರ ಕಿಲೋ ಮೀಟರ್‌ಗೂ ಹೆಚ್ಚಿನ ದೂರದ, ಎರಡು ಹಂತದ 'ಭಾರತ ಜೋಡೊ ನ್ಯಾಯ ಯಾತ್ರೆ'ಯ ಸಮಾರೋಪದಲ್ಲಿ ಭಾನುವಾರ ಅವರು ಮಾತನಾಡಿದರು.



ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ, ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ಅವರೊಂದಿಗೆ ಮುಂಬೈನಲ್ಲಿ ಭಾನುವಾರ 'ನ್ಯಾಯ ಸಂಕಲ್ಪ ಪಾದಯಾತ್ರೆ' ನಡೆಸಿದರು

ಅಂಬೇಡ್ಕರ್ ಅವರ ಸಮಾಧಿ ಇರುವ ಚೈತ್ಯಭೂಮಿಗೆ ಶನಿವಾರ ಭೇಟಿ ನೀಡಿ ಸಂವಿಧಾನದ ಪ್ರಸ್ತಾವನೆ ಓದುವ ಮೂಲಕ ರಾಹುಲ್ ಗಾಂಧಿ ತಮ್ಮ ಭಾರತ್ ಜೋಡೊ ನ್ಯಾಯ ಯಾತ್ರೆಯನ್ನು ಅಂತ್ಯಗೊಳಿಸಿದ್ದರು.

ಸಮಾರೋಪವು ಗೋಕುಲ್‌ದಾಸ್ ತೇಜ್‌ಪಾಲ್ ಸಭಾಂಗಣದಲ್ಲಿ (ಹಿಂದಿನ ಗೋಕುಲ್‌ದಾಸ್ ತೇಜ್‌ಪಾಲ್ ಸಂಸ್ಕೃತ ಕಾಲೇಜ್) ನಡೆಯಿತು. 1985ರ ಡಿಸೆಂಬರ್ 28ರಂದು ಪತ್ರಕರ್ತರು, ವಕೀಲರು, ಸಮಾಜ ಸುಧಾರಕರು ಸೇರಿದಂತೆ 72 ಮಂದಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕಾಗಿ ಸೇರುವ ಮೂಲಕ ಇದೇ ಸ್ಥಳದಲ್ಲಿ ಕಾಂಗ್ರೆಸ್ ಪಕ್ಷ ಜನ್ಮ ತಾಳಿತ್ತು.

ತಮ್ಮ ಸಹೋದರಿ ಪ್ರಿಯಾಂಕಾ ಗಾಂಧಿ ಅವರ ಜೊತೆಗೂಡಿದ ರಾಹುಲ್ ಗಾಂಧಿ, 'ಪ್ರೀತಿ ಮತ್ತು ಗೌರವ ಭಾರತದ ಡಿಎನ್‌ಎನಲ್ಲಿಯೇ ಇವೆ. ಎರಡು ಹಂತದ ಯಾತ್ರೆಯಲ್ಲಿ ನಾನು ಕಂಡಿದ್ದು ಇದನ್ನೇ' ಎಂದು ಹೇಳಿದರು.

'ಸ್ವಾತಂತ್ರ್ಯಕ್ಕಾಗಿ ಪ್ರೀತಿಯಿಂದ ಹೋರಾಡಿದ ದೇಶ ಭಾರತ ಒಂದೇ. ಗಾಂಧೀಜಿ ಮತ್ತು ಭಾರತ ನಮಗೆ ಸ್ವಾತಂತ್ರ್ಯದ ಮಾರ್ಗವನ್ನು ತೋರಿದವು ಎಂದು ನಾನು ದಕ್ಷಿಣ ಆಫ್ರಿಕಾಗೆ ಹೋದಾಗ ನೆಲ್ಸನ್ ಮಂಡೇಲಾ ಹೇಳಿದ್ದರು' ಎಂದು ಅವರು ಸ್ಮರಿಸಿದರು.

'ದೇಶದಲ್ಲಿ ಕೆಲವು ಕೋಟ್ಯಧಿಪತಿಗಳ ಸಾಲ ಮನ್ನಾ ಮಾಡಲಾಯಿತು. ಆದರೆ, ರೈತರ ಒಂದು ಪೈಸೆ ಸಾಲವನ್ನೂ ಮನ್ನಾ ಮಾಡಲಿಲ್ಲ. ಒಂದು ಕಡೆ ಕೆಲವೇ ಜನ ದೇಶದ ಎಲ್ಲ ಸಂಪತ್ತಿನ ಒಡೆಯರಾಗಿದ್ದಾರೆ. ಮತ್ತೊಂದು ಕಡೆ, ಯುವ ಜನತೆಗೆ, ರೈತರಿಗೆ, ಕಾರ್ಮಿಕರಿಗೆ ಅನ್ಯಾಯ ಮಾಡಲಾಗಿದೆ' ಎಂದರು.

'ನಮ್ಮ ಗ್ಯಾರಂಟಿ ಹಿಂದೂಸ್ಥಾನದ ಧ್ವನಿಯಾಗಿದ್ದು, ಸಾಮಾನ್ಯ ಜನರೊಂದಿಗೆ ಒಡನಾಡಿ ನಾವು ಅದನ್ನು ರೂಪಿಸಿದ್ದೇವೆ. ಬಿಜೆಪಿ ಎಂದಿಗೂ ಇದನ್ನು ಮಾಡಲು ಸಾಧ್ಯವಿಲ್ಲ. ಅಲ್ಲಿ ಎಲ್ಲವೂ ಮೇಲಿನಿಂದ ಬರುತ್ತವೆ' ಎಂದು ಅವರು ಹೇಳಿದರು.

ಬಾಂಡ್‌ಗಳು ಬಿಜೆಪಿಯ 'ವೈಟ್ ಕಾಲರ್ ಭ್ರಷ್ಟಾಚಾರ': ಸ್ಟಾಲಿನ್

ಮುಂಬೈ (ಪಿಟಿಐ): ಚುನಾವಣಾ ಬಾಂಡ್‌ಗಳನ್ನು ಆಡಳಿತಾರೂಢ ಬಿಜೆಪಿಯ 'ವೈಟ್ ಕಾಲರ್ ಭ್ರಷ್ಟಾಚಾರ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಟೀಕಿಸಿದರು.

ಮುಂಬೈ ಶಿವಾಜಿ ಪಾರ್ಕ್‌ನಲ್ಲಿ ಭಾನುವಾರ ನಡೆದ 'ಇಂಡಿಯಾ' ಮೈತ್ರಿಕೂಟದ ರ್‍ಯಾಲಿಯಲ್ಲಿ ಅವರು ಮಾತನಾಡಿದರು.

'ಪ್ರಧಾನಿ ನರೇಂದ್ರ ಮೋದಿ ಅವರು 10 ವರ್ಷಗಳಲ್ಲಿ ಎರಡು ಕೆಲಸಗಳನ್ನು ಮಾತ್ರ ಮಾಡಿದ್ದಾರೆ. ಅವು, ವಿದೇಶ ಪ್ರವಾಸಗಳು ಮತ್ತು ನಕಲಿ ಪ್ರಚಾರ. ಅದನ್ನು ನಾವು ನಿಲ್ಲಿಸಬೇಕು' ಎಂದು ಅವರು ಹೇಳಿದರು.

ವಿರೋಧ ಪಕ್ಷಗಳು ತನ್ನ ಒಕ್ಕೂಟವನ್ನು 'ಇಂಡಿಯಾ' ಎಂದು ಹೆಸರಿಸಿದಾಗಿನಿಂದ ಬಿಜೆಪಿಯು 'ಇಂಡಿಯಾ' ಪದ ಬಳಸುವುದನ್ನೇ ನಿಲ್ಲಿಸಿದೆ ಎಂದು ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ದೂರಿದರು.

'ಶಿವಾಜಿ ಉದ್ಯಾನದಲ್ಲಿ ಇಂಡಿಯಾ ಸಮಾವೇಶ ಶಿವಸೇನಾಗೆ ಕಪ್ಪು ದಿನ'



ಏಕನಾಥ ಶಿಂದೆ

ಮುಂಬೈ (ಪಿಟಿಐ): ಇಲ್ಲಿನ ಶಿವಾಜಿ ಉದ್ಯಾನವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ 'ಇಂಡಿಯಾ' ಮೈತ್ರಿಕೂಟದ ಸಮಾವೇಶವು ಶಿವಸೇನಾ ಪಕ್ಷಕ್ಕೆ ಕಪ್ಪು ದಿನವಾಗಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದರು.

'ದೇಶವನ್ನು ಉದ್ದೇಶಿಸಿ ಭಾಷಣ ಮಾಡಲು ಬಾಳಾಸಾಹೇಬ್ ಠಾಕ್ರೆ ಅವರು ಶಿವಾಜಿ ಉದ್ಯಾನವನ್ನು ಬಳಕೆ ಮಾಡಿಕೊಳ್ಳುತ್ತಿದ್ದರು. ಆದರೆ, ಈಗ ಸಾವರ್ಕರ್ ಅವರನ್ನು ಅವಮಾನಿಸುವ ರಾಹುಲ್ ಗಾಂಧಿ ಅವರ ಜೊತೆಗೆ ಉದ್ಧವ್ ಠಾಕ್ರೆ ವೇದಿಕೆ ಹಂಚಿಕೊಂಡಿದ್ದಾರೆ. ಈ ಮೂಲಕ ಶಿವಸೇನಾ ಪಕ್ಷಕ್ಕೆ ಇದು ಕಪ್ಪು ದಿನವಾಗಿದೆ' ಎಂದು ಹೇಳಿದರು.

ಭಾರತ್ ಜೋಡೊ ನ್ಯಾಯಯಾತ್ರೆಯ ಸಮಾರೋಪ ಸಮಾರಂಭಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರು, ಛತ್ರಪತಿ ಶಿವಾಜಿ ಮಹಾರಾಜ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಅಲ್ಲದೆ, ಶಿವಸೇನಾ ಸಂಸ್ಥಾಪಕ ಬಾಳಾಠಾಕ್ರೆ ಸ್ಮಾರಕಕ್ಕೆ ಭೇಟಿ ನೀಡಿ, ಗೌರವ ನಮನ ಸಲ್ಲಿಸಿದರು.

ದ್ವೇಷ ಸಿದ್ಧಾಂತದ ವಿರುದ್ಧ ಹೋರಾಟ

ಮುಂಬೈ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ ಹೋರಾಟವು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ವಿರುದ್ಧ ವೈಯಕ್ತಿಕ ವಾದದ್ದಲ್ಲ, ಬದಲಿಗೆ ದ್ವೇಷ ಸಿದ್ಧಾಂತದ ವಿರುದ್ಧವಾದದ್ದು ಎಂದು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ನಾಯಕ ತೇಜಸ್ವಿ ಯಾದವ್ ಭಾನುವಾರ ತಿಳಿಸಿದರು.

ಶಿವಾಜಿ ಪಾರ್ಕ್‌ನಲ್ಲಿ ಮಾತನಾಡಿದ ಅವರು, ದೇಶದ ವೈವಿಧ್ಯ ಮತ್ತು ಸಹೋದರತ್ವವನ್ನು ರಕ್ಷಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

'ಮೋದಿ ಅವರು ಸುಳ್ಳಿನ ತಯಾರಕ, ಸಗಟು ವ್ಯಾಪಾರಿ ಮತ್ತು ವಿತರಕ. ಅದರೆ ಅವರಿಗೆ ನಮ್ಮಂತಹ ಸತ್ಯವಂತರು ಹೆದರುವುದಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

5 ವರ್ಷಗಳ ನೀಲನಕ್ಷೆಗೆ ಪ್ರಧಾನಿ ಸೂಚನೆ

ನವದೆಹಲಿ (ಪಿಟಿಐ): ಮುಂದಿನ ಅವಧಿಯ ಹೊಸ ಸರ್ಕಾರದ ಮೊದಲ 100 ದಿನಗಳು ಮತ್ತು ಐದು ವರ್ಷಗಳ ಕರಡು ನೀಲನಕ್ಷೆಯನ್ನು ರೂಪಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಚಿವರಿಗೆ ಸೂಚಿಸಿದರು.

ನೀಲನಕ್ಷೆ ರೂಪಿಸಲು ಕಾರ್ಯದರ್ಶಿಗಳನ್ನು ಮತ್ತು ಅಧಿಕಾರಿಗಳನ್ನು ಭೇಟಿಯಾಗುವಂತೆಯೂ ಅವರು ಸಂಪುಟ ಸಭೆಯಲ್ಲಿ ಸಲಹೆ ನೀಡಿದರು.

'ವಿಕಸಿತ ಭಾರತ: 2047' ರ ನೀಲನಕ್ಷೆಯ ಕುರಿತು ಪ್ರಧಾನಿ ಮತ್ತು ಸಚಿವರು ಮಾರ್ಚ್ 3ರಂದು ನಡೆದಿದ್ದ ಸಭೆಯಲ್ಲಿಯೂ ಚರ್ಚಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಭೂಪೇಶ್ ಬಘೇಲ್ ವಿರುದ್ಧ ಪ್ರಕರಣ

ರಾಯಪುರ (ಪಿಟಿಐ): ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಪ್ರಕರಣದ ಸಂಬಂಧ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಮುಖಂಡ ಭೂಪೇಶ್ ಬಘೇಲ್ ಮತ್ತು ಇತರರ ಮೇಲೆ ಪ್ರಕರಣ ದಾಖಲಾಗಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಛತ್ತೀಸಗಢದ ಆರ್ಥಿಕ ಅಪರಾಧಗಳ ವಿಭಾಗಕ್ಕೆ (ಇಒಡಬ್ಲ್ಯು) ವರದಿ ಸಲ್ಲಿಸಿದ್ದು, ಅದರ ಆಧಾರದ ಮೇಲೆ ಇಒಡಬ್ಲ್ಯು ಪೊಲೀಸ್ ಠಾಣೆಯಲ್ಲಿ ಮಾರ್ಚ್ 4ರಂದು ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಈ ಪ್ರಕರಣದಲ್ಲಿ ₹6000 ಕೋಟಿ ಅಕ್ರಮ ನಡೆದಿದೆ ಎಂದು ಇ.ಡಿ ಅಂದಾಜಿಸಿದೆ.

ಭೂಪೇಶ್ ಬಘೇಲ್, ಆ್ಯಪ್ ಪ್ರವರ್ತಕರಾದ ರವಿ ಉಪ್ಪಲ್, ಸೌರಭ್ ಚಂದ್ರಕರ್, ಶುಭಂ ಸೋನಿ, ಅನಿಲ್ ಕುಮಾರ್ ಅಗರ್ವಾಲ್ ಮತ್ತು ಇತರ 14 ಮಂದಿಯನ್ನು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ ಎಂದು ಹಿರಿಯ ಇಒಡಬ್ಲ್ಯು ಅಧಿಕಾರಿ ತಿಳಿಸಿದ್ದಾರೆ.

ಅರುಣಾಚಲ ನಮ್ಮದು: ಚೀನಾ

ಬೀಜಿಂಗ್ (ಪಿಟಿಐ): ಅರುಣಾಚಲ ಪ್ರದೇಶದ ಮೇಲಿನ ತನ್ನ ಹಕ್ಕನ್ನು ಪುನರುಚ್ಚರಿಸಿರುವ ಚೀನಾ ಮಿಲಿಟರಿಯು, ಈ ಪ್ರದೇಶವು ಚೀನಾದ ಅವಿಭಾಜ್ಯ ಅಂಗ ಎಂದು ಮತ್ತೆ ಪ್ರತಿಪಾದಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅರುಣಾಚಲ ಪ್ರದೇಶಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದಕ್ಕೆ ಬೀಜಿಂಗ್ ಆಕ್ಷೇಪ ವ್ಯಕ್ತಪಡಿಸಿತ್ತು. ಅದನ್ನು ಭಾರತ ತಿರಸ್ಕರಿಸಿತ್ತು. ಇದರ ಬೆನ್ನಲ್ಲೇ ಚೀನಾ ಮಿಲಿಟರಿ ಪ್ರತಿಕ್ರಿಯಿಸಿದೆ.

'ಝೂಂಗ್ನಾನ್‌ನ (ಟಿಬೆಟ್‌ಗೆ ಚೀನಾ ಇಟ್ಟಿರುವ ಹೆಸರು) ದಕ್ಷಿಣ ಭಾಗ (ಅರುಣಾಚಲ ಪ್ರದೇಶ) ಚೀನಾದ ಭೂ ಪ್ರದೇಶದ ಅವಿಭಾಜ್ಯ ಅಂಗ. ಅದನ್ನು ಭಾರತ ಅಕ್ರಮವಾಗಿ ತನ್ನದೆಂದು ಹೇಳುತ್ತಿದೆ. ಅದನ್ನು ಚೀನಾ ಎಂದಿಗೂ ಒಪ್ಪುವುದಿಲ್ಲ ಮತ್ತು ಬಲವಾಗಿ ವಿರೋಧಿಸುತ್ತದೆ' ಎಂದು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರ ಕರ್ನಲ್ ಜಾಂಗ್ ಕ್ಸಿಯೋಗಾಂಗ್ ಹೇಳಿದ್ದಾರೆ.

ಚೀನಾ ರಕ್ಷಣಾ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಲಾದ ವರದಿಯ ಪ್ರಕಾರ, ಅರುಣಾಚಲ ಪ್ರದೇಶದ ಸೆಲಾ ಸುರಂಗದ ಮೂಲಕ ಭಾರತವು ತನ್ನ ಸೇನಾ ಸನ್ನದ್ಧತೆಯನ್ನು ಹೆಚ್ಚಿಸಿದ್ದಕ್ಕೆ ಜಾಂಗ್ ಪ್ರತಿಕ್ರಿಯಿಸಿದ್ದಾರೆ.

ಅರುಣಾಚಲ ಪ್ರದೇಶವನ್ನು 'ದಕ್ಷಿಣ ಟಿಬೆಟ್' ಎಂದು ಚೀನಾ ಪ್ರತಿಪಾದಿಸುತ್ತದೆ. ಅಲ್ಲದೆ ಅಲ್ಲಿಗೆ ತನ್ನ ಹಕ್ಕುಗಳನ್ನು ಎತ್ತಿಹಿಡಿಲು ಭಾರತೀಯ ನಾಯಕರು ಭೇಟಿ ನೀಡಿದಾಗೆಲ್ಲ ಚೀನಾ ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ದಾಖಲಿಸುವುದನ್ನು ವಾಡಿಕೆ ಮಾಡಿಕೊಂಡಿದೆ.

ಭಾರತವು ಅರುಣಾಚಲ ಪ್ರದೇಶದ ಮೇಲೆ ಚೀನಾದ ಹಕ್ಕುಗಳನ್ನು ಪದೇ ಪದೇ ತಿರಸ್ಕರಿಸಿದೆ. ಅಲ್ಲದೆ ರಾಜ್ಯವು ದೇಶದ ಅವಿಭಾಜ್ಯ ಅಂಗ ಎಂದು ಪ್ರತಿಪಾದಿಸಿಕೊಂಡು ಬಂದಿದೆ. ಈ ಪ್ರದೇಶಕ್ಕೆ ಅನ್ಯ ಹೆಸರುಗಳನ್ನು ಇಡುವ ಬೀಜಿಂಗ್ ಕ್ರಮವನ್ನೂ ನವದೆಹಲಿ ವಿರೋಧಿಸಿದೆ. ಅಲ್ಲದೆ ಬೀಜಿಂಗ್‌ನ ಈ ವರ್ತನೆಗಳು ವಾಸ್ತವವನ್ನು ಬದಲಾಯಿಸುವುದಿಲ್ಲ ಎಂದೂ ಹೇಳಿದೆ.

ಗಾಯಕ ಸಿಧು ಮೂಸೆವಾಲಾ ಪೋಷಕರಿಗೆ ಗಂಡು ಮಗು

ಬಠಿಂಡಾ (ಪಿಟಿಐ): ಎರಡು ವರ್ಷಗಳ ಹಿಂದೆ ಹಂತಕರ ಗುಂಡಿಗೆ ಬಲಿಯಾದ ಪಂಜಾಬಿನ ಗಾಯಕ ಸಿಧು ಮೂಸೆವಾಲಾ (ಶುಭದೀಪ್ ಸಿಂಗ್ ಸಿಧು) ಅವರ ಪೋಷಕರಿಗೆ ಗಂಡು ಮಗುವಿನ ಜನನವಾಗಿದೆ.

ಮೂಸೆವಾಲಾ ಅವರ ತಂದೆ ಬಲಕೌರ್ ಸಿಂಗ್ ಅವರು ತಮ್ಮ ಫೇಸ್‌ಬುಕ್ ಪುಟದಲ್ಲಿ ನವಜಾತ ಶಿಶುವಿನ ಜನನವನ್ನು ಘೋಷಿಸಿದ್ದಾರೆ.

ಮೂಲಗಳ ಪ್ರಕಾರ, 60 ವರ್ಷದ ಬಲಕೌರ್ ಮತ್ತು 58 ವರ್ಷದ ಚರಣ್ ಕೌರ್ ಅವರು ಮಗುವನ್ನು ಪಡೆಯಲು ಐವಿಎಫ್ ಚಿಕಿತ್ಸೆ ಪಡೆದಿದ್ದರು.



ತನ್ನ ನವಜಾತ ಶಿಶುವಿನೊಂದಿಗೆ ಬಲಕೌರ್ ಸಿಂಗ್

'ಮೂಸೆವಾಲಾನ ಕಿರಿಯ ಸಹೋದರನ ಆಗಮನದಿಂದ ನಾನು ಮತ್ತು ನನ್ನ ಪತ್ನಿ ಚರಣ್ ಕೌರ್‌ಗೆ ಸಂತಸವಾಗಿದೆ' ಎಂದು ಅವರು ತಿಳಿಸಿದ್ದಾರೆ.

ಮ್ಯೂಸಿಕ್ ಅಕಾಡೆಮಿಯಿಂದ ಪ್ರಶಸ್ತಿ ಘೋಷಣೆ

ಟಿ.ಎಂ. ಕೃಷ್ಣಾಗೆ ಕಲಾನಿಧಿ ಪುರಸ್ಕಾರ

ಪ್ರಜಾವಾಣಿ ವಾರ್ತೆ/ಪಿಟಿಐ



ಟಿ.ಎಂ. ಕೃಷ್ಣಾ

ಚೆನ್ನೈ: ಪ್ರಖ್ಯಾತ ಕರ್ನಾಟಕ ಸಂಗೀತ ಕಲಾವಿದ ಮತ್ತು ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತ ಟಿ.ಎಂ. ಕೃಷ್ಣಾ ಅವರು ಮದ್ರಾಸ್‌ನಲ್ಲಿರುವ 'ದ ಮ್ಯೂಸಿಕ್ ಅಕಾಡೆಮಿ' ಕೊಡಮಾಡುವ ಪ್ರತಿಷ್ಠಿತ ಸಂಗೀತ ಕಲಾನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ ಘೋಷಿಸುವುದಕ್ಕೆ ಸಂಬಂಧಿಸಿದಂತೆ ಮದ್ರಾಸ್‌ನಲ್ಲಿ ಭಾನುವಾರ ನಡೆದ ಮ್ಯೂಸಿಕ್ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಟಿ.ಎಂ. ಕೃಷ್ಣಾ, ಪ್ರೊ. ಪರಸ್ಸಾಲ ರವಿ, ಗೀತಾ ರಾಜಾ ಮತ್ತು ತಿರುವೈಯಾರ್ ಸಹೋದರರಿಗೆ ಪುರಸ್ಕಾರಗಳನ್ನು ನೀಡಲು ನಿರ್ಧರಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮ್ಯೂಸಿಕ್ ಅಕಾಡೆಮಿ ಅಧ್ಯಕ್ಷ ಎನ್. ಮುರಳಿ, 'ಕೃಷ್ಣಾ ಅವರು ಸಮಾಜ ಸುಧಾರಣೆಗೆ ಸಂಗೀತವನ್ನು ಸಾಧನವನ್ನಾಗಿ ಬಳಸಿಕೊಂಡಿದ್ದಾರೆ. ಸಂಗೀತದ ಕುರಿತು ಅವರು ವಿಶ್ಲೇಷಣಾತ್ಮಕ ಕೃತಿಗಳನ್ನು ರಚಿಸಿದ್ದಾರೆ. ಸಂಗೀತ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕೊಡುಗೆಗಾಗಿ ಅವರಿಗೆ ಹಲವು ಪುರಸ್ಕಾರಗಳು ಬಂದಿವೆ' ಎಂದು ಹೇಳಿದರು.

ಹಾಡುಗಾರಿಕೆ ವಿಭಾಗದಲ್ಲಿ ಸೇಂಟ್ ಜೋಸೆಫ್ ಕಲಾ ಮತ್ತು ವಿಜ್ಞಾನ ಕಾಲೇಜಿನ (ಮಹಿಳೆ) ಪ್ರಾಂಶುಪಾಲರಾದ ಮಾರ್ಗರೇಟ್ ಬಾಸ್ಟಿನ್ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಸಂಗೀತ ವಿಭಾಗದಲ್ಲಿ ಪ್ರೊಫೆಸರ್ ಪರಸ್ಸಾಲ ರವಿ (ವಿ. ರವೀಂದ್ರನ್ ನಾಯರ್) ಮತ್ತು ಗೀತಾ ರಾಜಾ ಅವರಿಗೆ ಸಂಗೀತ ಕಲಾ ಆಚಾರ್ಯ ಪ್ರಶಸ್ತಿ ಘೋಷಿಸಲಾಗಿದೆ. ತಿರುವೈಯಾರ್ ಸಹೋದರರಾದ ಎಸ್. ನರಸಿಂಹನ್ ಮತ್ತು ಎಸ್. ವೆಂಕಟೇಶನ್ ಹಾಗೂ ಎಚ್.ಕೆ. ನರಸಿಂಹಮೂರ್ತಿ ಅವರು ಟಿಟಿಕೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

2024ರ ಡಿಸೆಂಬರ್ 15ರಿಂದ 2025ರ ಜನವರಿ 1ರ ನಡುವೆ ಹಮ್ಮಿಕೊಳ್ಳಲಾಗುವ ಅಕಾಡೆಮಿಯ 98ನೇ ವಾರ್ಷಿಕ ಸಮಾವೇಶ ಮತ್ತು ಸಂಗೀತ ಅಕಾಡೆಮಿಯ ಸಂಗೀತ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಲಾಗುತ್ತದೆ.

ಐಪಿಎಲ್ ಅಭ್ಯಾಸಕ್ಕೆ ಶೀಘ್ರ ಮರಳಲಿರುವ 'ರೆಡ್ ಕಿಂಗ್' • ಮಾರ್ಚ್ 22ರಿಂದ ಟೂರ್ನಿ

ಭಾರತಕ್ಕೆ ಬಂದಿಳಿದ ವಿರಾಟ್ ಕೊಹ್ಲಿ



ವಿರಾಟ್ ಕೊಹ್ಲಿ

ನವದೆಹಲಿ/ಹೈದರಾಬಾದ್ (ಪಿಟಿಐ): ಬ್ಯಾಟಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ ಭಾನುವಾರ ಇಂಗ್ಲೆಂಡ್‌ನಿಂದ ಭಾರತಕ್ಕೆ ಮರಳಿದ್ದಾರೆ. ಅವರು ಶೀಘ್ರದಲ್ಲಿಯೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೇರಿಕೊಳ್ಳಲಿದ್ದಾರೆ.

ಹೋದ ತಿಂಗಳು ನಡೆದ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಕೊಹ್ಲಿ ಅವರು 'ವೈಯಕ್ತಿಕ ಕಾರಣ'ಗಳಿಂದಾಗಿ ಆಡಿರಲಿಲ್ಲ. ಈಚೆಗಷ್ಟೇ ಇಂಗ್ಲೆಂಡ್‌ಆಸ್ಪತ್ರೆಯಲ್ಲಿ ಕೊಹ್ಲಿಯವರ ಪತ್ನಿ ಅನುಷ್ಕಾ ಶರ್ಮಾ ಅವರು ಗಂಡುಮಗುವಿಗೆ ಜನ್ಮ ನೀಡಿದ್ದರು. ಈ ಸಂದರ್ಭದಲ್ಲಿ ಕುಟುಂಬದೊಂದಿಗೆ ಇರಲು ಕೊಹ್ಲಿ 'ರಜೆ' ಪಡೆದಿದ್ದರು.

'ವಿರಾಟ್ ಕೊಹ್ಲಿ ಭಾರತಕ್ಕೆ ಮರಳಿದ್ದಾರೆ. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಕ್ಷಣಗಳು ಇವು. 'ರೆಡ್ ಕಿಂಗ್' ಐಪಿಎಲ್ ತಾರಾ ಅಭಿಯಾನ ಮುಂದುವರಿಸಲು ಸಿದ್ಧರಾಗಿದ್ದಾರೆ. ಮಾರ್ಚ್ 22ರಂದು ಆರ್‌ಸಿಬಿ ಮತ್ತು ಸಿಎಸ್‌ಕೆ ನಡುವಣ ಪಂದ್ಯ ಆಡಲು ಸಜ್ಜಾಗಿದ್ದಾರೆ. ವಿರಾಟ್ ಅವರನ್ನು ಹುರಿದುಂಬಿಸಲು ನೀವು ಸಿದ್ಧರಾಗಿ. ಕಿಂಗ್ಲಿ ಬೀಟ್ಸ್‌ಗಾಗಿ ಸಿದ್ಧರಾಗೋಣ' ಎಂದು ಟೂರ್ನಿಯ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ಎಕ್ಸ್‌ನಲ್ಲಿ ಸಂದೇಶ ಹಾಕಿದೆ.

ಭಾನುವಾರ ಅವರು ಮುಂಬೈಗೆ ಬಂದಿದ್ದಾರೆ. ಶೀಘ್ರದಲ್ಲಿಯೇ ಬೆಂಗಳೂರಿನಲ್ಲಿ ನಡೆಯುತ್ತಿರುವ ಆರ್‌ಸಿಬಿ ತರಬೇತಿ ಶಿಬಿರವನ್ನು ಸೇರಿಕೊಳ್ಳುವ ನಿರೀಕ್ಷೆ ಇದೆ. ಕಳೆದ ಹಲವು ವರ್ಷಗಳಿಂದ ವಿರಾಟ್ ಆರ್‌ಸಿಬಿ ತಂಡದಲ್ಲಿ ಆಡುತ್ತಿದ್ದಾರೆ. ಹೋದ ವರ್ಷದ ಆವೃತ್ತಿಯಲ್ಲಿ ಅವರು 639 ರನ್ ಗಳಿಸಿದ್ದರು.

ಸನ್‌ರೈಸರ್ಸ್‌ಗೆ ಹೆಡ್: ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ ಐಪಿಎಲ್‌ನಲ್ಲಿ ಆಡಲು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸೇರಿಕೊಂಡಿದ್ದಾರೆ. 30 ವರ್ಷದ ಹೆಡ್ ಹೋದ ವರ್ಷ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತದ ವಿರುದ್ಧ ಆಸ್ಟ್ರೇಲಿಯಾ ಜಯಿಸಲು ಕಾರಣರಾಗಿದ್ದರು. ಹೆಡ್ ಅವರು ಕಳೆದ ಆರು ವರ್ಷಗಳಿಂದ ಐಪಿಎಲ್‌ನಲ್ಲಿ ಆಡುತ್ತಿದ್ದಾರೆ.

'ಇಲ್ಲಿಗೆ ಬಂದಿಳಿದಿರುವುದಕ್ಕೆ ಅಪಾರ ಸಂತಸವಾಗುತ್ತಿದೆ. ಟೂರ್ನಿಯಲ್ಲಿ ಉತ್ತಮವಾಗಿ ಆಡುವ ವಿಶ್ವಾಸವಿದೆ. ನಮ್ಮ ತಂಡವು ಚೆನ್ನಾಗಿದೆ. ಒಂದಿಷ್ಟು ರನ್‌ಗಳನ್ನು ಕಾಣಿಕೆಯಾಗಿ ನೀಡುವ ವಿಶ್ವಾಸವಿದೆ' ಎಂದು ಹೆಡ್ ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ.

ಸನ್‌ರೈಸರ್ಸ್ ತಂಡವು 2016ರರಲ್ಲಿ ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಅವರ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ಈ ವರ್ಷ ಆಸ್ಟ್ರೇಲಿಯಾದವರೇ ಆದ ಪ್ಯಾಟ್ ಕಮಿನ್ಸ್ ಸನ್‌ರೈಸರ್ಸ್ ತಂಡವನ್ನು ಮುನ್ನಡೆಸಲಿದ್ದಾರೆ.

ಗಾಯದ ದಿನಗಳನ್ನು ನೆನೆದ ಪಾಂಡ್ಯ



ಮುಂಬೈ (ಪಿಟಿಐ): ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಗಾಯಗೊಂಡಿದ್ದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಈಗ ಐಪಿಎಲ್‌ನಲ್ಲಿ ಕಣಕ್ಕಿಳಿಯಲ್ಲಿದ್ದಾರೆ. ಈ ಬಾರಿ ಮುಂಬೈ ಇಂಡಿಯನ್ಸ್ ತಂಡವನ್ನು ಅವರು ಮುನ್ನಡೆಸಲಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಅವರ ಮುಂಗಾಲಿಗೆ ಗಾಯವಾಗಿತ್ತು. ನಂತರ ಅವರು ಟೂರ್ನಿಯಿಂದ ಹೊರನಡೆದಿದ್ದರು. ಶಸ್ತ್ರಚಿಕಿತ್ಸೆ, ಆರೈಕೆಗಳ ನಂತರ ಈಗ ಫಿಟ್ ಆಗಿದ್ದಾರೆ.

'ಬಹಳಷ್ಟು ನೋವು ಅನುಭವಿಸಿದೆ. ಮುಂಗಾಲಿಗೇ ಮೂರು ಚುಚ್ಚುಮದ್ದುಗಳನ್ನು ನೀಡಲಾಗುತ್ತಿತ್ತು. ಬಾವು ಇದ್ದ ಕಾರಣ ಗಾಯದಿಂದ ರಕ್ತವನ್ನು ಹೊರತೆಗೆದರು. ಆದರೆ ಯಾವುದೇ ಕಾರಣಕ್ಕೂ ನಾನು ಸೋಲು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಶೇ 1ರಷ್ಟು ಚೇತರಿಕೆ ಕಂಡಿದ್ದರೂ ವಿಶ್ವಕಪ್ ಟೂರ್ನಿಯಲ್ಲಿ ಆಟ ಮುಂದುವರಿಸಲು ಉತ್ಸುಕನಾಗಿದ್ದೆ. ತಂಡಕ್ಕಾಗಿ ಆಡುವ ಹಂಬಲ ಅದಮ್ಯವಾಗಿತ್ತು' ಎಂದು ಪಾಂಡ್ಯ ಸ್ಟಾರ್ ಸ್ಪೋರ್ಟ್ಸ್ ಸಂದರ್ಶನದಲ್ಲಿ ಹೇಳಿದ್ದಾರೆ.

'ಎಷ್ಟೇ ಪ್ರಯತ್ನಪಟ್ಟರೂ ಮೂರು ತಿಂಗಳವರೆಗೆ ಗಾಯವು ಕಾಡಿತು. ವಿಶ್ವಕಪ್‌ನಲ್ಲಿ ಪೂರ್ಣವಾಗಿ ಆಡಲು ಸಾಧ್ಯವಾಗಲಿಲ್ಲ. ಅದರ ನಿರಾಶೆಯ ಗಾಯವು ನನ್ನ ಹೃದಯದಲ್ಲಿ ಶಾಶ್ವತವಾಗಿರುತ್ತದೆ. ಏಕೆಂದರೆ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಸುಮಾರು ಒಂದು ವರ್ಷ ಪರಿಶ್ರಮಪಟ್ಟಿದ್ದೆ' ಎಂದರು.

ಕೋಲ್ಕತ್ತಕ್ಕೆ ಬಂದಿಳಿದ ಶ್ರೇಯಸ್ ಅಯ್ಯರ್



ಕೋಲ್ಕತ್ತ (ಪಿಟಿಐ): ಭಾರತ ತಂಡದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಐಪಿಎಲ್‌ನಲ್ಲಿ ಆಡಲಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಸೇರಿಕೊಂಡಿದ್ದಾರೆ. ಭಾನುವಾರ ಅವರು ನೆಟ್ಸ್‌ನಲ್ಲಿ ಅಭ್ಯಾಸ ಕೂಡ ಮಾಡಿದರು.

ಈ ಆವೃತ್ತಿಯಲ್ಲಿ ಅವರು ಕೋಲ್ಕತ್ತ ತಂಡವನ್ನು ಮುನ್ನಡೆಸಲಿದ್ದಾರೆ. ಈಚೆಗೆ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಮುಂಬೈ ತಂಡದಲ್ಲಿ ಅವರು ಆಡಿದ್ದರು. ಅದರಲ್ಲಿ ಕೊನೆಯ ಎರಡು ದಿನ ಅವರು ಬೆನ್ನುನೋವಿನಿಂದಾಗಿ ಫೀಲ್ಡಿಂಗ್ ಮಾಡಿರಲಿಲ್ಲ. ಆದ್ದರಿಂದ ಅವರು ಐಪಿಎಲ್‌ನಲ್ಲಿ ಆಡುವುದು ಅನುಮಾನವಿತ್ತು.

ಶನಿವಾರ ರಾತ್ರಿ ಶ್ರೇಯಸ್ ಅವರು ಕೋಲ್ಕತ್ತ ನಗರಕ್ಕೆ ಬಂದಿಳಿದ ಚಿತ್ರಗಳನ್ನು ನೈಟ್ ರೈಡರ್ಸ್ ತಂಡವು ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಹಾಕಿದೆ.

ಶ್ರೇಯಸ್ ಅವರು ಹೋದ ವರ್ಷದ ಏಪ್ರಿಲ್‌ನಲ್ಲಿ ಬೆನ್ನಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಪಡೆದಿದ್ದರು. ಅದರಿಂದಾಗಿ ಐಪಿಎಲ್‌ನಲ್ಲಿ ಆಡಿರಲಿಲ್ಲ. ಸೆಪ್ಟೆಂಬರ್‌ನಲ್ಲಿ ಕ್ರಿಕೆಟ್‌ಗೆ ಮರಳಿದ್ದರು. ಆದರೂ ಬೆನ್ನು ನೋವು ಮತ್ತೆ ಕಾಡಿತ್ತು. ನಂತರ ಚೇತರಿಸಿಕೊಂಡ ಅವರು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದರು.

ಈಚೆಗೆ ಇಂಗ್ಲೆಂಡ್ ವಿರುದ್ಧದ ಸರಣಿಯ ಎರಡು ಟೆಸ್ಟ್‌ಗಳಲ್ಲಿ ಆಡಿದ್ದರು. ಮತ್ತೆ ಬೆನ್ನುನೋವಿನ ಸಮಸ್ಯೆಯಿಂದ ಹೊರಗುಳಿದಿದ್ದರು. ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಕೂಡ ಆಡಿರಲಿಲ್ಲ.

ಈ ಬಾರಿ ಕೆಕೆಆರ್ ತಂಡವು ಇದೇ 23ರಂದು ತನ್ನ ಮೊದಲ ಪಂದ್ಯ ಆಡಲಿದೆ. ಈಡನ್ ಗಾರ್ಡನ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಸೆಮಿಯಲ್ಲಿ ಮುಗ್ಗರಿಸಿದ ಸೇನ್

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಭಾರತದ ಸವಾಲು ಅಂತ್ಯ



ಭಾರತದ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದರು. ಈ ಮೂಲಕ ಟೂರ್ನಿಯಲ್ಲಿ ಭಾರತ ಆಟಗಾರರ ಸವಾಲು ಅಂತ್ಯಗೊಂಡಿದೆ.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವು 23 ವರ್ಷಗಳಿಂದ ಪ್ರಶಸ್ತಿ ಬರವನ್ನು ಎದುರಿಸುತ್ತಿದೆ. ಪ್ರಕಾಶ್ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2001) ಅವರು ಮಾತ್ರ ಈ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ವಿಜೇತರಾಗಿದ್ದಾರೆ. ಈ ಬಾರಿಯೂ ಭಾರತಕ್ಕೆ ಪ್ರಶಸ್ತಿ ಕನಸಾಗಿಯೇ ಉಳಿಯಿತು.

ಶನಿವಾರ ತಡರಾತ್ರಿ ನಡೆದ ಅಂತಿಮ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ 22 ವರ್ಷದ ಸೇನ್ 21-12, 10-21, 15-21ರಿಂದ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರಿಗೆ ಶರಣಾದರು.

68 ನಿಮಿಷ ನಡೆದ ಹೋರಾಟದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಸೇನ್ ಅವರು ನಿಖರ ಆಟದ ಮೂಲಕ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದರು. ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿದ ವಿಶ್ವದ 9ನೇ ರ‍್ಯಾಂಕ್‌ನ ಆಟಗಾರ ಕ್ರಿಸ್ಟಿ ಅವರು ಸ್ಕೋರ್ ಸಮಬಲಗೊಳಿಸಿದರು. ನಿರ್ಣಾಯಕ ಗೇಮ್ ಆರಂಭ ರೋಚಕವಾಗಿತ್ತು. 3–3, 7–7ರ ಸಮ ಬಲದೊಂದಿಗೆ ಸಾಗಿದ ಹೋರಾಟದಲ್ಲಿ ಆಕರ್ಷಕ ಕ್ರಾಸ್ ಡ್ರಾಪ್, ಜಂಪ್ ಸ್ಮ್ಯಾಷ್‌ಗಳ ಮೂಲಕ ಮುನ್ನಡೆ ಪಡೆದ ಕ್ರಿಸ್ಟಿ ಫೈನಲ್‌ಗೆ ಲಗ್ಗೆ ಹಾಕಿದರು. ಅವರು ಫೈನಲ್‌ನಲ್ಲಿ ಸ್ವದೇಶದ ಆ್ಯಂಟನಿ ಸಿನಿಸುಕ್ ಗಿಂಟಿಂಗ್ ಅವರನ್ನು ಎದುರಿಸುವರು.

'ಪಂದ್ಯವನ್ನು ಗೆಲ್ಲುವ ಅವಕಾಶ ಇತ್ತು. ಆದರೆ, ನನ್ನ ಕೆಲವೊಂದು ತಪ್ಪುಗಳು ದುಬಾರಿಯಾದವು. ಈ ಫಲಿತಾಂಶದಿಂದ ತುಂಬಾ ನಿರಾಸೆಯಾಗಿದೆ' ಎಂದು ಪಂದ್ಯದ ಬಳಿಕ ಸೇನ್ ಪ್ರತಿಕ್ರಿಯಿಸಿದರು.

ಉತ್ತಮ ಲಯದಲ್ಲಿರುವ ಸೇನ್ ಕಳೆದ ವಾರ ಫ್ರೆಂಚ್ ಓಪನ್ ಸೂಪರ್ 750 ಟೂರ್ನಿಯಲ್ಲೂ ಸೆಮಿಫೈನಲ್ ಪ್ರವೇಶಿಸಿದ್ದರು. ಇಲ್ಲಿ 2022ರ ಆವೃತ್ತಿಯಲ್ಲಿ ರನ್ನರ್ಸ್ ಅಪ್ ಆಗಿದ್ದ ಅವರು, ಈ ಬಾರಿ ಸೆಮಿಫೈನಲ್ ಹಂತದ ಓಟದಲ್ಲಿ ತನಗಿಂತ ಮೇಲಿನ ಕ್ರಮಾಂಕದ ಆಟಗಾರರಿಗೆ ಆಘಾತ ನೀಡಿದ್ದರು.

ಸತತ ಎರಡು ಟೂರ್ನಿಗಳಲ್ಲಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದ ಸೇನ್ ಏಪ್ರಿಲ್ ಅಂತ್ಯದ ವೇಳೆ ಪ್ರಕಟ ವಾಗುವ ಬಿಡಬ್ಲ್ಯುಎಫ್ ರ‍್ಯಾಂಕಿಂಗ್‌ನಲ್ಲಿ ಬಡ್ತಿ ಪಡೆಯಲಿದ್ದಾರೆ. ಹೀಗಾಗಿ, ಮುಂದಿನ ಪ್ಯಾರಿಸ್ ಒಲಿಂಪಿಕ್ಸ್ ಟಿಕೆಟ್ ದೊರೆಯುವ ಸಾಧ್ಯತೆ ಹೆಚ್ಚಿದೆ.

ಒಲಿಂಪಿಕ್ಸ್ ಸಿದ್ಧತೆಯಲ್ಲಿ ಭಾರತ ಪುರುಷರ ಹಾಕಿ ತಂಡ

ಗೋಲ್‌ಕೀಪರ್‌ಗಳಿಗೆ ಡೆನಿಸ್ ತರಬೇತಿ

ನವದೆಹಲಿ (ಪಿಟಿಐ): ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ತಯಾರಿಯಲ್ಲಿರುವ ಭಾರತ ಪುರುಷರ ಹಾಕಿ ತಂಡಕ್ಕೆ ಡಚ್ ಗೋಲ್‌ಕೀಪಿಂಗ್ ಪರಿಣತ ಡೆನಿಸ್ ವ್ಯಾನ್ ಡಿ ಪೋಲ್ ಮಾರ್ಗದರ್ಶನ ನೀಡುತ್ತಿದ್ದಾರೆ.

ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ತರಬೇತಿ ಶಿಬಿರವನ್ನು 45 ವರ್ಷದ ಡೆನಿಸ್ ಸೇರಿಕೊಂಡಿದ್ದಾರೆ. ಅವರು ಭಾರತ ತಂಡದ ಗೋಲ್‌ಕೀಪರ್‌ಗಳಾದ ಪಿ.ಆರ್. ಶ್ರೀಜೇಶ್, ಕ್ರಿಶನ್ ಪಾಠಕ್ ಮತ್ತು ಸೂರಜ್ ಕರ್ಕೇರ ಅವರಿಗೆ ತರಬೇತಿ ನೀಡುವರು.

ತಂಡದ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಅವರ ಮೇಲ್ವಿಚಾರಣೆಯಲ್ಲಿ 10 ದಿನಗಳ ವಿಶೇಷ ಗೋಲ್‌ಕೀಪಿಂಗ್ ಶಿಬಿರವು ಮಾರ್ಚ್ 26ರಂದು ಕೊನೆಗೊಳ್ಳಲಿದೆ. ನಂತರ ತಂಡವು ಆಸ್ಟ್ರೇಲಿಯಾ ಪ್ರವಾಸ ಹೊರಡಲಿದೆ.

'ಭಾರತದ ಪುರುಷರ ಹಾಕಿ ತಂಡಕ್ಕೆ ಇದು ಅತ್ಯಂತ ಪ್ರಮುಖ ಹಂತ ಗಿದೆ. ಒಲಿಂಪಿಕ್ಸ್‌ನಲ್ಲಿ ಮತ್ತೊಂದು ಪದಕದ ನಿರೀಕ್ಷೆಯಲ್ಲಿರುವ ತಂಡಕ್ಕೆ ಹಾಕಿ ಇಂಡಿಯಾವು ಎಲ್ಲಾ ಬೆಂಬಲವನ್ನು ಒದಗಿಸುತ್ತದೆ. ಈ ವಿಶೇಷ ತರಬೇತಿಯಲ್ಲಿ ಗೋಲ್ ಕೀಪಿಂಗ್ ಮತ್ತು ಡ್ರ್ಯಾಗ್ ಫ್ಲಿಕ್ಕಿಂಗ್ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದೇವೆ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನಾಲ್ಕು ವರ್ಷಗಳಿಂದ ಭಾರತದ ಗೋಲ್‌ಕೀಪರ್ ಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿರುವ ಡೆನಿಸ್ ಅವರನ್ನು ತಂಡದೊಂದಿಗೆ ತೊಡಗಿಸಿಕೊಳ್ಳಲು ನಾವು ಸಂತೋಷ ಪಡುತ್ತೇವೆ. ಆಟಗಾರರ ಕಾರ್ಯಕ್ಷಮತೆ ಹೆಚ್ಚಿಸಲು ಅವರಿಂದ ಸಲಹೆ ಪಡೆಯುತ್ತೇವೆ' ಎಂದು ಹೇಳಿದ್ದಾರೆ.

ಕಳೆದ ವರ್ಷ ಜುಲೈ ಮತ್ತು ಸೆಪ್ಟೆಂಬರ್ ನಲ್ಲಿ ಏಷ್ಯನ್ ಕ್ರೀಡಾಕೂಟಕ್ಕೆ ಮುನ್ನ ಡೆನಿಸ್ ಭಾರತ ತಂಡದೊಂದಿಗೆ ಎರಡು ವಿಶೇಷ ಶಿಬಿರಗಳನ್ನು ನಡೆಸಿದ್ದರು.

ಟ್ರಯಲ್ಸ್: ದೀಪಿಕಾಗೆ ಅಗ್ರಸ್ಥಾನ

ಸೋನಿಪತ್ (ಪಿಟಿಐ): ತಾಯಿಯಾದ ನಂತರ ಕಳೆದ ವರ್ಷ ಇಡೀ ಋತುವನ್ನು ಕಳೆದುಕೊಂಡಿದ್ದ ವಿಶ್ವದ ಮಾಜಿ ನಂಬರ್ ಒನ್ ಆರ್ಚರಿ ಪಟು ದೀಪಿಕಾ ಕುಮಾರಿ ಅವರು ಮುಂಬರುವ ವಿಶ್ವಕಪ್ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ಇಲ್ಲಿ ನಡೆಯುತ್ತಿರುವ ಆಯ್ಕೆ ಟ್ರಯಲ್ಸ್‌ನಲ್ಲಿ ಅಗ್ರಸ್ಥಾನ ಪಡೆದರು. ಫೆಬ್ರುವರಿಯಲ್ಲಿ ಏಷ್ಯಾ ಕಪ್‌ನ ಬಾಗ್ದಾದ್ ಲೆಗ್‌ನಲ್ಲಿ ಅವರು ಎರಡು ಚಿನ್ನ ಗೆದ್ದಿದ್ದರು.

10 ಸಾವಿರ ಮೀ: ಗುಲ್ವೀರ್ ರಾಷ್ಟ್ರೀಯ ದಾಖಲೆ



ನವದೆಹಲಿ (ಪಿಟಿಐ): ಭಾರತದ ಅಥ್ಲೀಟ್ ಗುಲ್ವೀರ್ ಸಿಂಗ್ ಅವರು ಕ್ಯಾಲಿಫೋರ್ನಿಯಾದಲ್ಲಿ ನಡೆದ ಪುರುಷರ 10 ಸಾವಿರ ಮೀಟರ್ ಓಟದಲ್ಲಿ 16 ವರ್ಷಗಳ ಹಿಂದಿನ ರಾಷ್ಟ್ರೀಯ ದಾಖಲೆಯನ್ನು ಮುರಿದು, ಬೆಳ್ಳಿ ಪದಕ ಗೆದ್ದರು. ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ವಿಜೇತರಾಗಿದ್ದರು.

ಶನಿವಾರ ನಡೆದ ಸ್ಪರ್ಧೆಯಲ್ಲಿ 25 ವರ್ಷದ ಗುಲ್ವೀರ್ ಅವರು 27 ನಿಮಿಷ 41.81 ಸೆಕೆಂಟ್‌ನಲ್ಲಿ ಗುರಿ ತಲುಪಿದರು. ಈ ಮೂಲಕ 2008ರಲ್ಲಿ ಸುರೇಂದ್ರ ಸಿಂಗ್ (28 ನಿ.2.89 ಸೆ.) ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ಗುಲ್ವೀರ್ ಅವರ ಈ ಪ್ರಯತ್ನವು ಒಲಿಂಪಿಕ್ ಅರ್ಹತೆ ಗಳಿಸಲು ಸಾಕಾಗಲಿಲ್ಲ. ಪ್ಯಾರಿಸ್ ಕ್ರೀಡಾಕೂಟದ ಅರ್ಹತಾ ಸಮಯವನ್ನು (27 ನಿಮಿಷ) ತಲುಪಲು ಅವರಿಗೆ ಸಾಧ್ಯವಾಗಲಿಲ್ಲ.

ಭಾರತದ ಮತ್ತೊಬ್ಬ ಅಥ್ಲೀಟ್ ಕಾರ್ತಿಕ್ ಕುಮಾರ್ (28 ನಿ. 1.90 ಸೆ) ಒಂಬತ್ತನೇ ಸ್ಥಾನ ಪಡೆದರು. ಅವರು ಓಟವೂ ಹಿಂದಿನ ರಾಷ್ಟ್ರೀಯ ದಾಖಲೆಗಿಂತ ಉತ್ತಮವಾಗಿತ್ತು. ಅದೇ ಸ್ಪರ್ಧೆಯಲ್ಲಿದ್ದ ಭಾರತದ ಅವಿನಾಶ್ ಸಾಬ್ಲೆ ಅವರು 15ನೇ ಲ್ಯಾಪ್‌ನಲ್ಲಿ 6 ಸಾವಿರ ಮೀ ಮಾರ್ಕ್‌ನಲ್ಲಿ ರೇಸ್‌ನಿಂದ ಹೊರಗುಳಿದರು.